ಕರ್ಮವೀರ

ಹುಬ್ಬಳ್ಳಿ ತಾ. ೨೧—೬—೪

ಸಂಪುಟ ೨೦] [ಸಂಚಿಕೆ

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ
ಬಿ. ಎ.

ಸಂಸ್ಥಾಪಕರು— ನಿರ್ದೇಶಕರು:
ರಂ. ರಾ. ದಿವಾಕರ
ಘಟನಾ ಸಮಿತಿ ಸದಸ್ಯರು



ಮೌಂಟಬ್ಯಾಟನ್ ದಂಪತಿಗಳು

ಭಾರತದಲ್ಲಿ ೧೫೦ ವರ್ಷಗಳವರೆಗೆ "ಬಿಳಿಯರು ಹೊತ್ತ ಹೊರೆ" ಯನ್ನು ಕಿತ್ತೊಗೆದು ಹಿಂದೀಯರ ಬಾಯಿಂದ "ಜೈ" ಅನಿಸಿಕೊಂಡ ಪರಾಧೀನ ಭಾರತದ ಏಕಮಾತ್ರ ವೈಸರಾಯ, ಸ್ವತಂತ್ರ ಭಾರತದ ಪ್ರಥಮ ಗವರ್ನರ ಜನರಲ್ ಮೌಂಟಬ್ಯಾಟನ್ನರಿಗೆ ಸುಖಪ್ರಯಾಣ-ವಾಗಲಿ !

ಬಹುಮುಖ ಪ್ರತಿಭೆಯ ಮೌಂಟಬ್ಯಾಟನ್

(ವ್ಯಕ್ತಿ ಪರಿಚಯ) — ಪುಟ ೫.

KARMAVEER : Kannada Illustrated Weekly, HUBLI

ಚಿಕ್ಕಕತೆ

ಅಪರಾಧಿ ಯಾರು*

— ಪಿ. ವೆಂಕೋಬಾಚಾರ್ಯ, ಬಿ. ಎ., ಬಿ. ಟಿ.

ಪಾಶ್ಚಾತ್ಯ ದೇಶಗಳಲ್ಲಿ ಅವಿವಾಹಿತ ಸ್ತ್ರೀಯು ಯುವತಿಯನ್ನು ಶ್ರೀಮಂತರ ಮನೆಯಲ್ಲಿ ಕೆಲಸಕ್ಕೆ ಇಟ್ಟುಕೊಳ್ಳುವ ರೀತಿ ಸಹಜ ಸಮ್ಮತವಾದುದು. ಆದರೆ ಅನೇಕ ಸಲ ಇಂತಹ ಸ್ತ್ರೀಯರ ಮಾನಾಪಹರಣವಾಗದಂತೆ ಅವರು ಸುರಕ್ಷಿತರಾಗಿಯುಳಿಯುವದು ವಿರಳ. ಶ್ರೀಮಂತರ ದೌರ್ಜನ್ಯಕ್ಕೆ ಬಲಿಯಾಗಿ ಅನೇಕ ಯುವತಿಯರ ದುಃಖದಾಯಕ ನಿದರ್ಶನಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ. ಇದೇ ಬಗೆಯ ಅನ್ಯಾಯಕ್ಕೆ ಬಲಿಯಾದ ಯುವತಿಯೊಬ್ಬಳ ಆತ್ಮಕಥೆ ಇದು.

ಅವಳು ಸ್ಫುರದ್ರೂಪಿ, ಯುವತಿ, ಅವಿವಾಹಿತಳು. ಶ್ರೀಮಂತರ ಮನೆಯಲ್ಲಿ ಕೆಲಸ ಮಾಡಿ, ಕೆಲ ಕಾಲದ ನಂತರ ತಕ್ಕವರನನ್ನು ಮದುವೆಯಾಗುವುದಕ್ಕಾಗಿ, ಹಣ ಗಳಿಸುವ ಹೇತುವಿನಿಂದ ಕೆಲಸಕ್ಕೆ ನಿಂತಳು. ಮಾನವು ಮರ್ಯಾದೆಗಳನ್ನರಿತ ಸುಶಿಕ್ಷಿತ ಹೆಣ್ಣು. ಮನೆಕೆಲಸಗಳನ್ನೆಲ್ಲ ಹೆಚ್ಚು ದಕ್ಷತೆಯಿಂದ ಮಾಡುವ ಸ್ವಭಾವದವಳು. ಇಂಥವಳು ತಮ್ಮಲ್ಲಿರುವಳಲ್ಲ ಎಂಬ ಹೆಮ್ಮೆ ಶ್ರೀಮಂತರದಾಗಿದ್ದಿತು.

* * *

ಅಂದು ಅದೇ ಯುವತಿ ನ್ಯಾಯಾಧೀಶರ ಮುಂದೆ ತನ್ನ ಮಗುವನ್ನು ಕೊಲೆ ಮಾಡಿದ ಅಪರಾಧಕ್ಕಾಗಿ, ವಿಚಾರಣೆಗೆಂದು ನಿಂತಿರುವಳು. ಮದುವೆಯಾಗದೇ ಅವಳು ಗರ್ಭಿಣಿಯಾದುದು ಹೇಗೆ? ನ್ಯಾಯಸ್ಥಾನದಲ್ಲಿ ಅಪರಾಧಿಯಾಗಿ ಅವಳು ತಲೆ ಬಾಗಿ ನಿಂತಿರುವಳು. ಮತ್ತೊಂದು ಮೂಲೆಯಲ್ಲಿ ಅವಳು ಕೆಲಸಕ್ಕೆ ನಿಂತ ಶ್ರೀಮಂತರ ಮನೆಯವರು ಕುಳಿತಿರುವರು. ಜನರು ಈ ವಿವರಗಳನ್ನು ತಿಳಿಯುವ ಕುತೂಹಲದಿಂದ ಕಾದಿರುವರು. ನೋಡುವವರಿಗೆ ಸ್ಪಷ್ಟವಾದರೂ ಆ ಯುವತಿಯು ದುಃಖದಿಂದ ನಿಂತಿರುವ ಕರುಣಾಜನಕ ನೋಟ ಎಂಥವರ ಮನಸ್ಸನ್ನೂ ಕರಗಿಸುವಂತಿತ್ತು. ಶ್ರೀಮಂತರ ಮನೆಯ ತೋಟದಲ್ಲಿ ಹಸುಗೂಸು ಮಗುವನ್ನು ಕೊಂದ ಅಪರಾಧದ ವಿವರಗಳೇನೆಂದು ನ್ಯಾಯಾಧಿಪತಿಯು ಕೇಳಿದಾಗ, ಅವಳು ಮಾತುಗಳನ್ನಾಡಲಾರದೇ ಅಳಹತ್ತಿದಳು. ಅವಳ ಈ ಅಳು, ಕೃತ್ರಿಮವಲ್ಲವೆಂಬುವುದು ನ್ಯಾಯಾಧೀಶನ ಮನಸ್ಸಿಗೆ ಮಾತ್ರವೇ ಹೊಳೆದಿದ್ದಿತು. ಎಲ್ಲ ಸಾಕ್ಷ್ಯ ನಿದರ್ಶನಗಳೂ ಅವಳೇ ಕೊಲೆಮಾಡಿರುವಳೆಂಬುವುದನ್ನು ನಿರ್ಧರಿಸುತ್ತಿದ್ದವು. ಆದರೂ ಅವಳ ಆತ್ಮ ಚರಿತ್ರೆಯ ಹೆಚ್ಚಿನ ವಿವರಗಳನ್ನು ತಿಳಿದ ಹೊರತು ತಮ್ಮ ತೀರ್ಮಾನವನ್ನು ಹೇಳುವುದಿಲ್ಲವೆಂದು ಸೂಚಿಸಿ, ಅವಳ ಪ್ರೇಮ ವ್ಯಾಪಾರದ ವಿವರಗಳನ್ನು ಹೇಳಬೇಕೆಂದು ನ್ಯಾಯಾಧೀಶ ಒತ್ತಾಯ ಪಡಿಸಿದನು.

ನಡುಗುವ ತುಟಿಗಳಿಂದ ಆ ಯುವತಿ ಯಾವ ಮಾತನ್ನೂ ಆಡದೇ ತಾನು ಕೆಲಸಕ್ಕೆ ನಿಂತ ಶ್ರೀಮಂತರ ಕಡೆ ಒಂದು ಸಲ ಭಯಪೂರಿತ ನೋಟವನ್ನು ಬೀರಿ ಸುಮ್ಮನಾದಳು. ಇದರ ಇಂಗಿತವನ್ನರಿತ ನ್ಯಾಯಾಧೀಶನು ತನ್ನ ಮಾತನ್ನು ಮುಂದುವರಿಸುತ್ತ "ಅದೇಕೆ ಅವರ ಕಡೆ ನೋಡಿ, ಭಯದಿಂದ ಸುಮ್ಮನಾಗುವೆ? ಈ ವ್ಯವಹಾರದ ಬಗ್ಗೆ ಎಲ್ಲ ವಿವರಗಳನ್ನೂ ನೀನು ಹೇಳಲೇಬೇಕು. ನೀನು ಭಯಪಡಬೇಕಾಗಿಲ್ಲ" ಎಂದು ಸೂಚಿಸಿದನು.

ಆದಾಗ್ಯೂ ಆ ಯುವತಿಯು ಮಾತನಾಡಲಿಲ್ಲ. ನಿಂತಲ್ಲಿಂದಲೇ ಬಾಗಿಸಿದ ತಲೆಯನ್ನೆತ್ತಲಿಲ್ಲ. ಏನನ್ನೋ ಹೇಳಹೋಗಿ, ದುಃಖ ತುಂಬಿ ಬರಲು ಎರಡೂ ಕೈಗಳಿಂದ ತನ್ನ ಮುಖವನ್ನು ಮುಚ್ಚಿಕೊಂಡು ಹುಡುಗಿಯಂತೆ ಅಳತೊಡಗಿದಳು.

ನ್ಯಾಯಾಧೀಶನು ಬಹಳ ಕುಶಲನು. ಹೆತ್ತ ತಾಯಿಯ ದುಃಖವನ್ನು ಇವಳಲ್ಲಿ ಕಾಣುವ ಸೂಕ್ಷ್ಮದೃಷ್ಟಿ ಅವನಿಗಿತ್ತು. ಇವಳ ದುಃಖ ಯಾವುದೋ ಪ್ರಬಲವಾದ ವಿಷಾಂಶವನ್ನು ಮುಚ್ಚಿಡುವಂತೆ ಮಾಡುತ್ತಿದೆಯೆಂದು ಇವನ ಮನಸ್ಸಿಗೆ ಹೊಳೆದಿದ್ದಿತು. ಅದನ್ನು ಅವಳ ಬಾಯಿಂದಲೇ ನುಡಿಸಬೇಕೆಂಬ ನೆವದಿಂದ ಅವಳನ್ನುದ್ದೇಶಿಸಿ, "ನೀನು ಸುಮ್ಮನೇ ಅತ್ತರೆ ಪ್ರಯೋಜನವಿಲ್ಲ. ಎಲ್ಲವನ್ನೂ ಹೇಳಿದೆಯಾದರೆ, ನಿನ್ನ ದೋಷ ನಿರ್ಧಾರವಾದರೂ, ನಾವು ನಿನ್ನನ್ನು ಕ್ಷಮಿಸಬಹುದು. ಅಧೀರಳಾಗಬೇಡ. ಸರಿಯಾದ ನ್ಯಾಯ ನಿನಗಿಲ್ಲಿ ಖಂಡಿತ ದೊರೆಯುವುದು. ಕೊಲೆಯಾದ ಆ ಹುಡುಗನ ತಂದೆಯಾರು?" ಎಂದು ಕೇಳಿದನು.

ಸ್ವಲ್ಪ ಧೈರ್ಯದಿಂದ ಬಾಗಿದ ತಲೆಯನ್ನು ಮೆಲ್ಲನೆ ಎತ್ತಿ, ಆ ಮೂಲೆಯಲ್ಲಿ ಕುಳಿತಿದ್ದ ಶ್ರೀಮಂತ ದಂಪತಿಗಳ ಕಡೆ ಕೈ ತೋರಿಸಿ, "ಆ ಕೂಸಿನ ತಂದೆ, ನನ್ನ ಯಜಮಾನರ ತಮ್ಮ" ಎಂದು ಹೇಳಿ ಉಕ್ಕಿ ಬರುವ ದುಃಖವನ್ನು ತಡೆಯಲಾರದೆ, ಅಳತೊಡಗಿದಳು.

"ಸುಳ್ಳು, ಸುಳ್ಳು, ಇದರಲ್ಲೇನೋ ಮೋಸವಿದೆ. ನಮ್ಮ ಮನೆತನದ ಮೇಲೆ ತಪ್ಪನ್ನು ಹಾಕುವಳೇ ಹೊರತು ಇದು ನಿಜವಲ್ಲ" ಎಂದು ಆ ಶ್ರೀಮಂತನ ಹೆಂಡತಿ ಗರ್ಜಿಸಿದಳು.

"ವಿಚಾರಣೆ ನಡೆಯುವಾಗ ಯಾರೂ ನಡುವೆ ಮಾತನಾಡಬಾರದು. ನಿನಗೆ ಭಯವಿಲ್ಲ; ನಿಜವನ್ನು ಹೇಳು. ನಡೆದ ವಿಷಯವನ್ನೆಲ್ಲ ವಿವರಿಸು" ಎಂದು ಅಭಯವಿತ್ತ ನ್ಯಾಯಾಧೀಶನ ಮಾತುಗಳು ಅವಳಿಗೆ ಹೆಚ್ಚು ಧೈರ್ಯವನ್ನು ತಂದುಕೊಟ್ಟವು.

"ಆತನೀಗ ಎಲ್ಲಿರುವನು?" ಎಂದು ನ್ಯಾಯಾಧೀಶನು ಮತ್ತೆ ಕೇಳಿದನು.

ಅಪರಾಧಿ ತನ್ನ ಮಾತನ್ನು ಮುಂದುವರಿಸಿದಳು: "ಅವನೀಗ ಸೈನ್ಯದಲ್ಲಿ ದೊಡ್ಡ ಕೆಲಸದಲ್ಲಿರುವನು. ಬೇಸಗೆಯ ರಜೆಗೆಂದು ಹೋದ ವರುಷ ಇಲ್ಲಿ ಎರಡು ತಿಂಗಳಿದ್ದನು. ಮನೆಯ ಕೆಲಸದಲ್ಲಿ ನಾನು ತೊಡಗಿದ್ದಾಗ ಅವನು ಅನೇಕ ಸಲ ನನ್ನ ಕಡೆಗೆ ಮೊದಮೊದಲು ದಿಟ್ಟಿಸಿ ನೋಡತೊಡಗಿದನು. ಮುಗುದೆಯಾದ ನನಗೆ ಅದರ ಅರ್ಥವಾಗಲಿಲ್ಲ. ಮನೆಯಲ್ಲಿ ಗಂಡಸರ ಸಂಪರ್ಕವಿಲ್ಲದೆ ಬೆಳೆದ ನನಗೆ ಅವನ ವರ್ತನೆಯಲ್ಲಿ ಸೋದರ ಪ್ರೇಮವಿದೆಯೆಂದು ಭಾವಿಸಿದೆ. ನಿರ್ಗತಿಕಳಾದ ನನ್ನಲ್ಲಿ ಅಭಿಮಾನ ತೋರುವ ದಯೆಯು ಮಾದರಿಯದೆಂದು ನೆನೆದೆ. ದಿನಗಳು ಕಳೆದಂತೆಲ್ಲ ಹೆಚ್ಚಿನ ಸಲುಗೆಯಿಂದ ಅವನೊಂದಿಗೆ ಮಾತನಾಡುವುದೆಂದರೆ ಮನಸ್ಸಿಗೆ ಒಂದು ಬಗೆಯ ಆನಂದವನ್ನುಂಟುಮಾಡುತ್ತಿತ್ತು. ನನ್ನವರಾರೂ ಇಲ್ಲದೆ ಬೆಳೆದ ನನ್ನ ಏಕಾಂತಜೀವನಕ್ಕೆ ಇವನ ನೆರವು, ಇವನ ಮಾತುಗಳು, ಪ್ರೀತಿಯ ವಚನಗಳ ಮರೆಯಲ್ಲಿ ಕಾಮುಕ ವ್ಯಾಪಾರವಿದೆಯೆಂದು ತೋರಿಬರಲಿಲ್ಲ. ದೊಡ್ಡ ಮನೆತನದವನು ನನ್ನನ್ನು ಅವಮಾನಗೊಳಿಸುವ ನೀಚ ಕೆಲಸಕ್ಕೆ ಕೈಹಾಕುವನೆಂದು ನೆನೆಯಲಿಲ್ಲ. ಮನೆಯವರಿಗೆ ತಿಳಿಸಿದರೆ, ನನ್ನ ಮೇಲೆ ತಪ್ಪು ಹಾಕಿ, ನನ್ನನ್ನು ಕೆಲಸದಿಂದ ದೂಡಿದರೆ ಆಗುವ ಕಷ್ಟದ ಕಲ್ಪನೆಯಿಂದ ಸುಮ್ಮನಿದ್ದೆ. ನನ್ನ ಆಪ್ತ ಬಂಧುವಿನಂತೆ ವರ್ತಿಸುವ ಇವನ ಚರ್ಯೆ, ಮಾತಿನ ಸ್ಪಷ್ಟತೆಗೆ ನಾನು ಮೋಸ ಹೋದೆ.

"ಒಂದು ದಿನ ಸಂಜೆ ನದಿಯ ದಡದಲ್ಲಿ ನಾನು ಆವನನ್ನು ಕಾಣಬೇಕೆಂದು ಒತ್ತಾಯ ಪಡಿಸಿದ. ಅಲ್ಲಿಗೆ ಹೋದೆ. ನನ್ನನ್ನು ಕಂಡೊಡನೆ ಹತ್ತರ ಬರಮಾಡಿಕೊಂಡು ಅಪ್ಪಿಕೊಂಡ. ಅವನ ಪ್ರೇಮಪಾಶದಲ್ಲಿ ಸಿಕ್ಕಿಬಿದ್ದ ನನಗೆ ಆಡುವುದಕ್ಕೆ ಮಾತೇ ಬಾರದಂತಾಯಿತು. ಭಯದ ನೋಟದಿಂದ ಅವನನ್ನೇ ದಿಟ್ಟಿಸಿ ನೋಡಿದೆ ಅಂದವನು ನನಗೆ ಆಡಿದ ಪ್ರೀತಿಯ ಮಾತುಗಳು, ತೋರಿದ ಆಶೆ, ಇತ್ತ ಅಭಯ ವಚನಗಳನ್ನು ಇಲ್ಲಿ ವಿವರಿಸಿದರೆ ಜನರು ಸುಳ್ಳೆನ್ನಬಹುದು. ಅಂತಹ ಸ್ಥಿತಿಯಲ್ಲಿ ನಾನು ಸುಲಭವಾಗಿ ಅವನಿಗೊಳಗಾದೆ. ನನ್ನನ್ನು ಮದುವೆಯಾಗುವೆನೆಂದು ನಿಶ್ಚಿತ ವಚನವನ್ನಿತ್ತ. ತಾನು ಮರಳಿ ಕೆಲಸಕ್ಕೆ ಹೋದನಂತರ, ಮನೆಮಾಡಿ ಕರೆಯಿಸಿಕೊಳ್ಳುವೆನೆಂದು ಹೇಳಿದ ನಮ್ಮ ಪ್ರೇಮ ವ್ಯವಹಾರ ಮುಂದೆ ಒಂದು ತಿಂಗಳು ನಡೆಯಿತು. ಮನೆಯವರಿಗೆ ಇದನ್ನು ತಿಳಿಸುವುದು ಉಚಿತವೆಂದು ನಾನು ಸೂಚಿಸಿದೆ. ಸದ್ಯದಲ್ಲಿ ಬೇಡವೆಂದು ತಡೆದ ಅವನ ಮರುಳು ಮಾತುಗಳಿಗೆ ಬೆರಗಾಗಿ ಸಮ್ಮನಾದೆ. ರಜೆ ಮುಗಿದ ನಂತರ ಅವನು ಕೆಲಸಕ್ಕೆಂದು ಹೊರಟುಹೋದ. ತಿಂಗಳೆರಡಾದರೂ, ಮದುವೆಯ ಬಗ್ಗೆ, ನನ್ನನ್ನು ಕರೆಯಿಸಿ ಕೊಳ್ಳುವ ವಿಷಯದ ಬಗ್ಗೆ ಪತ್ರಗಳು ಬರಲೇ ಇಲ್ಲ.

"ಮುಂದೆರಡು ತಿಂಗಳು ಕಳೆದ ನಂತರ ನಾನು ಗರ್ಭಿಣಿ ಎಂಬುದು ನನಗೆ ತಿಳಿಯಿತು. ನನ್ನ ದುಃಖವು ಇಮ್ಮಡಿಸಿತು. ಇದನ್ನು ತಿಳಿದರೆ ನನ್ನ ಕೆಲಸ ಹೋಗಿ, ಜೀವಿಸುವ ವಿಧಾನವು ಹೇಗೆ ಎಂದು ಮನದೊಳಗೇ ಕೊರಗಿದೆ. ಮುಂದೆ...." ಎಂದು ಹೇಳಲು ಮಾತು ಬಾರದೆ ಮುಖ ಮುಚ್ಚಿಕೊಂಡಳು. ಹೃದಯ ಬಿಚ್ಚಾಗುವ ಸಂಕಟಗಳನ್ನು ತಡೆಯಲು ಮಾತು ಬಾರದೆ ಸುಮ್ಮನಾದಳು.

"ಆಗುವುದೇನು? ಸರ್ವನಾಶ! ಯಾತನೆಯ ಜೀವನ; ನಿಜವನ್ನು ಮುಚ್ಚಿಡಲು ಸುಳ್ಳು ಪ್ರಯತ್ನ. ತಪ್ಪುದುರು ಸಾಕ್ಷಿಯನ್ನಿತ್ತ ಮಂತ್ರಸಾನಿಯನ್ನು ಬೇಡಿದೆ. ಮನೆಯವರಿಗೆ ತಿಳಿಯದಂತೆ ಬಹು ಎಚ್ಚರದಿಂದ ಇರತೊಡಗಿದೆ. ಸುದೈವದಿಂದ ಮನೆಯ ಯಜಮಾನರಿಬ್ಬರೂ ಮನೆಯ ಕೆಲಸಕ್ಕೆಂದು ಅವರು ಹಳ್ಳಿಗೆ ಹೋಗಿ ಅಲ್ಲಿಯೇ ನಿಂತು ಬಿಟ್ಟರು. ಇದೊಂದು ದೇವರು ದಯಪಾಲಿಸಿದ ಕೃಪೆಯೆಂದು ಸಮಾಧಾನಹೊಂದಿದೆ. ಅಂತೂ ಯಾತನೆಯಲ್ಲಿ ಕಾಲಕಳೆದೆ. ಹಡೆಯುವ ದಿನಗಳು ಸಮೀಪಿಸಿದಂತೆಲ್ಲ ಬಹು ಎಚ್ಚರದಿಂದ ಇರತೊಡಗಿದೆ. ಮಗು ಜನನವಾದರೆ ಅದರ ಆರೈಕೆಗೆಂದು ಅನೇಕ ಸಾಮಾನುಗಳನ್ನು ಜತೆ ಮಾಡಿದೆ. ಚಿಕ್ಕ ಪುಟ್ಟ ಬಟ್ಟೆ ಬರೆಗಳನ್ನು ಹೊಲಿದು ಇಟ್ಟುಕೊಂಡೆ. ಬಟ್ಟೆ ಅಂಗಡಿಯವನ ಸಾಕ್ಷಿಯಿಂದ ಇದು ನಿರ್ಧಾರವಾಗುವುದು. ಮಿತವ್ಯಯದಿಂದ ಕಾಲಹರಣಮಾಡಿ, ಮುಂದೆ ಮನೆಯವರು ನನ್ನನ್ನು ಕೆಲಸದಿಂದ ತೆಗೆದು ಹಾಕಿದರೆ ಅನುಕೂಲವಾಗುವದೆಂದು ಹಣವನ್ನು ಕೂಡಿಹಾಕಿದೆ. ಬಾನಬಯಲಿನಲ್ಲಿ, ನನ್ನ ಬಡಹೊಟ್ಟೆಯಿಂದ ಬರುವ ಆ ನನ್ನ ಮುದ್ದು ಕಂದಮ್ಮನ ಜೋಪಾನಕ್ಕೆಂದು ಸರ್ವ ಸಿದ್ಧತೆಯನ್ನೂ ಮಾಡಿಕೊಂಡೆ."

"ಆದರೆ ಮಗುವನ್ನೇತಕ್ಕೆ ಕೊಂದು ಬಿಟ್ಟೆ?"

ಅವಳು ಮೌನದಿಂದ ಸುಮ್ಮನಿದ್ದಳು.

"ಮಗುವನ್ನು ಕೊಲ್ಲುವ ಇಚ್ಛೆ ನಿನಗಿರಲಿಲ್ಲವೆ?"

"ಹೆತ್ತ ತಾಯಿಯ ಹೃದಯವನ್ನರಿಯುವ ಸೂಕ್ಷ್ಮ ಬುದ್ಧಿಯುಳ್ಳ ನಿಮಗೆ ನಾನು ಬೇರೆ ಹೇಳಬೇಕಾಗಿಲ್ಲ."

"ಮುಂದೇನಾಯಿತು?"

"ಒಂದು ದಿನ ರಾತ್ರಿ ಕೆಲಸದಿಂದ ಮನೆಗೆ ಹಿಂತಿರುಗಬೇಕೆಂದು ನೆನೆದಾಗ ಹಡೆಯುವ ಬೇನೆ ಆರಂಭವಾದಂತೆನಿಸಿತು. ಮಾಳಿಗೆಯ ಮೇಲೊಂದು ಕೋಣೆಯಲ್ಲಿ, ನನಗಾಗಿ ಮನೆಯವರು ಏರ್ಪಡಿಸಿದುದು, ಎಲ್ಲವನ್ನೂ ವ್ಯವಸ್ಥೆ ಮಾಡಿಕೊಂಡಿದ್ದೆ. ಪ್ರಸವವೇದನೆ ನನಗೆ ಹೊಸದಾದುದರಿಂದ ಸ್ವಲ್ಪ ಕಷ್ಟವೆನಿಸಿತು. ಮಂತ್ರಸಾನಿಯು ಹೇಳಿದ ಕ್ರಮದಂತೆ ನಡೆದುಕೊಂಡೆ. ಸುಖಪ್ರಸವದಿಂದ ಗಂಡುಮಗು ಜನನವಾಯಿತು. ಮನದೊಳಗೆ ಆನಂದವಾಯಿತು. ಮಗುವನ್ನೆತ್ತಿ ಮಾಡುವ ವಿಧಾನವೆಲ್ಲವನ್ನೂ ನಾನೇ ಮಾಡಿ ಹಾಸಿಗೆಯ ಮೇಲೆ ಮಗಲಿಸಿದೆ. ಹೊಟ್ಟೆ ನೋವು ಅಲ್ಲಿಗೆ ನಿಲ್ಲಲಿಲ್ಲ. ಮತ್ತೆ ಹೆಚ್ಚಿನ ವೇಗದಿಂದ ಬೇನೆ ಆರಂಭವಾಯಿತು. ಮತ್ತೊಂದು ಗಂಡು ಮಗು ಜನಿಸಿತು. ಎರಡನೆಯ ಮಗುವನ್ನು ನನ್ನ ಬಿಳಿಯ ಹಾಸಿಗೆಯ ಮೇಲೆ ಮೊದಲ ಕೂಸಿನ ಮಗ್ಗುಲಲ್ಲಿ ಮಲಗಿಸಿದೆ. ನಂತರ ಕೋಣೆಯೆಲ್ಲವನ್ನೂ ಸ್ವಚ್ಛಪಡಿಸಿದೆ.

"ನಿರ್ಗತಿಕಗಳಾದ ನಾನು ಎರಡು ಮಕ್ಕಳ ತಾಯಿ! ನನ್ನ ಸಂಬಳದಿಂದ ಒಬ್ಬರ ಜೀವನ ನಡೆಸಲು ಅಸಾಧ್ಯವೆನಿಸಿದಾಗ, ಈ ಅವಳಿ ಕಂದಮ್ಮಗಳ ಆರೈಕೆ! ಇಂತಹ ಬಡವಳಲ್ಲಿ ಇವುಗಳು ಸುಖದ ಬಾಳನ್ನು ಕಾಣಬಹುದೆ? ಮುಂದೆ ಜೀವಿಸಿದರೂ ಯಾರ ಹೆಸರನ್ನು ಹೇಳಿ ಜೀವಿಸಬೇಕು? ತಂದೆಯಾರು? ತಂದೆ ಯೆಂಬುವನೊಬ್ಬನಿದ್ದರೂ ಅವನು ಇವರು ತನ್ನವರೆಂದು ಒಪ್ಪಿಕೊಳ್ಳುವನೇ? ನಾನು ಬರೆದ ಪತ್ರಗಳಿಗೆ ಅವನು ತಾಳಿದ ಮೌನದಿಂದ ಈ ಬಾಲಕರು ಅನಾಥರಾಗಿ ಬಾಳಬೇಕೆ? ಬಡತನದಲ್ಲಿ ಬೆಳೆದು, ತಂದೆಯಾರೆಂದು ತಿಳಿಯದಲೆ, ತಮ್ಮ ತಾಯಿ ಕೆಟ್ಟ ನಡತೆಯವಳೆಂದು ತಿಳಿದರೆ, ಮಕ್ಕಳಿಗೆ ತನ್ನಲ್ಲಿ ಪ್ರೀತಿ ಇರುವುದೆ? ಅದೇನೇ ಇರಲಿ. ಸದ್ಯ ಇವರನ್ನು ಆರೈಸುವ ವಿಧಾನವೆಂತು? ಇದೇ ಬಗೆಯ ಪ್ರಶ್ನೆಗಳು ನನ್ನನ್ನು ಹುಚ್ಚಳಂತೆ ಮಾಡಿತು; ದುಃಖವು ಹೆಚ್ಚಿತು. ದಣುವಿನಿಂದ ಮೈಯಲ್ಲಿ ಎಚ್ಚರವಿರಲಿಲ್ಲ. ನಾನೇನು ಮಾಡುವೆನೆಂಬ ಕಲ್ಪನೆಯೇ ನನಗಿರಲಿಲ್ಲ.

ಹಾಸಿಗೆಯ ಮೇಲೆ ಮಲಗಿ ನಿದ್ರಿಸುವ ಆ ಕಂದಮ್ಮಗಳನ್ನು ನೋಡಿದೆ. ಎದೆ ದಸ್ಸೆಂದಿತು. ಪಕ್ಕದಲ್ಲಿದ್ದ ತಲೆದಿಂಬನ್ನು ಆ ಹುಡುಗರ ಮೇಲೆಸೆದು ನಾನೂ ಆವೇಶದಲ್ಲಿ ಆ ದಿಂಬಿನ ಮೇಲೆ ಎಚ್ಚರ ತಪ್ಪಿ ಬಿದ್ದುಬಿಟ್ಟೆ. ಅದುವೆ ನನ್ನ ನೆನಪು. ಎಚ್ಚರವಿಲ್ಲದ ನಿದ್ರೆ ಹೋಗಿದ್ದೆ. ನಸುಕಿನಲ್ಲಿ ಎದ್ದು, ನೋಡಲು ಅವುಗಳು ಸಾವಿನ ಉಡಿಯಲ್ಲಿ ಪೂರ್ಣ ನಿದ್ರೆಯಲ್ಲಿದ್ದವು. ನನ್ನ ಈ ಪಾಪಕೃತ್ಯ ನಿರ್ಮಲನಾದ ಸೂರ್ಯನಿಗೆ ತಿಳಿಯಬಾರದೆಂದು, ತೋಟದಲ್ಲಿಯೇ ಕುಣಿಗಳನ್ನಗಿದು ಅವರನ್ನು ಹೂಳಬೇಕಾಯಿತು. ಹೂಳಿಡುವ ಕೆಲಸ ಬಹಳ ದಣುವನ್ನುಂಟು ಮಾಡಿತು.

"ಆಯಾಸದಿಂದ ಅಂದು ಜ್ವರ ತಲೆದೋರಿತು. ಎಚ್ಚರವಿಲ್ಲದೆ ಏನೇನೋ ಕನವರಿಸಿದೆ. ಅಡಿಗೆಯವಳು ಬಂದು ಇದೆಲ್ಲವನ್ನೂ ಕಂಡು, ಡಾಕ್ಟರಳನ್ನು ಕರೆಯಿಸಿ ವಿಚಾರ ಮಾಡಲಾಗಿ, ಎಲ್ಲವೂ ಹೊರಬಿದ್ದಿತು. ಮಾರನೆಯ ದಿನ ಮನೆಯವರು ಬಂದರು. ಮುಂದಿನ ವಿಷಯ..." ಎಂದು ನುಡಿದು ಸುಮ್ಮನಾದಳು. ಮೊದಲಿಗೆ ತನ್ನ ಕರುಣಕತೆಯನ್ನು ಹೇಳಲು ಭಯಗೊಂಡ ಇವಳ ಮುಖವು ಈಗ ನಿರ್ಭಯದ ಮುದ್ರೆಯನ್ನು ತಾಳಿತ್ತು. ದುಃಖದ ಛಾಯೆ ಮಾಯವಾಗಿತ್ತು. ನಿಜವನ್ನು ಹೇಳಿದೆನಲ್ಲವೆಂಬ ಆತ್ಮಸಂತುಷ್ಟಿಯ ಹೊಳಪು ಒಡೆದು ಕಾಣುತ್ತಿತ್ತು.

"ಎರಡನೆಯ ಮಗುವನ್ನೆಲ್ಲಿ ಹೂಳಿಟ್ಟರುವಿ?"

"ನಿಮಗೆ ದೊರಕಿದ ಮಗುವೆಲ್ಲಿಯದು?"

"ಒಂದು ಗಿಡದ ಬುಡದಲ್ಲಿ"

"ಎರಡನೆಯ ಮಗುವನ್ನು ನಾನು ದಿನವೂ ಮಲಗುವ ಕೋಣೆಯ ಕಿಟಕಿಯ ಕೆಳಗೆ ಗಿಡಬಳ್ಳಿಗಳ ಮರೆಯಲ್ಲಿ..." ಎಂದು ಹೇಳುವಾಗ ಅಳುವನ್ನು ತಡೆಯುವ ಅವಳ ಯತ್ನ ಕೈಮೀರಿದಂತೆನಿಸಿತು. ಅವಳ ತುಟಿಗಳೆರಡೂ ಅದುರಿದವು. ಯಾತನೆಯ ಭಾವಗಳು ಉದ್ರೇಕಗೊಂಡು ಅವಳು ಮತ್ತೆ ಕೈಗಳಿಂದ ಮುಖಮುಚ್ಚಿಕೊಂಡು ಅಳತೊಡಗಿದಳು.

ಈ ವಿಚಾರಣೆಯನ್ನು ನ್ಯಾಯಾಧೀಶನು ಸಮಾರೋಪಿಸುತ್ತ, ಜೂರಿಯವರ ಅಭಿಪ್ರಾಯವೂ ತನ್ನ ನಿರ್ಣಯದಂತೆ ಏಕೀಭವಿಸಿದುದರಿಂದ, ಅಪರಾಧಿಯು ನಿರ್ದೋಷಿಯೆಂದು ನಿರ್ಣಯವನ್ನು ಹೇಳಿ, ನೀಚರೂ, ಕಾಮುಕರೂ, ಹಣದ ಲಾಲಸೆಯಲ್ಲಿ ಬಡಜನರ ಮಾನಾಪಮಾನಗಳ ಕಡೆ ಲಕ್ಷವಿರದ ಶ್ರೀಮಂತರ ವರ್ತನೆಯನ್ನು ಖಂಡಿಸುತ್ತ, ಇವಳನ್ನು ಇಂತಹ ಯಾತನೆಗೆ ಗುರಿಮಾಡಿದ ಆ ಯುವಕನಿಗೆ ಶಿಕ್ಷೆ ವಿಧಿಸುವ ಕ್ರಮ ನಡೆಯಬೇಕೆಂದು ಸೂಚಿಸಿದನು. ಇವಳ ದುಃಖಮಯಕತೆಯನ್ನು ಕೇಳಿ ಊರಿಗೆ ಊರೇ ಮರುಗಿತು.

* ಗಾಯ ಡಿ ಮೊಪಾಸನ ಒಂದು ಕತೆಯ ಆಧಾರದಿಂದ

● ಅಮೇರಿಕೆಯಲ್ಲಿ ಕುಮಾರಿ ಜಾಕೆಲ ಕೊಚ್ರನ್ನಳು ೧೨೫೦ ಮೈಲು ದೂರವನ್ನು ತಾಸಿಗೆ ೪೪೩ ಮೈಲಿನಂತೆ ವಿಮಾನೋಡ್ಡಾಣ ಮಾಡಿ, ಲೆ. ಹ್ಯಾನ್‌ಕಾಕನೆಂಬವನು ಸ್ಥಾಪಿಸಿದ ತಾಸಿಗೆ ೪೪೦ ಮೈಲ ಹಾರಾಟದ ವಿಕ್ರಮವನ್ನು ಮುರಿದಳು.

ದೇಶಾಂತರಗಳಿಂದ

ಫ್ರೆಂಚ ಹಿಂದುಸ್ಥಾನದ ಭವಿಷ್ಯ

ಫ್ರೆಂಚ್ ಹಿಂದುಸ್ತಾನದ ಫ್ರೆಂಚ ಪ್ರಜಾರಾಜ್ಯದ ಗವರ್ನರರೂ ಕಮಿಶನರರೂ ಆದ ಬ್ಯಾರನ್ನರು ಕಳೆದ ೯ ರಲ್ಲಿ ಫ್ರೆಂಚ್ ಹಿಂದುಸ್ತಾನ ಪ್ರತಿನಿಧಿ ಸಭೆಯ ವಿಶೇಷ ಅಧಿವೇಶನವನ್ನು ಪಾಂಡಿಚೆರಿಯಲ್ಲಿ ಕೂಡಿಸಿ ಫ್ರೆಂಚ ಹಿಂದುಸ್ತಾನದ ಭವಿತವ್ಯವನ್ನು ಕುರಿತು ಫ್ರಾನ್ಸಿನ ಘೋಷಣೆಯನ್ನು ಪ್ರಕಟಿಸಿದರು.

ತಮ್ಮ ಭವಿತವ್ಯ ಮತ್ತು ಭಾವೀ ಸ್ಥಾನಮಾನವನ್ನು ನಿರ್ಣಯಿಸಿಕೊಳ್ಳುವ ಹಕ್ಕನ್ನು ಫ್ರೆಂಚ ಹಿಂದುಸ್ತಾನ ಪ್ರದೇಶಗಳಲ್ಲಿಯ ಜನರಿಗೆ ಬಿಟ್ಟುಕೊಡಲಾಗುವುದು. ಪ್ರತಿಯೊಂದು ಪ್ರದೇಶದ ಲೋಕನಿಯುಕ್ತ ನಗರಸಭೆಗಳೊಂದಿಗೆ ಸ್ವತಂತ್ರವಾಗಿ ವಿಚಾರ ಮಾಡಿ ಈ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು. ಈ ವಿಚಾರವಿನಿಮಯದ ಫಲಿತಾಂಶವು ಐದೂ ಪ್ರದೇಶಗಳಿಗೆ ಪ್ರತ್ಯೇಕವಾಗಿ ಕ್ರಮಬದ್ಧವಾಗುವುದು ಎಂದಲ್ಲದೆ, ಜನರೂ ಹಿಂದುಸ್ತಾನ ಸರಕಾರದವರೂ ಈ ತೊಡಕಿನ ಸಮಸ್ಯೆಯನ್ನು ಉದಾರಭಾವದಿಂದ ನೋಡಿ ನ್ಯಾಯ್ಯವಾದ ರೀತಿಯಿಂದ ಬಿಡಿಸುವರೆಂದು ಫ್ರೆಂಚ ಸರಕಾರವು ಆಶಿಸುವುದು ಎಂದು ಮುಂತಾಗಿ ಗವರ್ನರರು ಸಾರಿದರು.

ಮೇಲಿನ ಘೋಷಣೆಯು ಎರಡೂ ಸರಕಾರಗಳ ನಡುವೆ ೬ ತಿಂಗಳಿಂದ ನಡೆದ ಮಾತುಕತೆಗಳ ಫಲಿತಾಂಶ. ಲಂಡನ್ನಿನಲ್ಲಿಯ ಹಿಂದೀ ಹೈಕಮಿಶನರರಾದ ಶ್ರೀ ವಿ. ಕೆ. ಕೃಷ್ಣಮೆನನ್ನರು ಪ್ಯಾರಿಸ್ಸಿನಲ್ಲಿ ಮಾತುಕತೆ ನಡೆಸಿದ ಬಳಿಕ ಫ್ರೆಂಚ ಸರಕಾರವು ಹಿಂದುಸ್ತಾನದ ಬಗ್ಗೆ ಸದಾಶಯವನ್ನು ವ್ಯಕ್ತ ಮಾಡಲು ಹಿಂದೀ ಸ್ವಾತಂತ್ರ್ಯದ ದಿನ ಹಿಂದುಸ್ತಾನದಲ್ಲಿಯ ಫ್ರೆಂಚ ನಡುಗಡ್ಡೆಗಳನ್ನು ಹಿಂದೀ ಸರಕಾರಕ್ಕೆ ಒಪ್ಪಿಸುವುದಾಗಿ ಪ್ರಸಿದ್ಧಿಸಿ ಅದೇ ಪೇರೆಗೆ ಅಕ್ಟೋಬರ ೬ ರಲ್ಲಿ ಒಪ್ಪಿಸಿತು. ಹಿಂದುಸ್ತಾನದಲ್ಲಿ ಫ್ರೆಂಚ ರಾಯಭಾರಿಗಳಾದ ಡೇನಿಯಲ್ ಲೆವಿಯವರು ದಿಲ್ಲಿಗೆ ಬಂದ ಮೇಲೆ ಪುನಃ ಮಾತುಕತೆ ಪ್ರಾರಂಭವಾಗಿ ಈಗ ಈ ಘೋಷಣೆ ಹೊರಬಿದ್ದಿದೆ.

ಪಾಲಿಸ್ತಾನದಲ್ಲಿ ತಾತ್ಕಾಲಿಕ ಶಾಂತಿ

ಪಾಲಿಸ್ತಾನದಲ್ಲಿ ೨೬ ದಿನಗಳ ವರೆಗೆ ನಡೆದ ಯುದ್ಧವು ಸಂ. ರಾ. ಸಂಘದ ಆದೇಶದಂತೆ ಕಳೆದ ೧೧ ರಲ್ಲಿ ನಿಲ್ಲಿಸಲ್ಪಟ್ಟಿತು. ಜೆರೂಸಲೆಂ ನಗರದ ಸುತ್ತ ಯುದ್ಧ ನಿಲ್ಲಿಸಲು ಹೇಳಿದ ಕೊನೆಯ ನಿಮಿಷದ ವರೆಗೂ ಯುದ್ಧ ಸಾಗಿತ್ತು. ಪರಸ್ಪರರು ಯುದ್ಧ ಮುಕ್ತಾಯದ ಆಜ್ಞೆಯನ್ನು ಉಲ್ಲಂಘಿಸಿದ ಬಗ್ಗೆ ದೂರುಗಳು ಬರುತ್ತಿವೆ.

● ಕೌಂಟ್‌ಬರ್ನಡೊತ್ತೆಯವರ ಮಧ್ಯಸ್ತಿಕೆಯಿಂದ ನಾಲ್ಕು ವಾರಗಳ ತಾತ್ಕಾಲಿಕ ಶಾಂತಿಸ್ಥಾಪನೆಯಾಗುವಂತಾಯಿತಲ್ಲದೆ ಅದಕ್ಕಿಂತ ಹೆಚ್ಚೇನೂ ಸಾಧ್ಯವಾಗದೆಂದು ಕೆಲವರ ಮತ. ಕೌಂಟರ ಹೊಸ ಯೋಜನೆ ಅರಬರಿಗಾಗಲಿ, ಯಹೂದಿಗಳಿಗಾಗಲಿ ಒಪ್ಪಿಗೆಯಾದೀತೆಂಬ ಭರವಸೆಯಿಲ್ಲ. ಅರಬರು ನುಗ್ಗದಂತೆ ಗಡಿಗಳನ್ನು ಇಸ್ರೇಲ್ ಪಡೆಗಳು ರಕ್ಷಿಸುವುದು ಯುದ್ಧ ಮುಕ್ತಾಯದ ಉದ್ದೇಶವೆಂದೂ ಇದರಿಂದ ಅರಬರಿಗೆ ಲಾಭವಾದಂತಾಯಿತೆಂದೂ ಇಸ್ರೇಲ್ ಸರಕಾರದ ಅಭಿಪ್ರಾಯವಾಗಿದೆ.

● ಇತ್ತೀಚಿನ ಸುದ್ದಿಯ ಪ್ರಕಾರ ಸಂ. ರಾ. ಸಂಘದ ಆದೇಶದ ಪ್ರಕಾರ ಯುದ್ಧ ಮುಕ್ತಾಯದ ನಿರ್ದಿಷ್ಟ ಸಮಯ ಮುಗಿದು ೨೪ ತಾಸುಗಳಾಗಿ ಹೋದರೂ ಪಾಲಿಸ್ತಾನದಲ್ಲಿ ಯುದ್ಧವಿನ್ನೂ ಸಾಗಿದೆಯೆಂದು ತಿಳಿಯುತ್ತದೆ.

● ಪ್ಯಾರಿಸ್ಸಿನ ಒಂದು ಪತ್ರಿಕೆಯಲ್ಲಿ ಅರಬರು ಇಸ್ರೇಲ್ ರಾಜ್ಯವನ್ನು ಮನ್ನಿಸಿದರೆ ಮಧ್ಯಪೂರ್ವದ ಮಹಾಮಂಡಲವನ್ನು ಸ್ಥಾಪಿಸಿ ಅದರಲ್ಲಿ ಇಸ್ರೇಲೂ ಸೇರಲು ಒಪ್ಪುವುದು ಎಂದು ಟ್ರಾನ್ಸಜೋರ್ಡನ್ನಿನ ಅರಸನಿಗೆ ಇಸ್ರೇಲ್ ರಾಷ್ಟ್ರಾಧ್ಯಕ್ಷರು ತಿಳಿಸಿದರೆಂಬ ಅನಧಿಕೃತ ಸುದ್ದಿಯನ್ನು ಪ್ರಕಟಿಸಲಾಗಿದೆ.

● ಸಾವಿರ ಯಹೂದಿಗಳು ಪನಾಮ ದೇಶದ ಧ್ವಜವುಳ್ಳ ಹಡಗಿನಲ್ಲಿ ಕುಳಿತು ಶಸ್ತ್ರಾಸ್ತ್ರ ಸಮೇತರಾಗಿ ಪಾಲಿಸ್ತಾನಕ್ಕೆ ಹೊರಟರೆಂದು ಫ್ರೆಂಚ್ ಪೋಲೀಸರ ವರದಿಯಿದೆ.

● ಇಂಗ್ಲಂಡಿನ ಕಾಮನ್ಸ್‌ಸಭೆಯಲ್ಲಿ ವಿದೇಶ ಶಾಖೆಯ ಉಪಕಾರ್ಯದರ್ಶಿಯು ಇಸ್ರೇಲ್ ರಾಜ್ಯಕ್ಕೆ ಮನ್ನಣೆ ಕೊಟ್ಟರೆ ಪಾಲಿಸ್ತಾನದಲ್ಲಿ ರಾಜಕೀಯ ಹಸ್ತಕ್ಷೇಪ ಮಾಡಿದಂತಾಗುವುದು ಮತ್ತು ಸದ್ಯಃ ನಡೆಯುತ್ತಿರುವ ಸಂಧಾನದ ಪ್ರಯತ್ನಕ್ಕೆ ವಿಘಾತಕವಾಗಬಹುದು ಎಂದನು.



ಫ್ರಾಂಕ್‌ಫರ್ಟಿನಲ್ಲಿ ಜರ್ಮನರು ಎಂಜಲು ಕಸ ಅರಿವೆ ಅಂಚಡಿಗಳನ್ನು ಆರಿಸುತ್ತಿರುವುದು! ಹಿಟ್ಲರನ ಔದ್ಧತ್ಯದ ಫಲವಾಗಿ ಜರ್ಮನ್ ನರನಾರಿಯರಿಗೆ ಇಂದು ಇಂಥ ಗೋಳು ಪ್ರಾಪ್ತವಾಗಿದೆ.

ಟ್ರೂಮನ್ನರ ಪ್ರಚಾರ

ಯುದ್ಧಸಿದ್ಧತೆಯನ್ನು ಪ್ರತ್ಯಕ್ಷವಾಗಿ ಮಾಡುತ್ತಿರುವ ಅಮೇರಿಕದ ಅಧ್ಯಕ್ಷರಾದ ಟ್ರೂಮನ್ನರು ರಶಿಯವನ್ನು ಕುರಿತು ಕೊಟ್ಟ ಒಂದು ಹೇಳಿಕೆಯಲ್ಲಿ ಅಮೇರಿಕಕ್ಕೆ ಶತ್ರುತ್ವ ಬೆಳೆಸುವ ಇಷ್ಟ ಎಳ್ಳಷ್ಟೂ ಇಲ್ಲವೆಂದು ತಮ್ಮ ನಾಡಿನ ನಿಷ್ಪಾಪ ಬುದ್ಧಿಯನ್ನು ಪ್ರಕಟಪಡಿಸಲು ಪ್ರಯತ್ನಿಸಿದರು.

ಚುನಾವಣೆಯ ಪ್ರಚಾರಕ್ಕಾಗಿ ಅಮೇರಿಕದಲ್ಲಿ ಎಲ್ಲೆಡೆ ಸುತ್ತಾಡಹೊರಟಾಗ ತಮ್ಮ ಒಂದು ಭಾಷಣದಲ್ಲಿ ಟ್ರೂಮನ್ನರು ರಶಿಯ ಅಮೇರಿಕ ಎರಡೇ ರಾಷ್ಟ್ರಗಳು ಕೂಡಿ ಮಾತುಕತೆ ನಡೆಸುವ ಪ್ರಮೇಯವನ್ನು ಅಲ್ಲಗಳೆದರು. ಯುದ್ಧ ಮುಗಿದಿದ್ದರೂ ಶಾಂತಿ ಕೈಗೆ ಹತ್ತದಿರಲು ಸೋವಿಯಟ್ ರಶಿಯವೇ ಕಾರಣವೆಂದು ಸರ್ವಾಪರಾಧವನ್ನೂ ಅದರ ಮೇಲೆ ಅವರು ಸುಖವಾಗಿ ಹೇರಿಬಿಟ್ಟರು.

ಯುರೋಪಿಗೆ ಮಾಡಹೋದ ಸಹಾಯ ಯೋಜನೆಯಲ್ಲಿ ರಶಿಯ ಭಾಗವಹಿಸಲಿಲ್ಲ; ತಡಮಾಡುವುದು, ಪ್ರತಿಯೊಂದು ಸಂಗತಿಯಲ್ಲೂ ಅಪಪ್ರಚಾರ ಮಾಡುವುದು ಇದೇ ಅದರ ನೀತಿಯಾಗಿದೆ; ಅವಿವೇಕದಿಂದ ಮನಸ್ಸುಬಂದಂತೆ ತನ್ನ ಪ್ರತಿಷೇಧಾಧಿಕಾರವನ್ನು ಅದು ಪ್ರಯೋಗಿಸಿತು; ಪೂರ್ವ ಯುರೋಪಿನಲ್ಲಿ ಗುಪ್ತವಾಗಿ ತನ್ನ ಆಕ್ರಾಮಕ ನೀತಿಯನ್ನು ಅದು ಪ್ರಯೋಗಿಸಿತು, ಮಧ್ಯಪ್ರಾಚ್ಯದಲ್ಲಿ ಅತಿ ಹೆಚ್ಚಿನ ಒತ್ತಾಯವನ್ನು ಇತರರ ಮೇಲೆ ತಂದಿತು; ಮಾಸ್ಕೋದಿಂದ ನಿರ್ದೇಶ ಪಡೆದ ಕಮ್ಯುನಿಸ್ಟ ಪಕ್ಷಗಳಿಂದ ಅನ್ಯ ದೇಶಗಳ ಒಳಆಡಳಿತದಲ್ಲಿ ಕೈಹಾಕಿತು ಎಂದು ರಶಿಯದ ಮೇಲೆ ಅಪರಾಧದ ಹೊರೆಯನ್ನು ಟ್ರೂಮನ್ನರು ನಿರರ್ಗಳವಾಗಿ ಹೊರಿಸಿದರು.

● ಟ್ರೂಮನ್ನರು ಸದ್ಯದ ರಾಜಕೀಯ ಮತ್ತು ಸಾಮಾಜಿಕ ಪ್ರಶ್ನೆಗಳ ಹೊಣೆಯನ್ನು ಕಾಂಗ್ರೆಸ್ಸಿನ ಮೇಲೆ ಹೇರಿ, ಡೆಮೊಕ್ರಾಟಿಕ್ ಪಕ್ಷದ ಚುನಾವಣೆಯ ಯೋಜನೆಯನ್ನು ಸ್ಥಾನಿಕ ಸಂಘಟಕರ ಮೇಲೆ ಅವಲಂಬಿಸಿ ರಚಿಸಿ, ಮುಖ್ಯ ಪ್ರಶ್ನೆಗಳ ಸಂಬಂಧವೇ ತಮಗಿಲ್ಲವೆಂದು ಸಾರಿ, ಅಧ್ಯಕ್ಷ ಪದಕ್ಕೆ ತಾವು ಅಯೋಗ್ಯರಲ್ಲವೆಂಬುದನ್ನು ಜನತೆಯಲ್ಲಿ ಬಿಂಬಿಸಹೋಗಿ ಪ್ರಚಾರದಲ್ಲಿ ಯಶಸ್ಸನ್ನು ಪಡೆಯುದಾದರೆಂದು ರಾಜಕೀಯ ನಿರೀಕ್ಷಕರ ಅಭಿಪ್ರಾಯ. ಇದರಿಂದ ಟ್ರೂಮನ್ನರ ಪ್ರಚಾರ ಪ್ರವಾಸದ ಯಶಸ್ಸು ಸಂದಿಗ್ಧಪರಿಣಾಮಿಯಾಗಿದೆಯೆಂಬುದು ನಿಃಸಂದಿಗ್ಧವೆಂದು ತಿಳಿಯಲು ಯಾವ ಅಭ್ಯಂತರವೂ ಇಲ್ಲ.

ಪಶ್ಚಿಮ ಯುರೋಪಿನ ಮೇಲೆ ರಶಿಯದ ದಾಳಿ?

ಪಶ್ಚಿಮ ಯುರೋಪಿನ ಒಕ್ಕೂಟದ ಸಂರಕ್ಷಣ ಯೋಜನೆಯನ್ನು ಹದಗೆಡಿಸಲು ರಶಿಯವು ಫ್ರಾನ್ಸ್, ಇಟಲಿ ಮತ್ತು ಸ್ಕ್ಯಾಂಡಿನೇವಿಯಗಳ ಮೇಲೆ ದಾಳಿ ಮಾಡುವ ಯೋಚನೆಯಲ್ಲಿರುವುದೆಂದು ಐರೋಪ್ಯ ಪ್ರಶ್ನೆಗಳ ಅಭ್ಯಾಸಕ್ಕಾಗಿ ನಿಯಮಿಸಲ್ಪಟ್ಟ ಅಂತರ್‌ರಾಷ್ಟ್ರೀಯ ಸಮಿತಿಯವರು ಕಳೆದ ೧೨ ರಲ್ಲಿ ಒಪ್ಪಿಸಿದ ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಈ ವರದಿಗೆ ಲಾರ್ಡ ವಾನ್ಸಿಟಾರ್ಟ್, ಲಾರ್ಡ್ ಬ್ರೈಜಜನ್ ಮತ್ತು ಅನೇಕ ಬ್ರಿಟಿಶ ಮತ್ತು ಫ್ರೆಂಚ ಶಾಸನ ಸಭಾ ಸದಸ್ಯರ ಸಹಿಯಿದ್ದು ಇದನ್ನು ಮಿತ್ರ ರಾಷ್ಟ್ರಗಳ ಪ್ರಧಾನರಿಗೂ ವಿದೇಶ ಮಂತ್ರಿಗಳಿಗೂ ಕಳಿಸಲಾಗಿದೆ.

ಶಾಂತಿ ಕಾಲದಲ್ಲಿ ೪೦ ಲಕ್ಷ ಸೈನಿಕರಿದ್ದರು. ಅವರಲ್ಲಿ ೧೫ ಲಕ್ಷ ಸೈನಿಕರನ್ನು ರಶಿಯವು ಪೂರ್ವ ಯುರೋಪಿನಲ್ಲಿ ಇಟ್ಟಿದೆ. ರಶಿಯದ ವಿಮಾನ ದಲದಲ್ಲಿ ನಾಲ್ಕು ಎಂಜಿನುಗಳ ಬಾಂಬರುಗಳು ಮತ್ತು ಬ್ರಿಟನ್ನಿನಲ್ಲಿರುವಂಥ ಪಮದಗ್ನಿಗಳು ಮತ್ತು ಇತರ ಆಧುನಿಕ ಸುಸಜ್ಜಿತ ವಿಮಾನಗಳು ಸಿದ್ಧವಿವೆ. ಜಗತ್ತಿನಲ್ಲಿಯೇ ದೊಡ್ಡದೆನಿಸುವ ನೌಕಾದಲ ರಶಿಯದಲ್ಲಿದೆ. ಅದಕ್ಕೆ ಸೇರಿ ೨೦೦–೪೦೦ ಯಮಡನ್ ನಾವೆಗಳಿವೆ. ಅದರ ಅಧೀನ ರಾಷ್ಟ್ರಗಳ ಸೈನ್ಯ ಬಲವನ್ನು ಕೂಡಿಸಿದರೆ ಪೂರ್ವ ಯುರೋಪಿನಲ್ಲಿ ಸೈನ್ಯ ಸಂಖ್ಯೆ ೨೦ ಲಕ್ಷಕ್ಕೆ ಮುಟ್ಟುವುದು.

ಪಶ್ಚಿಮ ಇಲ್ಲವೆ ನೈಋತ್ಯ ಯುರೋಪು ಮೇಲಿನ ರಶಿಯನ್ ಬಲವನ್ನು ಎದುರಿಸಲಾರದು. ಅಮೇರಿಕದ ಬೆಂಬಲ ಸಿಕ್ಕಿದರೆ ಮಾತ್ರ ಪಶ್ಚಿಮ ಯುರೋಪು ಆತ್ಮರಕ್ಷಣೆ ಮಾಡಿಕೊಳ್ಳಬಲ್ಲುದು. ರಶಿಯವು ಸಮರನೀತಿಬದ್ಧ ಆಕ್ರಮಣದ ಧೋರಣವನ್ನು ತಾಳಿದ್ದಾದರೆ ೪ ವರ್ಷಗಳಿಂದ ತಾನು ತನ್ನ ರಾಜಕೀಯ ಧೋರಣದಿಂದ ಪಡೆದುದನ್ನು ಕಳೆದುಕೊಳ್ಳಬಹುದಾದರೂ ಅದನ್ನದು ಲೆಕ್ಕಿಸದೆ ಪಶ್ಚಿಮದ ಪಂಚರಾಷ್ಟ್ರಗಳೂ ಅಮೇರಿಕವೂ ತಕ್ಕ ಸಿದ್ಧತೆ ನಡೆಸುವ ಮೊದಲೇ ಇತರ ರಾಷ್ಟ್ರಗಳ ಮೇಲೆ ಒತ್ತಾಯ ತರಲು ಸೈನ್ಯವನ್ನು ಬಳಸುವ ಸಂಭವವಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಕಳೆದ ೩ ತಿಂಗಳಿಂದ ಪಶ್ಚಿಮ ರಾಷ್ಟ್ರಗಳ ಸರಕಾರಗಳಿಗೆ ಈ ರೀತಿ ವರದಿಗಳು ಬರುತ್ತಿವೆ. ಅವುಗಳಲ್ಲಿ ಪೂರ್ವ ಯುರೋಪಿನಲ್ಲಿ ರಶಿಯವು ಸೈನ್ಯ ಸಂಗ್ರಹ ಮಾಡಿಟ್ಟ ಉಲ್ಲೇಖವಿದೆ. ಅಲ್ಲದೆ, ಫ್ರಾನ್ಸ್, ಇಟಲಿ, ಸ್ಕ್ಯಾಂಡಿನೇವಿಯಗಳ ಮೇಲೆ ದಾಳಿ ಮಾಡುವ ತಾರೀಕು ಕೂಡ ಅವುಗಳಲ್ಲಿ ನಿರ್ದೇಶಿಸಲ್ಪಟ್ಟಿದೆ. ಸಾಂಪ್ರತ ವರದಿಯಲ್ಲಿ ರಶಿಯವು ಯುದ್ಧಕ್ಕಿಂತ ರಾಜಕೀಯ ಒತ್ತಾಯದಿಂದ ತನ್ನ ಗುರಿಯನ್ನು ಸಾಧಿಸಿಕೊಳ್ಳಲು ಯತ್ನಿಸಿದ್ದನ್ನು ಪಶ್ಚಿಮ ರಾಷ್ಟ್ರಗಳ ಗಮನಕ್ಕೆ ತಂದು ಕೊಳ್ಳಬೇಕು ಎಂದು ಕಾಣಿಸಲಾಗಿದೆ.

ಬ್ರಹ್ಮದೇಶದಲ್ಲಿ ಕಮ್ಯುನಿಝಂ

ಬ್ರಹ್ಮದೇಶದ ಎಡಪಕ್ಷದ ಮುಖ್ಯ ಮಂತ್ರಿಗಳಾದ ಥಾಕಿನ ನೂರವರು ಬ್ರಹ್ಮದೇಶವು ರಶಿಯವನ್ನು ಅನುಸರಿಸುವದೆಂದೂ ತಾವು ಸದುದ್ದೇಶವಿದ್ದವರೆಲ್ಲರೊಡನೆ ಐಕ್ಯದಿಂದಿರಲಿಚ್ಛಿಸುವರೆಂದೂ ರಂಗೂನಿನಲ್ಲಿ ಹೊರಗೆಡಹಿದರು. ಎಲ್ಲ ಬಹ್ಮೀ ಎಡಪಕ್ಷಗಳೂ ಒಂದಾಗಿ ಒಂದು ಸಂಯುಕ್ತ ಪಕ್ಷವನ್ನು ರಚಿಸಬೇಕೆಂದು ಅವರು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಇದರಿಂದ ಬ್ರಿಟರಿಗೆ ತಲೆನೋವು ಪ್ರಾರಂಭವಾಗಿದೆ.



ಬ್ರಹ್ಮೀ ಮುಖ್ಯಮಂತ್ರಿ ಥಾಕಿನ್‌ನೂ

ನಗೆಯ ನೊರೆ

ಸುಂದರ:--"ಮುತ್ತು ನನಗೆ ಬೇಡ."

ಸುರಮೆ:--"ಮುತ್ತಿನ ಮೇಲೆ ನಿನಗೇಕೆ ಅಷ್ಟು ಬೇಸರ?"

ಸುಂದರ:--"ನೋಡು ನಾನು ಚಿಕ್ಕ ಮಗುವಾಗಿದ್ದಾಗ ತೊಟ್ಟಿಲಿಂದ ದಾದಿಯು ನನ್ನನ್ನೆತ್ತಿಕೊಂಡು ಮುತ್ತಿಟ್ಟು, ಮುತ್ತಿಟ್ಟು, ಮುತ್ತಿಟ್ಟು, ನನಗೆ ೬ ತಿಂಗಳು ತುಂಬುವುದರೊಳಗೆ ಮುತ್ತಿನಿಂದಾಗುವ ರೋಮಾಂಚನವೆಲ್ಲ ನಿಂತು ಹೋಯಿತು.!"

\+ \+ \+

ಬಾಬ್ ಟೇಲರನು ಟೆನ್ನಾಸಿಯ ಹಿಂದಿನ ಗವರ್ನರನಾಗಿದ್ದನು. ಅವನಿಗೆ ಹೊಳೆವ ತಾಮ್ರದ ಚಂಬಿನಂತಹ ಬೋಳುದಲೆಯಿತ್ತು. ತನ್ನ ಗೆಳೆಯರ ಒತ್ತಾಯದಿಂದ ಅವನು ಒಂದು ದಿನ ಒಂದು ನೃತ್ಯ ಸಮಾರಂಭಕ್ಕೆ ಹೋದನು.

ಕುಣಿತ ಕುಡಿತಗಳು ಯಥೇಚ್ಛವಾಗಿ ಸಾಗಿದ ನಂತರ ವಿಶ್ರಾಂತಿ ತೆಗೆದುಕೊಳ್ಳಲು ಗವರ್ನರನು ಪಕ್ಕದಲ್ಲೇ ಇದ್ದ ಕೋಣೆಗೆ ಹೊಕ್ಕನು. ಅಲ್ಲಿ ಹೆಂಗಸರು ತಮ್ಮ ಮಕ್ಕಳನ್ನು ಮಲಗಿಸಿ ಹೊರಕ್ಕೆ ಹೋಗಿದ್ದರು. ೨ ಮಕ್ಕಳು ಒಂದು ಹಾಸಿಗೆಯಲ್ಲಿ ಮಲಗಿದ್ದರು. ಅಲ್ಲೇ ಸ್ವಲ್ಪ ಜಾಗ ಮಾಡಿಕೊಂಡು ಬಾಬ್‌ಸಾಹೇಬನು ಉರುಳಿಕೊಂಡು ಕುಂಭಕರ್ಣ ಸಂಧಿಯನ್ನು ಓದತೊಡಗಿದನು. ಆದರೆ ಅದೇ ಕೆಲವು ನಿಮಿಷಗಳಲ್ಲಿ ಯಾರದೋ ಕೈ ತನ್ನ ಹಣೆಯ ಮೇಲೆ ಕುಳಿತಂತೆ ತೋರಿತು ಗವರ್ನರ ಮಹಾಶಯನಿಗೆ. ಅವನಿಗೆ ಆಶ್ಚರ್ಯವಾಗಿ ಎಚ್ಚತ್ತು ನೋಡಿದ. ಆಗ ತನ್ನ ಬೋಳುದಲೆಯ ಶಿಖರವನ್ನು ಬಟ್ಟೆಯಿಂದ ಸುತ್ತಿ ಗುಂಡುಸೂಜಿ ಚುಚ್ಚಿದ್ದು ಅವನಿಗೆ ಗೊತ್ತಾಯಿತು. ತಲೆಯ ಮೇಲೆ ಒಂದು ಕೈ ತಟ್ಟುತ್ತಿತ್ತು. ಮತ್ತು ಒಬ್ಬ ಹೆಂಗಸಿನ ದನಿಯು ವಾತ್ಸಲ್ಯದಿಂದ—

"ಮಲಗು ಮಗೂ, ಮಲಗು ನನ್ನ
ಮುದ್ದು ಮೋಹನ;
ಚಳಿಯೆ ನಿನಗೆ? ಮಲಗು ಬೆಚ್ಚ-
ಗೆನ್ನ ಜೀವನ!"
ಎಂದು ಹಾಡುತ್ತಿತ್ತು.

\+ \+ \+


ಅವಳು:— "ನೀನು ಬಹಳ ಸಪ್ಪೆಯಾಗಿರುವಂತೆ ತೋರುತ್ತದೆ."

ಅವನು:-- "ಹೌದು, ೬ ವಾರಗಳಾಯಿತು. ನನ್ನ ಹೆಂಡತಿ ತವರೂರಿಗೆ ಹೋಗಿ ಈಗ ತಾನೆ ಮನೆಗೆ ಬಂದಿದ್ದಾಳೆ."

ಅವಳು:-- "ಅದರಿಂದ ನೀನು ಅಷ್ಟು ಖಿನ್ನನಾಗಬೇಕೇಕೆ?"

ಅವನು:-- "ನೋಡೆ, ನಾನು ಅವಳಿಗೆ ಹೇಳಿದ ನಿತ್ಯವೂ ಸಂಜೆಯನ್ನು ಮನೆಯಲ್ಲೇ ಕಳೆದೆ: ಮತ್ತು ಈ ದಿನ ದೀಪದ ಬೆಳ್ಳಾಪ ಪಟ್ಟಿ ಬಂದಿದೆ. ಅದು ಕೇವಲ ೪ ಆಣೆ ಆಗಿದೆ, ಎಂದು."

* * *



ಮಹಿಳಾ-ಲೋಕ

೧

ಸಂಗ್ರಹಕಾರ್ತಿ
"ಹಿರಿಯಕ್ಕ"

ಹೊಸ ಕೌಟುಂಬಿಕ ಜೀವನ

ಲೇಖಿಕೆ:— ಶ್ರೀ. ರಾಮೇಶ್ವರಿ ನೆಹರು
[ಹಿಂದಿಯಿಂದ ಆಯ್ದುದು]

ವೈಯಕ್ತಿಕ ಹಾಗೂ ರಾಷ್ಟ್ರದ ಜೀವನದಲ್ಲಿ ಕೌಟುಂಬಿಕ ಜೀವನಕ್ಕೆ ಮಹತ್ವದ ಸ್ಥಾನವಿದೆ. ಎಲ್ಲ ಸಭ್ಯತೆಯು ಅದರ ತಳಹದಿಯ ಮೇಲೆಯೆ ನಿಂತಿದೆ. ಕೌಟುಂಬಿಕ ಜೀವನದ ಪ್ರಭಾವವು ಅಳಿಯಲಾರದ್ದು. ಆದುದರಿಂದ ಕೌಟುಂಬಿಕ ಜೀವನದತ್ತ ತಕ್ಕ ಗಮನವನ್ನು ಕೊಡಬೇಕು. ಹಾಗೂ ರಾಷ್ಟ್ರೀಯ ಯೋಜನೆಯಲ್ಲಿ ಅದಕ್ಕೆ ತಕ್ಕ ಸ್ಥಾನ ಕೊಡಬೇಕು.

ರಾಷ್ಟ್ರದ ಆರ್ಥಿಕ ಪುನಾರಚನೆಯ ಬಗ್ಗೆ ಅನೇಕ ಯೋಜನೆಗಳನ್ನು ಸಿದ್ಧಪಡಿಸಲಾಗಿದೆ. ಆದರೆ ಜೀವನದ ಬದಲಾಯಿಸುವ ಪರಿಸ್ಥಿತಿಯಲ್ಲಿ ಕೌಟುಂಬಿಕ ಜೀವನವನ್ನು ಪುನಾರಚಿಸುವದರತ್ತ ಯಾರೂ ಗಮನಿಸಿಲ್ಲ.

ರಾಷ್ಟ್ರದಲ್ಲಿ ಆದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಬದಲಾವಣೆಯಿಂದ ನಮ್ಮ ಕೌಟುಂಬಿಕ ಜೀವನದಲ್ಲಿ ಅನುಕೂಲಾಗ್ರ ಬದಲಾವಣೆಗಳಾಗಿವೆ. ೫೦ ವರ್ಷಗಳ ಹಿಂದೆ ಅದು ಹೇಗೆ ಇತ್ತು ಹಾಗೆ ಈಗ ಇಲ್ಲ. ವಾತಾವರಣವು ಮತ್ತು ಆ ಕಾಲದ ಅವಶ್ಯಕತೆಗಳು ನಮ್ಮ ಕೌಟುಂಬಿಕ ಜೀವನದ ಮಾದರಿಯನ್ನು ನಿರ್ಧರಿಸಿದವು. ಆ ಮಾದರಿಯು ಈಗ ಬದಲಾಗಿದ್ದು ಹೊಸ ಮಾದರಿಯು ರೂಪಗೊಳ್ಳುತ್ತಿದೆ.

ಹಳೆಯ ಮಾದರಿಯು ಸದ್ಯದ ಹೊಸ ಕಾಲದಲ್ಲಿ ಉಪಯೋಗದ್ದಲ್ಲ. ಅದು ಅಂದಿನ ಕೃಷಿ ಮತ್ತು ಗ್ರಾಮಜೀವನಕ್ಕೆ ಸರಿಯಾಗಿತ್ತು. ಆದು ಮಾದರಿಯ ಮನೆಯಾಗಿತ್ತೊ ಇಲ್ಲವೊ ಎಂಬುದರ ಬಗ್ಗೆ ನನಗೆ ಸಂಶಯವೆ ಇದೆ. ಆದರೆ ಸದ್ಯದ ಜನರ ಅವಶ್ಯಕತೆಗಳನ್ನು ಪೂರೈಸುವಂತೆ ಕೌಟುಂಬಿಕ ಜೀವನವನ್ನು ರೂಪಿಸಬೇಕೆಂಬುದು ನಿಶ್ಚಿತ ಮಾತು.

ಶಾಂತಿಯ ತವರು

ಮಾದರಿಯ ಮನೆಯು ಹೇಗಿರಬೇಕೆಂಬುದರ ಬಗ್ಗೆ ನಾನು ಸ್ವಲ್ಪಾದರೂ ಹೇಳುವದು ಅವಶ್ಯಕವಿದೆ. ಅಲ್ಲಿ ಪ್ರೀತಿ, ನಿಷ್ಠೆ, ಭದ್ರತೆಗಳಿರಬೇಕು. ಅದು ಹೊರಗಿನ ಜಗತ್ತಿನ ಕಾದಾಟ, ಹೋರಾಟಗಳಿಂದ ರಹಿತವಾದ ವಿಶ್ರಾಂತಿಯ ಸ್ಥಾನವಾಗಿರಬೇಕು. ಶಾಂತಿಯ ತವರು ಆಗಿರಬೇಕು. ಈ ಮಾದರಿಯ ಮನೆಗಳು ನಿರ್ಜೀವ ವಸ್ತುಗಳಿಂದ ರಚಿಸಲ್ಪಡುವದಿಲ್ಲ. ಆದರೆ ಮನೆಯಲ್ಲಿ ಇರುವ ಜನರ ಪರಸ್ಪರ ಸಂಬಂಧದ ಮೇಲೆ ರಚಿಸಲ್ಪಡುತ್ತವೆ. ಸುಂದರ ವಸ್ತುಗಳಿಂದ ತುಂಬಿದ ಆದರೆ ಪರಸ್ಪರರಲ್ಲಿ ಬಡಿದಾಡುವ ಶ್ರೀಮಂತ ಜನರ ಮನೆಗಿಂತ ಸೌಹಾರ್ದ, ನಂಬಿಗೆ, ತಿಳುವಳಿಕೆಯಿಂದ ತುಂಬಿದ ಬಡವನ ಗುಡಿಸಲೇ ಲೇಸು. ಅದನೆ ಮಾದರಿಯ ಮನೆ.

ಇಂದು ನಮ್ಮ ಮನೆಗಳಲ್ಲಿ, ಅದರಲ್ಲಿಯೂ ವಿಶೇಷವಾಗಿ ಸುಶಿಕ್ಷಿತರ ಮನೆಯಲ್ಲಿ ಈ ಗುಣಗಳ ಅಭಾವವು ಕಂಡು ಬರುತ್ತಿದೆ. ಹಳೆಯ ಕಾಲದಲ್ಲಿ ಮನೆಯು ಜಮೀನುದಾರಿ ಪದ್ಧತಿಯ ತಳಹದಿಯ ಮೇಲೆ ರಚಿತವಾದ ಸಭ್ಯತೆಯ ಒಂದು ಚಿಕ್ಕ ಘಟಕವಾಗಿತ್ತು. ಈಗ ಮನೆಯು ಈ ಸಭ್ಯತೆಯನ್ನು ಪ್ರತಿನಿಧಿಸುವದಿಲ್ಲ, ಇಂಥ ಕೌಟುಂಬಿಕ ಜೀವನದಲ್ಲಿ ಸರಾಗವಾಗಿ ಬೆಳೆಯಲು ಬಾಲಕ, ಬಾಲಿಕೆಯರಿಗೆ ಚಿಕ್ಕಂದಿನಿಂದ ಶಿಕ್ಷಣ ಕೊಡಲಾಗುತ್ತಿತ್ತು. ಪ್ರತಿಯೋರ್ವನಿಗೆ ಮನೆಯಲ್ಲಿ ತನ್ನದಾದ ಒಂದು ಸ್ಥಾನವಿರುತ್ತಿತ್ತು. ಎಲ್ಲರೂ ಆದರ ಸ್ಥಾನವನ್ನು ಸ್ವಸಂತೋಷದಿಂದ ಒಪ್ಪುತ್ತಿದ್ದರು. ಇಂದಿನ ಪರಿಸ್ಥಿತಿಯು ಭಿನ್ನವಾಗಿದೆ, ಹೊಸ ಪೀಳಿಗೆ ಹಾಗೂ ಹಳೆಯ ಪೀಳಿಗೆಯಲ್ಲಿಯ ಅಂತರವು ಬೆಳೆದಿದೆ. ಸಾಧಾರಣವಾಗಿ ಅವರಿಬ್ಬರಲ್ಲೂ ಅಭಿಪ್ರಾಯಗಳ ಹೊಂದಿಕೆಯಿಲ್ಲ. ಇದರ ಪರಿಣಾಮವಾಗಿ ಕುಟುಂಬವು ಚಿಕ್ಕದಾಗಹತ್ತಿದೆ. ಆದರೆ ಚಿಕ್ಕ ಕುಟುಂಬಗಳಲ್ಲಿ ಸಹ ಶಾಂತಿ, ತಿಳುವಳಿಕೆ, ಮತ್ತು ಸಂಬಿಗೆಯ ಭಾವನೆಗಳ ಅಭಾವವಿದೆ. ಇದರ ಕಾರಣವೇನು? ಕುರೆದು ಕೊರತೆಗಳಿದ್ದ ಶಿಕ್ಷಣವೆ ಇದಕ್ಕೆ ಕಾರಣವೆಂದು ನನ್ನ ಅಭಿಪ್ರಾಯ. ಬ್ರಿಟಿಷರು ತಮ್ಮ ಕಾರ್ಯ ಸಾಧಿಸುವಂಥ ಶಿಕ್ಷಣ ಕೊಟ್ಟರು. ಕೌಟುಂಬಿಕ ಜೀವನದ ಬಗ್ಗೆ ಬಾಲಕ ಬಾಲಿಕೆಯರಿಗೆ ಯಾವ ಶಿಕ್ಷಣವನ್ನೂ ಕೊಡಲಿಲ್ಲ. ಕೌಟುಂಬಿಕ ಜೀವನದ ಕಟ್ಟಡವು ಕುಸಿದು ಬಿದ್ದುದರಿಂದ ಪರಸ್ಪರ ಸೌಹಾರ್ದ ಸಂಬಂಧಗಳ ಶಿಕ್ಷಣವನ್ನು ಕೊಡುವ ಯಾವ ಸಂಸ್ಥೆಯೂ ಇಲ್ಲದಂತಾಯಿತು.

ಹೊಸ ಶಿಕ್ಷಣ ಅವಶ್ಯ

ಈ ಕೊರತೆಯನ್ನು ಹೋಗಲಾಡಿಸಲು ಅಭ್ಯಾಸಕ್ರಮದಲ್ಲಿ ಪರಸ್ಪರ ಸೌಹಾರ್ದ ಸಂಬಂಧಗಳ ಶಿಕ್ಷಣವನ್ನು ಒಂದು ಭಾಗವನ್ನಾಗಿ ಮಾಡಬೇಕೆಂದು ನನ್ನ ಅಭಿಪ್ರಾಯ. ನಡತೆ, ಮರ್ಯಾದೆಗಳ ಬಗ್ಗೆ ಹಾಗೂ ಸಂಬಂಧಿಕರ ಕೂಡ, ಗೆಳೆಯರ ಕೂಡ, ಗುರುತಿನವರ ಕೂಡ, ವರ್ತಕ ಮುಂತಾದವರ ಕೂಡ ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಅವರಿಗೆ ಶಿಕ್ಷಣ ಕೊಡಬೇಕು.

ನಾವು ಕೇವಲ ಕೌಟುಂಬಿಕ ಜೀವನದಲ್ಲಿಯೇ ಮಗ್ನರಾಗಿರಬಾರದು. ನಾವು ನಮ್ಮ ದೇಶದ ಒಂದು ಭಾಗವೆಂದು ಮೊದಲಿನಿಂದಲೂ ಅರಿಯಬೇಕು. ಆದ್ದರಿಂದ ಇತರರ ಕೂಡ ಹೊಂದಿಕೊಂಡು ಹೋಗುವಂತೆ ನಾವು ನಮ್ಮ ಕೌಟುಂಬಿಕ ಜೀವನವನ್ನು ಸಾಗಿಸಬೇಕು. ಒಂಟಿಗನಾಗಿ ನಾನು ಜೀವನವನ್ನು ಸಾಗಿಸಲಾರೆ ಎಂಬ ಭಾವನೆಯನ್ನು ಚಿಕ್ಕಂದಿನಲ್ಲಿಯೆ ಬಾಲಕನ ಮನಸ್ಸಿನಲ್ಲಿ ಬೇರೂರುವಂತೆ ಮಾಡಬೇಕು. ತನ್ನ ಹಿತಾಹಿತವು ದೇಶದ ಹಿತಾಹಿತದಕೂಡ ಬಿಚ್ಚದಂತೆ ಹೆಣೆಯಲ್ಪಟ್ಟಿದೆ. ದೇಶ ಬಾಳಿದರೆ ಅವನ ಬಾಳು; ಇಲ್ಲದಿದ್ದರೆ ನಾಶ. ಆದ್ದರಿಂದ ದೇಶಕ್ಕೆ ಅಹಿತವಾಗುವಂತೆ ಅವನು ವರ್ತಿಸಬಾರದು. ಸಮಾಜ-ವಿರೋಧಿ ಕೃತ್ಯಗಳು ಪಾಪ ಮುಂತಾದ ಶಿಕ್ಷಣವನ್ನು ಬಾಲಕ ಬಾಲಿಕೆಯರಿಗೆ ಚಿಕ್ಕಂದಿನಿಂದ ಕೊಡಬೇಕು. ವೈಯಕ್ತಿಕ ಜೀವನವನ್ನು ಸಾಮಾಜಿಕ ಜೀವನದಲ್ಲಿ ಲೀನೀಕರಿಸಬೇಕೆಂಬ ಧರ್ಮದ ಹೊಸ ದೃಷ್ಟಿಕೋನವನ್ನು ಅವರ ಮೇಲೆ ಬಿಂಬಿಸಬೇಕು. ದೇಶದ ಹಾಗೂ ದೇಶ ಬಾಂಧವರ ಹೊಣೆಯು ಪೂರ್ಣವಾಗಿ ತಮ್ಮ ಮೇಲೆ ಇದೆ ಎಂಬ ಭಾವನೆಯನ್ನು ಚಿಕ್ಕಂದಿನಲ್ಲಿಯೆ ದೃಢೀಕರಿಸಬೇಕು. ಸರಕಾರವು ನಮ್ಮದಲ್ಲ ಎಂದು ಎಂದಿಗೂ ಭಾವಿಸಬಾರದು. ಸರಕಾರವು ನಮ್ಮಿಂದೇ ರಚಿತವಾದುದು. ನಾವು ಅದನ್ನು ಕಾಪಾಡಬಹುದು. ಇಲ್ಲವೆ ಕಿತ್ತೊಗೆಯಬಹುದು. ಅದರ ಕಾರ್ಯಕ್ಕೆ ನಾವೆ ಹೊಣೆ. ಸರಕಾರವು ಯೋಗ್ಯ ರೀತಿಯಿಂದ ತನ್ನ ಕೆಲಸವನ್ನು ಸಾಗಿಸುವಂತೆ ನಾವು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು ಎಂಬ ವಿಚಾರಗಳು ಅವರ ಮನಸ್ಸಿನಲ್ಲಿ ಬೆಳೆಯಬೇಕು.

ಸ್ವಲ್ಪದರಲ್ಲಿ ಹೇಳುವದೆಂದರೆ ದೇಶವು ನಮ್ಮ ಕುಟುಂಬವು, ಇಷ್ಟೆ ಅಲ್ಲ ಸಂಪೂರ್ಣ ಜಗತ್ತೆ ನಮ್ಮ ಕುಟುಂಬ ಎಂಬ ಭಾವನೆಯು ಹುಟ್ಟುವವರೆಗೂ ನಮ್ಮ ಕೌಟುಂಬಿಕ ಜೀವನವನ್ನು ವಿಸ್ತರಿಸಬೇಕು. ಅಂದರೇನೆ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯವಾಗುವದು. ನಮ್ಮ ಮನೆಯು ಮಾದರಿಯ ಮನೆಯಾಗುವದು.

ಎಮ್ಮಿಗನೂರು ಏಕೀಕರಣ ಪರಿಷತ್ತು

ಮೈಸೂರು ಹೊರಗುಳಿಯಲಾರದು
ಸಂಯುಕ್ತ ಕರ್ನಾಟಕವೇ ದೇವರಿಚ್ಛೆ

ಎಮ್ಮಿಗನೂರಿನಲ್ಲಿ ಇದೇ ತಾ. ೧೨ ಶನಿವಾರ ಬಳ್ಳಾರಿ ಜಿಲ್ಲಾ ಪೂರ್ವ ತಾಲೂಕುಗಳ ಪ್ರಥಮ ಕರ್ನಾಟಕ ಏಕೀಕರಣ ಪರಿಷತ್ತು ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಇದನ್ನು ಮೈಸೂರ ಘಟನಾ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂ ಅವರು ಉದ್ಘಾಟಿಸಿದರು.

ಅಂಧ್ರ ಮಹಾಸಭೆಯವರಿಂದ ಕರೇ ನಿಶಾನಿ ಪ್ರದರ್ಶನ ಜರಗಲಿದ್ದುದರಿಂದಲೂ ಕನ್ನಡಿಗರು ಮತ್ತು ಅಂಧ್ರರು ಪ್ರಕಟನೆ ಪ್ರತಿಪ್ರಕಟನೆಗಳನ್ನು ಹೊರಡಿಸಹತ್ತಿದ್ದರಿಂದಲೂ ಸರಕಾರದವರು ಈ ಪರಿಷತ್ತಿನ ಬಗ್ಗೆ ಮುಂಜಾಗ್ರತೆ ವಹಿಸಿ ಕಾದಿಟ್ಟ ಪೋಲೀಸ ದಲ ಕಳಿಸಿದ್ದರು. ಅಂಧ್ರರು ಕರೇ ನಿಶಾನಿಯನ್ನು ತೋರಿಸಿದರೂ ಪರಿಷತ್ತು ಶಾಂತ ರೀತಿಯಿಂದ ಕೊನೆಗಂಡಿತು. ಅದವಾನಿ, ಆಲೂರ, ರಾಯದುರ್ಗ ಈ ಮೂರೂ ತಾಲೂಕುಗಳಿಂದ ೫೦೦ ಪ್ರತಿನಿಧಿಗಳು ಆಗಮಿಸಿದ್ದರು.

ಶ್ರೀ ಸುಬ್ರಹ್ಮಣ್ಯರ ಭಾಷಣ

ಉದ್ಘಾಟಕರಾದ ಶ್ರೀ ಸುಬ್ರಹ್ಮಣ್ಯಮರು ತಮ್ಮ ಭಾಷಣದಲ್ಲಿ ವಿಭಕ್ತ ಕರ್ನಾಟಕವು ಒಂದುಗೂಡುವದು ನಮಗೆ ಬೇಕಾಗಿರಲಿ ಬಿಡಲಿ ಅದು ಸಂಯುಕ್ತ ಕರ್ನಾಟಕವಾಗಿ ರೂಪಗೊಳ್ಳಬೇಕೆಂದು ದೇವರ ಇಚ್ಛೆಯೇ ಇದ್ದಂತೆ ತೋರುತ್ತದೆ. ಈಗ ಈ ಕಾರ್ಯವನ್ನು ತಡೆವುದು ಯಾರಿಗೂ ಸಾಧ್ಯವಿಲ್ಲ. ಮೈಸೂರಿನಲ್ಲಿ ಇಂದು ಹೊಣೆಗಾರ ಸರಕಾರ ಸ್ಥಾಪಿತವಾಗಿದೆ. ಇದರಿಂದ ಅನೇಕ ಆತಂಕ ದೂರಾಗಿದ್ದರೂ ಅನೇಕ ಹೊಸ ತೊಡಕೂ ಉಂಟಾಗಿವೆ. ಏನೇ ಇರಲಿ. ೭೭ ಕೋಟಿ ಜನಸಂಖ್ಯೆ ಇರುವ ೧೧ ಕೋಟಿ ರೂ. ಗಳ ಉತ್ಪನ್ನವಿರುವ ಮೈಸೂರು ಕರ್ನಾಟಕ ಪ್ರಾಂತದ ಹೊರಗೆ ಉಳಿವುದು ಶಕ್ಯವಿಲ್ಲ. ಅದು ಒಕ್ಕೂಟ ಕರ್ನಾಟಕವಲ್ಲಿ ಲೀನವಾಗಬೇಕು ಇಲ್ಲವೆ ಮೈಸೂರಿನ ಅರಸರು ಘಟನಾತ್ಮಕ ಅರಸರಾಗಿ ಒಕ್ಕೂಟ ಕರ್ನಾಟಕವೇ ಮೈಸೂರಲ್ಲಿ ಸಂಲಗ್ನವಾಗಬೇಕು ಎಂದು ಮುಂತಾಗಿ ಹೇಳಿದರು. ಅಂಧ್ರರ ಕರೆ ನಿಶಾನಿಯ ಮಾತೆತ್ತಿ, ತಮ್ಮದಲ್ಲದ ಒಂದು ಅಂಗುಲ ಭೂಮಿ ಸಹ ಕನ್ನಡಿಗರಿಗೆ ಬೇಡವೆಂದೂ ಅದರಂತೆ ತಮ್ಮದು ಒಂದು ಅಂಗುಲ ಭೂಮಿಯನ್ನು ಹೆರರಿಗೆ ಅವರು ಬಿಟ್ಟುಕೊಡಲು ಸಿದ್ಧರಿಲ್ಲವೆಂದೂ ಖಂಡಿತೋಕ್ತಿಯನ್ನು ನುಡಿದರು. ಕೊನೆಗೆ ಗಡಿ ಭಾಗಗಳಲ್ಲಿ ಕನ್ನಡಿಗರು ಅಂಧ್ರರು ಸೌಹಾರ್ದದಿಂದ ನಡೆದುಕೊಂಡು ಸಮಸ್ಯೆಯನ್ನು ಜಟಿಲಗೊಳಿಸದೆ ಸುಲಭವಾಗಿ ಬಿಡಿಸಿಕೊಳ್ಳಬೇಕೆಂದು ಕೇಳಿಕೊಂಡರು.

ಆ ಮೇಲೆ ಅನೇಕ ಮಹನೀಯರಿಂದ ಪರಿಷತ್ತಿಗೆ ಯಶಸ್ಸು ಕೋರಿ ಬಂದ ಸಂದೇಶಗಳನ್ನು ಓದಿ ಹೇಳಲಾಯಿತು.

ಅಧ್ಯಕ್ಷರ ಭಾಷಣ

ಅನಂತರ ಅಧ್ಯಕ್ಷರಾದ ಶ್ರೀ ಕೆ. ಆರ್. ಕಾರಂತರು ಭಾಷಣ ಮಾಡಿದರು. ಕೇಂದ್ರ ಸರಕಾರದ ಮುಂದೆ ಕಾಶ್ಮೀರ ಹೈದರಾಬಾದಗಳಂಥ ಅನೇಕ ಸಮಸ್ಯೆಗಳಿದ್ದರೂ ಭಾಷಾನ್ವಯ ಪ್ರಾಂತ ರಚನೆಯನ್ನು ಮುಂದೂಡಬೇಕೆಂದು ಇದರ ಅರ್ಥವಲ್ಲ... ಗಡಿ ಸಮಿತಿಯವರು ವಿಚಾರಣೆಗೆ ಬರುವ ಮೊದಲೇ ಖಾಸಗೀ ರೀತಿಯಿಂದಲೂ ಜನಗಣತಿ ನಡೆಸಿ ಸಮಿತಿಯ ಮುಂದೆ ಕನ್ನಡಿಗರ ಪಕ್ಷ ಮಂಡನ ಮಾಡಬೇಕೆಂದೂ ಹೇಳಿದರು.

ಪರಿಷತ್ತಿನ ಪ್ರಾರಂಭದಲ್ಲಿ ಸ್ವಾಗತಾಧ್ಯಕ್ಷರಾದ ಶ್ರೀ ವಾಯ. ಸೋಮಪ್ಪನವರು ಮೂರೂ ತಾಲೂಕುಗಳ ಪ್ರಾಚೀನ ಚರಿತ್ರೆಯನ್ನೂ ಕೆಚ್ಚು ಕನ್ನಡತನವನ್ನೂ ಒಳ್ಳೇ ಹೃದಯಂಗಮವಾಗಿ ವಿವರಿಸಿ ಹೇಳಿದರು.

ಸಂಜೆಗೆ ಪುನಃ ಪರಿಷತ್ತು ಸೇರಿ ಕೆಲ ಗೊತ್ತುವಳಿ ಸ್ವೀಕರಿಸಿ ಮುಕ್ತಾಯವಾಯಿತು. ವಿರೋಧಿಗಳಾದ ಅಂಧ್ರರು ಪೇಟೆಯಲ್ಲಿ ಸಭೆ ಸೇರಿ ಕನ್ನಡಿಗರ ಚಟುವಟಿಕೆಗಳನ್ನು ನಿಷೇಧಿಸಿದರಾಗಿ ತಿಳಿಯುತ್ತದೆ.

ಧರ್ಮಪುರದಲ್ಲಿ ಯುವರಾಜರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಲೀನೀಕರಣದ ಪ್ರಗತಿಪರ ಉಪಾಯ ಕೈಕೊಂಡ ಬಗ್ಗೆ ಸರದಾರ ಪಟೇಲರನ್ನು ಧರ್ಮಪುರ ಮಹಾರಾಜರನ್ನೂ ಅಭಿನಂದಿಸಲಾಯಿತು.

ಪಾಕಿಸ್ತಾನದಲ್ಲಿ ಆಂಗ್ಲೋ ಇಂಡಿಯನರ ಗೋಳು

ಆಂಗ್ಲೋ ಇಂಡಿಯನ್ನರ ಧುರೀಣರಾದ ಫ್ರಾಂಕ ಆ್ಯಂಥನಿಯವರು ಮಸೂರಿಯಲ್ಲಿಯ ಆಂಗ್ಲೋ ಇಂಡಿಯನರ ಸಭೆಯಲ್ಲಿ ತಾ. ೧೨ರಂದು ಮಾತನಾಡುತ್ತ, ಪಾಕಿಸ್ತಾನದಲ್ಲಿ ಆಂಗ್ಲೋ ಇಂಡಿಯನರನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲವೆಂದು ಕಂಡು ಬರುತ್ತದೆ. ಅಲ್ಲಿ ಸ್ವಲ್ಪೇ ಆಂಗ್ಲೋ ಇಂಡಿಯನ್ನರು ಇದ್ದರೂ ಅವರ ಪರಿಸ್ಥಿತಿ ಅಸಹ್ಯವಾಗುತ್ತ ನಡೆದಿದ್ದರಿಂದ ಅನೇಕರು ಈಗಾಗಲೇ ಹಿಂದುಸ್ತಾನಕ್ಕೆ ಹೊರಟು ಬಂದಿದ್ದಾರೆ. ಅಲ್ಪಸಂಖ್ಯಾಕರನ್ನು ಪಾಕಿಸ್ತಾನ ಸರಕಾರವು ಕೆಲಸಗಳಿಂದ ಕಿತ್ತೊಗೆಯಹತ್ತಿದೆ. ಅಲ್ಪಸಂಖ್ಯಾಕರು ಅಲ್ಲಿ ಸ್ವಾಭಿಮಾನ ಸ್ವಗೌರವ ಕಾಯ್ದುಕೊಂಡು ಇರುವದು ದುಸ್ತರವಾಗಿದೆ. ಆದರೆ ಅದೇ ಹಿಂದುಸ್ತಾನದಲ್ಲಿಯೂ ಅಲ್ಪಸಂಖ್ಯಾಕರನ್ನು ಉದಾರ ಭಾವದಿಂದ ನೋಡಿಕೊಳ್ಳಲಾಗುತ್ತಿದೆ. ಆಂಗ್ಲೋ ಇಂಡಿಯನ್ನರಿಗಂತೂ ಕೆಲ ವಿಶಿಷ್ಟ ಆಶ್ವಾಸನಗಳೂ ಕೊಡಲ್ಪಟ್ಟಿವೆ. ಇಷ್ಟೇ ಅಲ್ಲದೆ ಪಾಕಿಸ್ತಾನದಿಂದ ಬಂದವರಿಗೂ ಯೋಗ್ಯ ನಿವೇಶನ ಒದಗಿಸಿ ಕೊಡಲಾಗಿರುವದು. ಇದರಿಂದ ಹಿಂದುಸ್ತಾನ ಪಾಕಿಸ್ತಾನ ಸರಕಾರಗಳಲ್ಲಿ ಇರುವ ವ್ಯತ್ಯಾಸವು ಒಡೆದು ಕಾಣದಿರದು ಎಂದು ಮೊದಲಾಗಿ ಅವರು ವಿವರಿಸಿ ಹೇಳಿದರು.

ಆಹಾರ ವಸ್ತುಗಳ ಬೆಲೆ ತಗ್ಗಿಸಲು ಕೇಂದ್ರದ ಹೊಸ ಯೋಜನೆ

ಆಹಾರ ಶಾಖೆಯ ಸ್ಥಾಯಿ ಸಲಹೆ ಸಮಿತಿಯ ಸಭೆಯು ತಾ ೧೨ಕ್ಕೆ ಕೇಂದ್ರ ಆಹಾರ ಮಂತ್ರಿಗಳಾದ ಶ್ರೀ ಜಯರಾಮದಾಸ ದೌಲತರಾಮರ ಅಧ್ಯಕ್ಷತೆಯಲ್ಲಿ ಸೇರಿತ್ತು. ಕೇಂದ್ರ ಸರಕಾರದ ಸೂಚನೆಯ ಮೇರೆಗೆ ಮದ್ರಾಸ ಸರಕಾರವು ೪ ಸಾವಿರ ಅಗ್ಗದರದ ಅಂಗಡಿಗಳನ್ನೂ ಮುಂಬಯಿ ಸರಕಾರದವರು ೫೫೦ ಅಂಗಡಿಗಳನ್ನೂ ಸೌರಾಷ್ಟ್ರ ಸರಕಾರದವರು ೧೫೦ ಅಂಗಡಿಗಳನ್ನೂ ಪ್ರಾರಂಭಿಸಿದ್ದಾರೆ. ಮುಂಬಯಿ ಪ್ರಾಂತದಲ್ಲಿ ಈ ಅಂಗಡಿಗಳ ಸಂಖ್ಯೆಯನ್ನು ಇನ್ನೂ ಹೆಚ್ಚಿಸಬೇಕೆಂದು ಆ ಸರಕಾರಕ್ಕೆ ತಿಳಿಸಲಾಗಿದೆ. ಆಹಾರ ಪದಾರ್ಥಗಳ ಬೆಲೆಗಳ ಏರುವಿಕೆಯನ್ನು ತಗ್ಗಿಸುವ ಬಗ್ಗೆ ಚರ್ಚೆಯಾಯಿತು. ಇದರ ನಿಜವಾದ ಕಾರಣವೇನೆಂಬುದನ್ನು ಶೋಧಿಸಿ ಬೆಲೆ ಇಳಿಸಲು ಉಪಾಯ ಸೂಚಿಸಲು ಒಂದು ತಜ್ಞ ಸಮಿತಿಯನ್ನು ನೇಮಿಸಬೇಕೆಂದು ಗೊತ್ತಾಯಿತು.

ನಾರಿಗೆ ಮಂತ್ರಿಗಳೊಡನೆ ವಿಚಾರ ವಿನಿಮಯ ಮಾಡಿ ಆಹಾರ ಧಾನ್ಯಗಳ ಸಾಗಾಟದ ಬಗ್ಗೆ ಒಂದು ಹೊಸ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೆಂದೂ ಈ ಯೋಜನೆಯಿಂದ ಆಹಾರ ಪದಾರ್ಥಗಳ ಬೆಲೆಗಳು ತಕ್ಕಮಟ್ಟಿಗೆ ತಗ್ಗಬಹುದೆಂದೂ ಆಹಾರ ಮಂತ್ರಿಗಳು ಹೇಳಿದರು. ಅವಶ್ಯವೆನಿಸಿದರೆ ವಿದೇಶಗಳಿಂದ ಆಹಾರ ಧಾನ್ಯಗಳನ್ನು ಯೋಗ್ಯ ಬೆಲೆ ಕೊಟ್ಟು ತರಿಸಬೇಕೆಂದು ಸಮಿತಿಯು ಸೂಚಿಸಿತು.

ರೇಲ್ವೆ ಪ್ರವಾಸದಲ್ಲಿ ಸ್ತ್ರೀ ರಕ್ಷಣೆ

ಸೌ. ಲಕ್ಷ್ಮೀಬಾಯಿ ವ್ಯಾಸ, ದಾದರ ಹಿಂದು ಕಾಲನಿ ಇವರು ರೇಲ್ವೆ ಪ್ರವಾಸದಲ್ಲಿ ಸ್ತ್ರೀ ರಕ್ಷಣೆಯ ಬಗ್ಗೆ ಹೀಗೆ ಒಂದು ಸಲಹೆ ಕೊಟ್ಟಿದ್ದಾರೆ.

ಸ್ತ್ರೀಯರಿಗಾಗಿ ಪ್ರತ್ಯೇಕ ಡಬ್ಬಿಯನ್ನು ಕೊಡುವದಕ್ಕಿಂತ ಪ್ರತಿ ಡಬ್ಬಿಯಲ್ಲಿಯೂ ಸ್ತ್ರೀಯರಿಗೆ ಒಂದು ಇಲ್ಲವೆ ಎರಡು ಬಾಕುಗಳನ್ನು ಕಾದಿಡುವದು ಸುರಕ್ಷಿತವಾಗಿದೆ. ಸ್ತ್ರೀಯರ ಪ್ರತ್ಯೇಕ ಡಬ್ಬಿಯಲ್ಲಿ ಎಷ್ಟೋಸಲ ಮೋಸಗಾರರು ಬುರುಕೆ ಹಾಕಿಕೊಂಡು ಒಳಹೊಕ್ಕು ಪುಂಡಾಟಿಕೆ ಮಾಡುವ ಸಂಭವವಿದೆ. ಪುರುಷರ ಡಬ್ಬಿಯಲ್ಲಿ ಸ್ತ್ರೀಯರಿದ್ದರೆ ಸಹಜವಾಗಿ ಪುರುಷರು ಸ್ತ್ರೀಯರನ್ನು ಗಂಡಾಂತರದ ಕಾಲಕ್ಕೆ ರಕ್ಷಿಸಬಹುದಲ್ಲದೆ ನೀರು ತಿನಿಸು ಬೇಕಾದಾಗ ಅಸಹಾಯರಾಗಿರುವ ಸ್ತ್ರೀಯರಿಗೆ ನಿಲ್ದಾಣಗಳಲ್ಲಿಳಿದು ಅವನ್ನು ತಂದೂ ಕೊಡಬಹುದು ಎಂದು ಮೊದಲಾಗಿ ಅನೇಕ ಅನುಕೂಲತೆಗಳನ್ನು ವಿವರಿಸಿ ಪುರುಷರ ಡಬ್ಬಿಯಲ್ಲಿಯೇ ಸ್ತ್ರೀಯರಿಗಾಗಿ ಸ್ಥಳ ಕಾಯ್ದಿರಿಸಬೇಕೆಂದು ಸಕಲ ಸ್ತ್ರೀಯರೂ ಸಭೆ ಸೇರಿ ಗೊತ್ತುವಳಿ ಮಾಡಿ ಸರಕಾರಕ್ಕೆ ಹಾಗೆ ಬರೆದು ತಿಳಿಸಬೇಕೆಂದು ಆರಿಕೆ ಮಾಡಿಕೊಂಡಿದ್ದಾರೆ.

ಬಹುಮುಖ ಪ್ರತಿಭೆಯ ಮೌಂಟಬ್ಯಾಟನ್

ಹೊರಟುನಿಂತ ಗವರ್ನರ ಜನರಲ್ಲರ ವ್ಯಕ್ತಿಚಿತ್ರ

"ಆಪಾಯಕರ ಸಾಹಸಗಳಿಗಾಗಿ ನಾನು ತಕ್ಕಷ್ಟು ಹೆಸರಾಗಿದ್ದೇನೆ," ಎಂದು ಲಾರ್ಡ ಲುಯಿ ಮೌಂಟಬ್ಯಾಟನ್ನರು ಹಿಂದುಸ್ತಾನದ ವೈಸರಾಯರಾಗಿ ಬಂದ ಕೆಲ ದಿನಗಳಲ್ಲೆ ಹೇಳಿದ್ದರು. "ನಾನಿಲ್ಲಿಗೆ ಬಂದಿರುವದು ಕೊನೆಯ ವೈಸರಾಯನಾಗಲು," ಎಂದೂ ಅವರು ನಿಸ್ಸಂದಿಗ್ಧವಾಗಿ ಸಾರಿದ್ದರು.

ಹಾಗೆಯೆ ವೇಳೆ ಕಳೆಯದೆ ಅವರು ಹಿಂದೀ ನಾಯಕರೊಡನೆ ಮಾತುಕತೆ ನಡೆಸಿದರು. ಹಿಂದುಸ್ತಾನ ಒಂದಾಗಿ ಉಳಿಯುವದು ಅಸಾಧ್ಯವೆಂಬ ಅರಿವು ಬಂದೊಡನೆ ಅದನ್ನು ತುಂಡು ಮಾಡಲು ನಿರ್ಣಯಿಸಿದರು. ಅದು ಅಪಾಯಕರ ಸಾಹಸವೇ ನಿಜವಾಗಿತ್ತು. ಆದರೆ ಪಾಲು ಬೇಡಿದವರಿಗೆ ತಮ್ಮ ಹಕ್ಕಿನದಕ್ಕಿಂತ ಏನೂ ಹೆಚ್ಚಿಗೆ ದೊರೆಯದಂತೆ ನೋಡಿಕೊಂಡರವರು. ಈ ಶಸ್ತ್ರಕ್ರಿಯೆಯ ನಂತರ ಹೇಳಲಾರದಷ್ಟು ರಕ್ತಸ್ರಾವವಾಯಿತು. ಆದರೆ ಮೌಂಟಬ್ಯಾಟನ್ನರಿಗೆ ಬೇರೆ ಹಾದಿಯಿರಲಿಲ್ಲ. ಸಾಮ್ರಾಜ್ಯದ ಮತ್ತು ಸಾಮ್ರಾಜ್ಯಶಾಸಕರ ಕರ್ಮದ ಫಲ ಅಪರಿಹಾರ್ಯವಾಗಿತ್ತು. ಬ್ರಿಟಿಶರು ಹೊರಡಲನುವಾಗಿದ್ದಾರೆಂಬದನ್ನು ತೋರಿಸಿ ಕೊಡಲು ಅದೊಂದೇ ಉಪಾಯವಾಗಿತ್ತು. ಆದುದರಿಂದ ಅವರು ಅಪಾಯಕರ ಸಾಹಸ ಮಾಡಿದರು



ಗವರ್ನರ ಜನರಲ್ಲರಾಗಿ ಪ್ರತಿಜ್ಞೆ ಮಾಡಿದ ಬಳಿಕ

ಮತ್ತು ತಮ್ಮ ಕೊನೆಯ ವೈಸರಾಯತನವನ್ನು ಸಿದ್ಧಮಾಡಿ ತೋರಿಸಿದರು. ದಿಲ್ಲಿಯಲ್ಲಿಯೂ ಕರಾಚಿಯಲ್ಲಿಯೂ ಅಧಿಕಾರವನ್ನು ಹಿಂದೀ ಪ್ರತಿನಿಧಿಗಳಿಗೆ ತಾವೇ ದಾನಮಾಡಿ, ಆರು ತಿಂಗಳೊಳಗೆ ಬ್ರಿಟಿಶ ಸೈನ್ಯಗಳನ್ನು ಸ್ವದೇಶಕ್ಕೆ "ಪಾರ್ಸೆಲ" ಮಾಡಿ ಇಂದು (ಜೂನ ೨೧) ಭಾರತದ ಗವರ್ನರ ಜನರಲ್ ಪದವಿಯನ್ನು ಹಿಂದೀಯನೊಬ್ಬನಿಗೆ ಒಪ್ಪಿಸುತ್ತಿದ್ದಾರೆ ಮೌಂಟಬ್ಯಾಟನ್. ಬ್ರಿಟಿಶ ಆಳಿಕೆಯ ಇತಿಹಾಸದಲ್ಲಿ ಎಲ್ಲ ವೈಸರಾಯ–ಗವರ್ನರ ಜನರಲ್ಲರ ಕಾಲಕ್ಕಿಂತಲೂ ಅವರ ಕಾಲದಲ್ಲಿ ಈ ದೇಶದಲ್ಲಾದ ರಕ್ತಪಾತ ಹೆಚ್ಚು. ಆದರೂ ಅವರು ಭಾರತದ ಸಾಗರತೀರವನ್ನು ಬಿಡುವಾಗ ಭಾರತೀಯರ ಸ್ನೇಹವನ್ನು ಸಂಗಡ ಒಯ್ಯುತ್ತಿದ್ದಾರೆ. "ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯ" ತಾನೆಂಬ ನಿಷ್ಠುರ ಅಭಿಮಾನದಿಂದ ಹೊರಟ ಹಿಂದೀ ಘಟನಾ ಸಮಿತಿಯಿಂದು ಬ್ರಿಟಿಶ ಸಾಮ್ರಾಜ್ಯದಿಂದ ಹೊರಬೀಳಬೇಕೋ ಬೇಡವೊ ಎಂಬ ತೊಡಕಿನಲ್ಲಿ ಬಿದ್ದಿದ್ದರೆ ಅದು ಮೌಂಟಬ್ಯಾಟನ್ನರ ಸ್ನೇಹ ಬಂಧನದಿಂದ.

ಇದು ವಿಚಿತ್ರವೆನ್ನಿರಿ, ಇದು ವಿಧಿಯ ಪ್ರತೀಕಾರವೆನ್ನಿರಿ ಅಥವಾ ಇದೊಂದು ಬರಿ ಕಾಕತಾಲೀಯವೆನ್ನಿರಿ– ಸಾಮಾನ್ಯ ಕುಲದ ಯಹೂದ್ಯ ಮುಖ್ಯಮಂತ್ರಿ ಡಿಸ್ರೇಲಿ ವಿಕ್ಟೋರಿಯಾ ರಾಣಿಯನ್ನು ಭಾರತ ಸಾಮ್ರಾಜ್ಞಿಯೆಂದು ಸಾರಿದ್ದರೆ, ಲಾರ್ಡ ಕುಲದ, ರಾಜ ಕುಟುಂಬದ, ಅದರಲ್ಲೂ ವಿಕ್ಟೋರಿಯಾ ರಾಣಿಯ ಮರಿಮಗನಾದ ಮೌಂಟಬ್ಯಾಟನ್ನರ ಪಾಲಿಗೆ ಆ ಸಾಮ್ರಾಜ್ಯವನ್ನು ವಿಸರ್ಜಿಸಿ, ಇಂಗ್ಲಂಡಿನ ಸಾಮ್ರಾಜರನ್ನು ಕೇವಲ "ರಾಜ"ರಾಗಿ ಮಾಡುವ ಕೆಲಸ ಬಂತು. ಏನೂ ಹೊಟ್ಟೆಕಿಚ್ಚಿಲ್ಲದೆ ಇದನ್ನು ಸಾಧಿಸುವ ಸಾಮರ್ಥ್ಯ ಮತ್ತಾರಿಗೂ ಬರಲಿಲ್ಲ.

ಜಪಾನದ ಮೇಲೆ ಉಗ್ರ ದಾಳಿಯನ್ನು ಪ್ರಾರಂಭಿಸಬೇಕಾದರೆ ಇನ್ನೂ ೪೦ ರ ಆರಂಭದಲ್ಲಿದ್ದ ಲಾರ್ಡ ಲುಯಿ ಮೌಂಟಬ್ಯಾಟನ್ನರನ್ನು ಆಗ್ನೇಯ ಏಶಿಯಾ ಅಧಿಪತ್ಯದ ಮುಖ್ಯ ಸೇನಾಪತಿಯನ್ನಾಗಿ ನೇಮಿಸಿದಾಗ, ಇದು ಬ್ರಿಟಿಶ ದುರಭಿಮಾನ, ಇದಕ್ಕೆ ರಾಜವಂಶದ ಸೂತ್ರಚಾಲನೆಯೆ ಕಾರಣವೆಂದು ಗೊಣಗುಟ್ಟಿದವರು ಹಲವರು. ಅಮೇರಿಕನ್ ನೌಕಾಮಂತ್ರಿ ಕರ್ನಲ್ ನಾಕ್ಸರನ್ನು ಕೆಲ ಸೂಕ್ಷ್ಮ ಸ್ವಭಾವದ ಅಮೇರಿಕನ್ನರು ಹೀಗೇಕೆ? ಎಂದು ವಿಚಾರಿಸಿದರು. "ಏಕೆಂದರೆ, ಅವರೇ ಎಲ್ಲರಿಗಿಂತ ಉತ್ತಮ ಜನ" ಎಂದು ನಾಕ್ಸರು ಉತ್ತರಿಸಿದರೆ ಅವರಿಗೆ ಅಷ್ಟು ಸಮಾಧಾನವಾಗಿರಲಿಲ್ಲ.

ಅವರ ಶಂಕೆ ನಿಷ್ಕಾರಣವಾಗಿರಲಿಲ್ಲ. ನೌಕಾಪಡೆಯಲ್ಲಿ ಮೌಂಟಬ್ಯಾಟನ್ನರಿಗೆ ದೊರೆತ ತೀರ್ಗಡೆಗಳು ಮಿಂಚಿನ ತೀರ್ಗಡೆಗಳೆಂದು ಹೇಳಿದರೆ ತಪ್ಪಲ್ಲ. ಯುದ್ಧ ಪ್ರಾರಂಭವಾದಾಗ ಅವರು ಬರಿ ಕ್ಯಾಪ್ಟನ್ ಪದವಿಯಲ್ಲಿದ್ದರು. ಈಗ ಅಡ್ಮಿರಲ್ ಮಾಡಿ ಧೂರ್ತ ಜಪಾನರನ್ನು ಓಡಿಸಲು ಈ "ಎಳೆ ಹುಡುಗ"ನನ್ನು ನೇಮಿಸಿದರೆ ಬೆಳ್ಳಿಗೂದಲಿನ ಹಿರಿಯರು ಮೂಗು ಮುರಿದದ್ದು ಆಶ್ಚರ್ಯವೆ?

ಮೌಂಟಬ್ಯಾಟನರ ಕಲ್ಪನೆಗಳೂ ಯುದ್ಧಕಲಾ ಪಂಡಿತರಿಗೆ ಸರಿ ಹೋಗುತ್ತಿರಲಿಲ್ಲ. ಅವರು ತೀರ "ತಲೆ ತಿರುಕ" ರೆಂದು ಹಳಬರ ಭಾವನೆಯಾಗಿತ್ತು. ಎಲ್ಲದರಲ್ಲಿಯೂ ಅವಸರ. ಕೃತಿಯಿಂದ ಇನ್ನೂ ಸಾಧ್ಯವೆಂದು ಸಿದ್ಧವಾಗಿರದ ಹೊಸ ಹೊಸ ಗತ್ತುಗಳು. ಅರಣ್ಯಮಯವಾದ ಬ್ರಹ್ಮದೇಶವನ್ನು ಗೆದ್ದುಕೊಳ್ಳಲು ನೌಕಾಬಲ ಮತ್ತು ವಿಮಾನ ಬಲದ ಸಂಯೋಜನೆಯ ಉಪಾಯ! ಎಂಥ ಹುಚ್ಚು. ದಿಲ್ಲಿಯಲ್ಲಿ ಕುಳಿತಿದ್ದ ನುರಿತ ಯುದ್ಧಕಲಾ ಕೋವಿದರು ನಕ್ಕರು. ಆದರೆ ಮೌಂಟಬ್ಯಾಟನ್ನರು ತಮ್ಮ ಯೋಜನೆಗಳನ್ನು ಯಶಸ್ವಿಯಾಗಿ ಮಾಡಿ ತೋರಿಸಿ "ಅರ್ಲ ಅಫ್ ಬರ್ಮಾ" ಎಂಬ ಬಿರುದು ಗಳಿಸಿದರು.

ಯುವರಾಜನ ಸಂಗಡಿಗ

ಮೌಂಟಬ್ಯಾಟನ್ನರು ಹುಟ್ಟಿದ್ದು ೧೯೦೦, ಜೂನ್ ೨೫ ಕ್ಕೆ. ಅವರ ತಾಯಿ ವಿಕ್ಟೋರಿಯಾ ರಾಣಿಯ ಮೊಮ್ಮಗಳು; ತಂದೆ ಜರ್ಮನ್ ರಾಜಕುಮಾರ ಲುಯಿ ಬ್ಯಾಟನ್ ಬರ್ಗ. ಅವರು ಇಂಗ್ಲಂಡಿನಲ್ಲೆ ಬಂದ್ದು ನೆಲಸಿ ಅಲ್ಲಿಯ ಪ್ರಜೆಯಾದರು. ಮೊದಲಿನ ಮಹಾಯುದ್ಧ ಕಾಲದಲ್ಲಿ ಬ್ರಿಟಿಶ ನೌಕಾ ಮಂತ್ರಿಯಾಗಿದ್ದ ಬ್ಯಾಟನ್‌ಬರ್ಗರ ಮೇಲೆ, ಜರ್ಮನಿಯ ಮೇಲಿನ ಮೋಹದಿಂದ ಹಲವು ಗುಟ್ಟುಗಳನ್ನು ಜರ್ಮನಿಗೆ ತಿಳಿಸಿದರೆಂಬ ಆರೋಪ ಕೂಡ ಬಂದಿತ್ತು. ನಿಜವಾಗಿ, ಈ ಕೂಗು ಬಹಳವಾಗಿ ಎದ್ದು ಕೊನೆಗೂ ಅವರು ನೌಕಾ ಮಂತ್ರಿಪದವನ್ನು ಚರ್ಚಿಲ್ಲರಿಗೆ ಬಿಟ್ಟುಕೊಡಬೇಕಾಯಿತು. ಮಾತ್ರವಲ್ಲ, ಬ್ರಿಟನ್ನಿನಲ್ಲಿ ಆಗ ಹಬ್ಬಿದ್ದ ಜರ್ಮನ್ ವಿರೋಧಿ ಭಾವನೆಯ ತೀಕ್ಷ್ಣತೆಯನ್ನು ಕಂಡು ಅವರು ತಮ್ಮ ಹೆಸರನ್ನು ಕೂಡ ಮೌಂಟಬ್ಯಾಟನ್ ಎಂದು ಆಂಗ್ಲೀಕರಿಸಿದರು.

ಹನ್ನೆರಡನೆ ವಯಸ್ಸಿನಲ್ಲೆ ನೌಕಾಪಡೆಯಲ್ಲಿ ಸೇರಿ ಕೆಲಸ ಮಾಡಲಾರಂಭಿಸಿದ ಲುಯಿ ಮೌಂಟಬ್ಯಾಟನ್ನರು ಇಂಥ ಅದ್ಭುತ ವ್ಯಕ್ತಿಯಾಗಬಹುದೆಂದು ಯಾರೂ ಎಣಿಸಿರಲಿಲ್ಲ. ನಿಜವಾಗಿ ಅವರು ನೌಕಾ ಪರಿಭಾಷೆಗಳನ್ನು ಕಲಿಯುವದರಲ್ಲಿ ದಡ್ಡರೇ ಆಗಿದ್ದರು. ಆದರೆ ಅಂದಿನಿಂದಲೂ ಅವರಲ್ಲಿದ್ದ ಒಂದು ಗುಣವೆಂದರೆ ಹಟಯೋಗ. ಆ ಹಟದ ಬಲದಿಂದ ಅವರು ಆ ವಿದ್ಯೆಯನ್ನು ಕಲಿತರಷ್ಟೇ ಅಲ್ಲ, ಅದರ ಮೇಲೆ ಪುಸ್ತಕಗಳನ್ನು ಬರೆಯುವಷ್ಟು ಪ್ರಭುತ್ವವನ್ನು ಸಂಪಾದಿಸಿದರು.

೧೯೨೦ ರಲ್ಲಿ ಅವರು ಯುವರಾಜನ (ಈಗ ವಿಂಡ್ಸರ ಡ್ಯೂಕ) ಸಂಗಾತಿಯಾಗಿ ನೇಮಿಸಲ್ಪಟ್ಟರು. ಯುವರಾಜಗೆ ಪೋಲೋದ ವ್ಯಸನ. ಮೌಂಟಬ್ಯಾಟನ್ ಅದರಲ್ಲಿ ಬೆಪ್ಪನಂತೆ ಕಾಣಿಸುತ್ತಿದ್ದರು. ಆದರೆ ಕೆಲದಿನಗಳಲ್ಲಿಯೆ ಆ ವಿದ್ಯೆಯ ನಾಡಿಯನ್ನೂ ಅವರು ಹಿಡಿದರು. ಗುಪ್ತನಾಮದಿಂದ ಪೋಲೋದ ಮೇಲೆಂದು ಪಠ್ಯ ಪುಸ್ತಕವನ್ನೂ ಬರೆದರು.

ಯುವರಾಜರಿಗೂ ಮೌಂಟಬ್ಯಾಟನ್ನರಿಗೂ ಗೆಳೆತನ ಗಾಢವಾಗಿ ಬೆಳೆಯಿತು. ಒಂದು ದೃಷ್ಟಿಯಿಂದ ಅವರಿಬ್ಬರೂ ಒಂದೇ ಜಾತೀಯ ಹಕ್ಕಿಗಳು. ಸಂಪ್ರದಾಯದ ಬಗ್ಗೆ ಅಶ್ರದ್ಧೆ, ಹೃದಯ ವೈಶಾಲ್ಯ, ವಿಚಾರ ಸ್ವಾತಂತ್ರ್ಯ ಅವರಿಬ್ಬರಿಗೂ ಸಮಾನವಾದ ಗುಣಗಳು. ಒಲಿದ ಹೆಣ್ಣಿಗಾಗಿ ಸಾಮ್ರಾಜ್ಯವನ್ನು ತ್ಯಜಿಸಿದವನೊಬ್ಬ; ಬ್ರಿಟಿಶ ಹಡಗನ್ನು ಉಳಿಸಲು ಸಾಮ್ರಾಜ್ಯವೆಂಬ ಭಾರವಾದ ಸರಕನ್ನು ಸಮುದ್ರಕ್ಕೊಗೆಯಲು ಮುಖಿಯಾದವನಿನ್ನೊಬ್ಬ. ಸಿಂಗಾಪುರದಲ್ಲಿ ಇನ್ನೂ ಆಗ್ನೇಯ ಏಶಿಯಾ ರಂಗದ ಮುಖ್ಯ ಸೇನಾಪತಿಯಾಗಿದ್ದಾಗಲೆ ಸಾಮ್ರಾಜ್ಯದ ನಿಷ್ಠುರ ಶತ್ರು ಪಂಡಿತ ಜವಾಹರರೊಡನೆ– ಅದೇ ಬ್ರಿಟಿಶ ಸೆರೆಮನೆಯಿಂದ ಹೊರ ಬಂದಿದ್ದರವರು— ಮೌಂಟಬ್ಯಾಟನ್ನರು ಗೆಳೆತನ ಮಾಡಿದ್ದು ತೀರ ದಿಟ್ಟತನದ ಕೆಲಸವೇ ಸರಿ.

ಬಿರುಗಾಳಿ ಪ್ರಣಯ

ಜವಾಹರಲಾಲರಂತೆ ಮೌಂಟಬ್ಯಾಟನ್ನರೂ ಒಂದು ಬಗೆಯ ಬಿರುಗಾಳಿ. ಅವರ ಪ್ರಣಯ ಪ್ರಸಂಗ ಕೂಡ ಇದಕ್ಕೆ ಹೊರತಲ್ಲ. ದಿಲ್ಲಿಯೇ ಅವರ ಪ್ರಣಯ ಪ್ರಸಂಗದ ರಂಗವಾಗಿದ್ದುದನ್ನು ಅವರೀಗಲೂ ನೆನೆದುಕೊಳ್ಳುತ್ತಾರೆ. ಈ ಶತಮಾನದ ಎರಡನೆ ದಶಕದಲ್ಲಿ ಸರ್ ಎಡ್ವರ್ಡ ಕ್ಯಾಸೆಲ್ಲರೆಂಬ ನವಕೋಟಿ ನಾರಾಯಣರ ಮೊಮ್ಮಗಳಾದ ಎಡ್ವಿನಾ ಅಶ್ಲಿಯನ್ನು ಕೆಲವೇ ದಿನಗಳ ಬಿರುಗಾಳಿ ಪ್ರಣಯ ಸಂಧಾನದ ನಂತರ ಒಲಿಸಿಕೊಂಡು ಮದುವೆಯಾದರು. ಅವರಿಬ್ಬರ ವಿವಾಹೋತ್ತರ ಪ್ರಣಯ ವಿಹಾರವೂ ಬಿರುಗಾಳಿಯಂತೆ ದಿಲ್ಲಿಯಲ್ಲಿ ಪ್ರಾರಂಭವಾಗಿ ಹಾಲಿವುಡ್ಡಿನಲ್ಲಿ ಮುಗಿಯಿತು. ಅವರಿಗೆ ಈಗ ಇಬ್ಬರು ಹೆಣ್ಣು ಮಕ್ಕಳು— ಪೆಟ್ರೀಶಿಯಾ ಮತ್ತು ಪಮೆಲಾ. ಇವರಲ್ಲದೆ ಅವರ ಭಗಿನಿಯ ಮಗನಾದ ಗ್ರೀಕ ರಾಜಕುಮಾರ ಫಿಲಿಪ್ಪನನ್ನೂ ಸಾಕಿದವರು ಮೌಂಟಬ್ಯಾಟನ್ ದಂಪತಿಗಳೆ. ಈ ಯುವಕನೀಗ ಬ್ರಿಟನ್ನಿನ ಭಾವಿ ರಾಣಿ ಎಲಿಜಬೇತಳ ಕೈಹಿಡಿದು ಭಾಗ್ಯಶಾಲಿಯಾಗಿದ್ದಾನೆ.

ಮೌಂಟಬ್ಯಾಟನ್ ದಂಪತಿಗಳು ಸ್ವಭಾವದಲ್ಲಿಯೂ ಒಂದೇ ಜತೆ. ರಾಜರಕ್ತದ ಅವರು ಜನಸಾಮಾನ್ಯರಲ್ಲಿ ಇಷ್ಟು ಹೊಂದಿಕೆಯಾಗಿ ಬೆರೆಯುವದು ವಿಲಕ್ಷಣವೇ ಸರಿ. ಗಾಂಧೀಜಿಯ ಸ್ಮಶಾನ ಯಾತ್ರೆಯ ಕಾಲದಲ್ಲಿ ಅವರಿಬ್ಬರು ದಿಲ್ಲಿಯ ಆ ಉರಿ ಬಿಸಿಲಲ್ಲಿ ಎಲ್ಲರಂತೆ, ಎಲ್ಲರೊಡನೆ ಸೇರಿ ಸಾಗಿದ್ದನ್ನು ನೋಡಿದ ಯಾವಾತನೂ ಅವರ ನೈಜವಾದ ನಯಭಾವಕ್ಕೆ ಮಾರುಹೋಗದಿರಲಾರ. ನೆಲದ ಮೇಲೆ ಕೂಡುವದೆಂದರೆ ಬಿಳಿಜನರಿಗೆ ಒಂದು ಶಿಕ್ಷೆಯೇ ಸೈ. ಆದರೆ ಈ ದಂಪತಿಗಳು ಉಳಿದ ದುಃಖಿಗಳೊಡನೆ ತಾವೂ ಹಿಂದೀಯರಂತೆ ನೆಲದ ಮೇಲೆ ಕುಳಿತು ಮಹಾತ್ಮನಿಗೆ ಗೌರವ ಅರ್ಪಿಸಿ ತಾವೂ ಆದರವನ್ನು ಸಂಪಾದಿಸಿದರು. ಸ್ವಾತಂತ್ರ್ಯ ದಿನದಂದು,(ಅಗಸ್ಟ ೧೫, ೧೯೪೭) ದಿಲ್ಲಿಯ ಜನಜಂಗುಳಿ ಹಳೆಯ ಎಲ್ಲ ದ್ವೇಷ

[೧೧ನೆಯ ಪುಟಕ್ಕೆ]



ಮೌಂಟಬ್ಯಾಟನ್ ಮತ್ತು ಜವಾಹರ



ಪೋಲೋ ಸವಾರ

ಕ ರ್ಮ ವೀ ರ

ಶ್ರೀಮುಖ್ಯಾ ಸಂಖ್ಯ ವಿಕ್ರಮ ವರ್ಷ ೮೦೫
ಜೇಷ್ಠ ಶು|| ೧೪ ಸೋಮವಾರ

ನಿಜಾಮರ ದುರಾಗ್ರಹ ಧೋರಣ

ಹಿಂದುಸ್ತಾನ ಮತ್ತು ಹೈದರಾಬಾದ ಸರಕಾರಗಳಲ್ಲಿ ಸುದೀರ್ಘ ಕಾಲದ ವರೆಗೆ ನಡೆದ ಮಾತುಕತೆಗಳು ವಿಫಲವಾದವೆಂದು ಬೇರೆ ಬೇರೆ ಕೊಟ್ಟ ಪ್ರಕಟನೆಯಿಂದ ಸ್ಪಷ್ಟವಾಗುವದು. ಹಿಂದುಸ್ತಾನದ ಮುಖ್ಯ ಮಂತ್ರಿಗಳು ಸುದ್ದಿಗಾರರ ಸಭೆಯಲ್ಲಿ ತಮ್ಮ ಧೋರಣವನ್ನು ವಿವರಿಸುತ್ತ, 'ನಿಜಾಮರ ಮುಂದೆ ಈಗ ಇಟ್ಟ ಒಪ್ಪಂದದ ಕರಾರುಗಳನ್ನು ಹಿಂದೆ ತೆಗೆದುಕೊಳ್ಳುವದಿಲ್ಲ; ನಿಜಾಮರು ಮನಸ್ಸಿಗೆ ಬಂದಾಗ ಅವುಗಳನ್ನು ಒಪ್ಪಿಕೊಳ್ಳಬಹುದು' ಎಂದು ಹೇಳಿ ತಮ್ಮ ಸರಕಾರವು 'ತೆರೆದ ಬಾಗಿಲು' ಧೋರಣವನ್ನನುಸರಿಸಿದೆಯೆಂದು ಸ್ಪಷ್ಟೀಕರಿಸಿದರು. ಆದರೆ ಅದೇ ಕಾಲಕ್ಕೆ ಹಿಂದುಸ್ತಾನ ಸರಕಾರವು ಅನಿಯಮಿತ ಅವಧಿಯವರೆಗೆ ಒಡಂಬಡಿಕೆಯ ದಾರಿಯನ್ನು ನೋಡುತ್ತ ಕೂಡ್ರಲಾರದು; ನೋಡುವದು ಇಷ್ಟವೂ ಆಗಲಾರದು. ಅಂತೆಯೇ ಹಿಂದುಸ್ತಾನ ಸರಕಾರವು ಯಾರ ಸಲುವಾಗಿಯೂ ದಾರಿ ನೋಡುವದಿಲ್ಲ. ಈ ವಿಷಯದಲ್ಲಿ ತಮಗೆ ಸರಿದೋರಿದ ಉಪಾಯಗಳನ್ನು ಕೂಡಲೆ ಕೈಕೊಳ್ಳಲಾಗುವದು' ಎಂದು ಪಂಡಿತ ಜವಾಹರಲಾಲರು ಸಾರಿ ಹೇಳಿದ್ದಾರೆ. ಮಧ್ಯಂತರ ಅವಧಿಯಲ್ಲಿ ಆರ್ಥಿಕ ದಿಗ್ಬಂಧನಗಳನ್ನು ಬಿಗಿಗೊಳಿಸಿ ಅವಶ್ಯವೆನಿಸಿದ ಸಂರಕ್ಷಣೋಪಾಯಗಳನ್ನು ಕೈಕೊಳ್ಳಲಾಗುವದೆಂದೂ ಹೇಳಿರುವರು. ಸರಕಾರದ ಒಪ್ಪಂದದ ಕರಾರುಗಳು ಉದಾರವಾಗಿದ್ದು ಇವುಗಳಿಗಿಂತ ಹೆಚ್ಚಿನ ಔದಾರ್ಯದ ಧೋರಣವನ್ನು ಅದು ವಹಿಸಲಾರದು; ಈ ಕರಾರುಗಳನ್ನು ಇಳಿಸುವದೂ ಶಕ್ಯವಿಲ್ಲ ಎಂದೂ ಸ್ಪಷ್ಟೀಕರಿಸಿದ್ದಾರೆ.

ಹಿಂದುಸ್ತಾನ ಸರಕಾರದ ಕರಾರುಗಳನ್ನು ನೋಡಿದರೆ ಪಂಡಿತ ಜವಾಹರಲಾಲರು ಹೇಳಿದಂತೆ ಅವು ತೀರ ಔದಾರ್ಯದವಾಗಿರುವವೆಂಬುದೂ ಅವುಗಳನ್ನು ಇನ್ನು ಇಳಿಸುವದೆಂದರೆ ಹಿಂದುಸ್ತಾನ ಸರಕಾರವೇ ಹೈದರಾಬಾದಕ್ಕೆ ಅಧೀನ ರಾಷ್ಟ್ರವಾಗಿ ಉಳಿದಂತಾಗುವುದೆಂಬುದೂ ಸುಸ್ಪಷ್ಟವಿದೆ. ಹೈದರಾಬಾದದ ಮುಂದೆ ಎರಡೇ ಎರಡು ಮಾರ್ಗಗಳಿದ್ದವು. ಅವೆಂದರೆ, ಸೇರ್ಪಡೆ ಮತ್ತು ಸಾರ್ವಭೌಮತ್ವ ಮೊದಲನೆಯದರಂತೆ ಅದು ಹಿಂದುಸ್ತಾನದಲ್ಲಿ ಸೇರಿ ಇತರ ಸಂಸ್ಥಾನಗಳಂತೆ ಹಕ್ಕುಗಳನ್ನು ಪಡೆಯಬೇಕು; ಎರಡನೆಯದಾದ ಸಾರ್ವಭೌಮತ್ವದ ಮಾರ್ಗದಲ್ಲಿ ಸೇರ್ಪಡೆಯ ಒಪ್ಪಂದವಿಲ್ಲದೆ ಹಿಂದುಸ್ತಾನಕ್ಕೆ ಸೇರ್ಪಡೆಯಲ್ಲಿರುವ ಎಲ್ಲ ಅಧಿಕಾರಗಳೂ ಪ್ರಾಪ್ತವಾಗುತ್ತವೆ. ಅಂತೆಯೇ ಈ ಮಾರ್ಗವನ್ನು ಯಾವ ಸಂಸ್ಥಾನಗಳೂ ಅನುಸರಿಸಿರುವದಿಲ್ಲ. ಆದುದರಿಂದ ಅದನ್ನು ಬಿಟ್ಟುಕೊಡಲಾಗಿದೆ. ಇದರಲ್ಲಿಯೂ ಒತ್ತಾಯವಿಲ್ಲೆಂಬೂ ಅವರು ಸ್ಪಷ್ಟಪಡಿಸಿರುತ್ತಾರೆ. ಹೈದರಾಬಾದ ಸರಕಾರಕ್ಕೆ ಕೊಟ್ಟ ಇತರ ಸೌಕರ್ಯಗಳೊಡನೆ ಅಲ್ಲಿಗೆ ಎಲ್ಲ ತರದ ಸರಕು ಅನಿರ್ಬಂಧ ಹೋಗುವಂತೆ ವ್ಯವಸ್ಥೆ ಮಾಡುವದು, ಅದರ ಆರ್ಥಿಕ ಅಭಿವೃದ್ಧಿಗೆ ಸಹಾಯ ಮಾಡುವದು, ಯಾವದೇ ಬಗೆಯ ಪಕ್ಷಪಾತ ಮಾಡದಿರುವದು ಮೊದಲಾದ ಸವಲತ್ತುಗಳನ್ನೂ ಹಿಂದುಸ್ತಾನ ಸರಕಾರವು ಕೊಡಲು ಸಿದ್ಧವಾಗಿದ್ದಿತು. ಒಪ್ಪಂದಕ್ಕೆ ಒಪ್ಪಿದಂತಾಗಿ ಕೇವಲ ಸಹಿ ಮಾಡುವದೊಂದೇ ಉಳಿದಿದ್ದಿತು. ಇಷ್ಟರಲ್ಲಿ ನಿಜಾಮ ಸಾಹೇಬರು ಫರ್ಮಾನ ಹೊರಡಿಸಿ ಒಪ್ಪಂದದ ಕರಾರುಗಳನ್ನು ನಿರಾಕರಿಸಿರುವರು. ಅಲ್ಲದೆ ಮಾತುಕತೆ ಮುರಿಯಲು ಭಾರತ ಸರಕಾರವೇ ಕಾರಣವೆಂದೂ ಅದರ ಏಕಾಧಿಪತ್ಯದ ಮತ್ತು ಬಲಾತ್ಕಾರದ ಧೋರಣದ ಮೂಲಕವೇ ಮಾತುಕತೆ ಮುರಿದವೆಂದೂ ಹೇಳಿದ್ದಾರೆ. ಒಡಂಬಡಿಕೆಯ ಕರಡಿನಲ್ಲಿಯ ಕಲಮುಗಳನ್ನು ಓದಿದರೆ ನಿಜಾಮರ ಪ್ರಕಟನೆ ಎಷ್ಟು ವಿಸಂಗತವಾಗಿದೆಂಬುದು ಗೊತ್ತಾಗುವದು.

ಹೈದ್ರಾಬಾದಕ್ಕೆ ಯುದ್ಧೋಪಕರಣಗಳು ಹೋಗದಂತೆ ನೋಡಿಕೊಳ್ಳುವದು, ಗಡಿಗಳಲ್ಲಿ ದುರ್ಘಟನೆಗಳಾಗದಂತೆ ಎಲ್ಲ ಬಗೆಯ ವ್ಯವಸ್ಥೆಯಿಡುವದತ್ಯವಶ್ಯವಾಗಿದೆ. 'ತೆರೆದ ಬಾಗಿಲು' ಧೋರಣ ವಹಿಸಿ ಸ್ವಸ್ಥ ಕುಳಿತರೆ ನಿಜಾಮ ಸೈನಿಕರು ಮತ್ತು ರಜಾಕಾರರು ಹಿಂದೀ ಪ್ರಜೆಗಳನ್ನು ಬಗೆಬಗೆಯಾಗಿ ಪೀಡಿಸುವ ಸಂಭವವಿದೆ. ಹಿಂದುಸ್ತಾನ ಸರಕಾರದವರು ಯಾವದೇ ಬಗೆಯ ಉಗ್ರ ಧೋರಣ ಕೈಕೊಳ್ಳುವ ಮೊದಲೆ ಹೈದರಾಬಾದ ನಿಜಾಮ ಸರಕಾರವು ತನ್ನ ಧೋರಣದ ಪುನರ್ವಿಮರ್ಶೆ ಮಾಡಿ ಹಿಂದುಸ್ತಾನ ಸರಕಾರದ ಕೂಡ ಒಡಂಬಡಿಕೆ ಮಾಡಿಕೊಂಡು ಮುಂದಾಗಬಹುದಾದ ಅನರ್ಥ ಪರಂಪರೆಗಳನ್ನು ತಪ್ಪಿಸುವದೆಂದು ನಾವು ಬಲವಾಗಿ ನಂಬಿದ್ದೇವೆ.

ಈಮನ್ ಡಿ. ವೆಲರಾ



ಈ ಶತಮಾನದ ಮೂರನೆ ದಶಕದಲ್ಲಿ ಅಯರ್ಲಂಡಿಗೆ ಸ್ವಾತಂತ್ರ್ಯ ದೊರೆತಂದಿನಿಂದ ೧೫ ವರ್ಷಗಳ ವರೆಗೆ ಅಯರ್ಲಂಡಿನ ಮುಖ್ಯ ಮಂತ್ರಿಯಾಗಿ ಅಯರಿಶ್ ಜನತೆಯ ಸಾರಥ್ಯ ನಡೆಸಿದ, ಈ ಬಾರಿ ಚುನಾವಣೆಯಲ್ಲಿ ಸೋತ ಈಮನ್ ಡಿ. ವೆಲರಾ ಅವರು ಈ ವಾರ ಹಿಂದುಸ್ತಾನಕ್ಕೆ ಭೆಟ್ಟಿ ಕೊಟ್ಟರು. ಅಯರ್ಲಂಡಿನ ಸ್ವಾತಂತ್ರ್ಯದ ಹೋರಾಟದಲ್ಲಿ ಡಿ. ವೆಲರಾ ಅವರು ಅದ್ವಿತೀಯ ತ್ಯಾಗದಿಂದ ಕೆಲಸ ಮಾಡಿದರು. ಆದರೆ ಅವರ ಮಹತ್ವಾಕಾಂಕ್ಷೆ ಸಂಪೂರ್ಣವಾಗಿ ಸಾಧಿಸಲಿಲ್ಲ. ಹಿಂದುಸ್ತಾನವನ್ನು ಹೇಗೋ ಹಾಗೆಯೆ ಅಯರ್ಲಂಡನ್ನೂ ಬ್ರಿಟಿಶರು ಇಬ್ಭಾಗ ಮಾಡಿದರು. ಇಂದಿಗೂ ಈ ಎರಡು ಅಯರ್ಲಂಡುಗಳನ್ನು ಒಂದುಗೂಡಿಸುವದೇ ಡಿ ವೆಲರಾರ ಜೀವನಧ್ಯೇಯವಾಗಿದೆ. ಆದುದರಿಂದ ಭಾರತೀಯರ ಹೃದಯವನ್ನು ಅವರು ಎಲ್ಲರಿಗಿಂತ ಹೆಚ್ಚಾಗಿ ಅರಿಯಬಲ್ಲರು. "ವಿಭಜನೆಯಿಂದ ಅಲ್ಪಸಂಖ್ಯಾಕ ಸಮಸ್ಯೆ ಬಗೆಹರಿಯಲಾರದು. ಒಂದು ಅಲ್ಪಸಂಖ್ಯಾಕ ಸಮಸ್ಯೆಯ ಬದಲು ಅದರಿಂದ ಎರಡು ಸಮಸ್ಯೆಗಳು ಹುಟ್ಟುತ್ತವೆ" ಎಂದವರು ದಿಲ್ಲಿ ಮತ್ತು ಮುಂಬಯಿ ನಗರಗಳಲ್ಲಿ ಮಾಡಿದ ಭಾಷಣಗಳಲ್ಲಿ ಹೇಳಿದರು. ಹಿಂದೀ ಸ್ವಾತಂತ್ರ್ಯ ಹೋರಾಟದಲ್ಲಿ ಅಯರ್ಲಂಡು ವಿಶೇಷ ಆಸ್ಥೆವಹಿಸಿತ್ತು. ಅವರ ಸ್ವಾತಂತ್ರ್ಯ ಸಿದ್ಧಿಯಾದುದಕ್ಕೆ ತಮಗೆ ಆನಂದವಾಗಿದೆಯೆಂದೂ ಅವರು ಹೇಳಿದರು. ಕಲಕತ್ತೆ, ದಿಲ್ಲಿ, ಮುಂಬಯಿಗಳಲ್ಲಿ ಅವರಿಗೆ ಕಾಂಗ್ರೆಸ ಮುಂದಾಳುಗಳು ಸಂಭ್ರಮದ ಸ್ವಾಗತವಿತ್ತರು.

ವಾ ರ ದ ಸಿಂ ಹಾ ವ ಲೋ ಕ ನ

ಪಾಕಿಸ್ತಾನದಲ್ಲಿನ ಅಲ್ಪಸಂಖ್ಯಾಕರು

ಅಲ್ಪಸಂಖ್ಯಾಕರನ್ನು ಅತ್ಯುತ್ತಮ ರೀತಿಯಿಂದ ನಡೆಯಿಸಿಕೊಳ್ಳಲಾಗುತಿದೆ, ಅವರ ಹಕ್ಕುಬಾಧ್ಯತೆಗಳೆಲ್ಲ ಸುರಕ್ಷಿತವಾಗಿವೆ-ಎಂದು ಮುಂತಾಗಿ ಪಾಕಿಸ್ತಾನ ಸರಕಾರದವರು ಮೇಲಿಂದ ಮೇಲೆ ಜಂಭ ಕೊಚ್ಚಿಕೊಳ್ಳುವುದುಂಟು. ಆದರೆ ಪಾಕಿಸ್ತಾನದಲ್ಲಿರುವ ಅಲ್ಪಸಂಖ್ಯಾಕರ ಅನುಭವವಾದರೋ ತೀರ ತದ್ವಿರುದ್ಧವಾಗಿದೆ. ಹಿಂದು ಮುಸಲ್ಮಾನರಲ್ಲಿ ಅನೇಕ ಕಾರಣಗಳಿಗಾಗಿ ಒಂದು ಬಗೆಯ ಭಿನ್ನಾಭಿಪ್ರಾಯವಿದ್ದುದರಿಂದ ಪಾಕಿಸ್ತಾನದ ವಿರುದ್ಧ ಹಿಂದುಗಳು ಹೇಳುವದು ಒಂದಿಷ್ಟು ಅತಿಶಯೋಕ್ತಿಯಿದೆಂದು ಹೇಳಬಹುದಾದರೂ ಬೇರೆ ಜಾತಿಯವರ ಅನುಭವವೂ ಅಷ್ಟೇ ಕಟುವಾಗಿದೆಂಬುದು ವಿಚಾರಣೀಯವಾಗಿದೆ. ಅಂಗ್ಲೋ ಇಂಡಿಯನ್ ಧುರೀಣರಾದ ಫ್ರಾಂಕ ಅಂಥನಿಯವರು ಮುಸೂರಿಯಲ್ಲಿ ಒಂದು ಸಭೆಯಲ್ಲಿ ಮಾತಾಡುತ್ತ, ಪಾಕಿಸ್ತಾನದಲ್ಲಿರುವ ಅಂಗ್ಲೋ-ಇಂಡಿಯನ್ನರ ಹೀನ ಸ್ಥಿತಿಯನ್ನು ಬಣ್ಣಿಸಿ ಧರ್ಮಾಂಧ ರಾಷ್ಟ್ರದಲ್ಲಿ ಉಳಿದ ಜಾತಿಯವರ ಹಕ್ಕುಬಾಧ್ಯತೆ ಕಡೆಗಣಿಸಲಾಗುವವೆಂಬುದರ ನಿದರ್ಶನವಿದೆಂದು ಹೇಳಿದರು. ಒಟ್ಟಿಕ್ಕೆ ಹಿಂದುಸ್ತಾನದಲ್ಲಿಯ ಪರಿಸ್ಥಿತಿ ತಾವು ಬಣ್ಣಿಸಿದಂತೆ ಚೆನ್ನಾಗಿ ಇದೆಂದು ಪ್ರಶಂಸಿಸಿರುವರು. ಲಾಹೋರಿನಲ್ಲಿಯ ಅಂಗ್ಲೋ-ಇಂಡಿಯನ್ನರು ತಮ್ಮ ಕಷ್ಟನಷ್ಟಗಳ ನಿವಾರಣೆಯ ಬಗ್ಗೆ ಗೊತ್ತುವಳಿ ಮಾಡಿ ಗಿಬನ್ನರ ನೇತೃತ್ವದಲ್ಲಿ ಬ್ಯಾ. ಜಿನ್ನಾರವರ ಕಡೆಗೆ ಶಿಷ್ಟಮಂಡಳ ಒಯ್ದುದೂ ಉಂಟು. ಪಾಕಿಸ್ತಾನ ಗವರ್ನರ ಜನರಲ್ಲರು ಈ ಸಮಸ್ಯೆಯನ್ನು ಸಹಾನುಭೂತಿಪೂರ್ವಕ ವಿಚಾರ ಮಾಡಿ ಅಲ್ಪ ಸಂಖ್ಯಾಕರ ಹಕ್ಕುಬಾಧ್ಯತೆಗಳು ರಕ್ಷಿಸಲ್ಪಟ್ಟು ಮುಸಲ್ಮಾನ ಬಹುಸಂಖ್ಯಾಕರಿಂದ ಯಾವದೇ ಬಗೆಯ ತೊಂದರೆ ತೊಡಕುಗಳುಂಟಾಗದಂತೆ ನೋಡಿಕೊಳ್ಳುವದು ಕರ್ತವ್ಯವಾಗಿದೆ.

ಅಫಗಾಣಿಸ್ತಾನದ ಬೇಡಿಕೆ

ಅಫಗಾಣ ಗುಡ್ಡಗಾಡು ಜನರ ಸಮಸ್ಯೆ ಪಾಕಿಸ್ತಾನ ಸರಕಾರದ ತಲೆತಿನ್ನುತ್ತಿದೆ. ಅಫಗಾಣಿಸ್ತಾನ ಸರಕಾರವು ಇಡೀ ವಾಯವ್ಯ ಸರಹದ್ದುಪ್ರಾಂತ ಮತ್ತು ಬಲೂಚಿಸ್ತಾನಗಳ ಮೇಲೆ ತನ್ನ ಹಕ್ಕನ್ನು ಪ್ರಸ್ತಾಪಿಸಲು ಪ್ರಾರಂಭಿಸಿದೆ. ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ಕರಾಚಿಯ ಮೇಲೆಯೂ ಅವರ ಹಕ್ಕು ಇದೆಯೆಂದು ಹೇಳಲಾಗುತ್ತದೆ. ಇವೆಲ್ಲದಕ್ಕೆ ಪುಷ್ಟಿ ಕೊಡುವಂತೆ ಅಫಗಾಣಿಸ್ತಾನ ಸರಕಾರದ ಮುಖಪತ್ರಿಕೆಯಾದ 'ಅನಿಸ್'ದಲ್ಲಿ ಒಂದು ಲೇಖವು ಪ್ರಸಿದ್ಧವಾಗಿದೆ. ಸಿಂಧು ನದಿಯ ಬಲದಂಡೆಯಲ್ಲಿ ೬೦೦ ಮೈಲು ಪಾಕಿಸ್ತಾನ ಪ್ರದೇಶದ ಮೇಲೆ ಅಫಗಾಣಿಸ್ತಾನದ ಹಕ್ಕು ಇದ್ದು ಪಾಕಿಸ್ತಾನ ಸರಕಾರವು ಇದಕ್ಕೊಪ್ಪದಿದ್ದರೆ ಅಂತರಿಕ ತೊಂದರೆಗೊಳಗಾಗಬೇಕಾಗುವದೆಂದು ಅದರಲ್ಲಿ ಸೂಚಿಸಲಾಗಿದೆ. ಅಫಗಾಣಿಸ್ತಾನದ ಈ ಬೇಡಿಕೆಯನ್ನು ಮನ್ನಿಸಿದರೆ ಪಶ್ಚಿಮ ಪಾಕಿಸ್ತಾನವೇ ಕರಗಿಹೋಗುವದು. ಸ್ವತಂತ್ರ ಆಡಳಿತ ಸಾಗುವಷ್ಟು ಪ್ರದೇಶ ಆದರಲ್ಲಿ ಉಳಿಯಲಿಕ್ಕಿಲ್ಲ. ತನ್ನೀ ಬೇಡಿಕೆಗಾಗಿ ಧರಣೀ ಹೂಡುವಷ್ಟು ಇಲ್ಲವೆ ಒತ್ತಾಯಪಡಿಸುವಷ್ಟು ಸಾಮರ್ಥ್ಯ ಇಂದು ಅಫಗಾಣಿಸ್ತಾನ ಸರಕಾರದಲ್ಲಿ ಇಲ್ಲದ್ದರಿಂದ ಪಾಕಿಸ್ತಾನವು ಅಷ್ಟೊಂದು ಗಾಬರಿಗೊಳ್ಳುವ ಕಾರಣವಿಲ್ಲ. ಆದರೆ ಪರಕೀಯ ರಾಷ್ಟ್ರಕ್ಕೆ ಕೈವಾಡ ನಡೆಸಲು ಮಾತ್ರ ಇದರಿಂದ ಬೇಕಾದಷ್ಟು ಅವಕಾಶ ಸಿಕ್ಕಂತಾಯಿತು. ಇದಕ್ಕಾಗಿ ಗವರ್ನರ ಜನರಲ್ ಬ್ಯಾ. ಜಿನ್ನಾಸಾಹೇಬರು ತಲೆಹುರಿಸಿಕೊಳ್ಳಬೇಕಾಗುವದು. ಹೊಸದಾಗಿ ರಾಜ್ಯ ಸ್ಥಾಪಿಸಿಕೊಂಡ ಅವರಿಗೆ ಅದನ್ನು ಸುಭದ್ರವಾಗಿ ಇಟ್ಟುಕೊಳ್ಳಲು ಇನ್ನೆಷ್ಟೋ ಕುತ್ತುಗಳನ್ನು ದಾಟಬೇಕಾಗುವದು.

ಸಮಯೋಚಿತ ಸಲಹೆ

ಹಿಂದುಸ್ತಾನ ಸರಕಾರದ ನಿಯೋಜಿತ ಗವರ್ನರ ಜನರಲ್ಲರಾದ ಮಾನ್ಯ ರಾಜಗೋಪಾಲಾಚಾರಿಯವರು ಕಲಕತ್ತೆಯಲ್ಲಿ ಪೂರ್ವ ವಣಿಕ್ ಸಂಘದವರು ಏರ್ಪಡಿಸಿದ ಭೋಜನ ಸಮಾರಂಭದಲ್ಲಿ ಮಾತನಾಡುತ್ತ ಕೆಲ ಮನನೀಯ ವಿಚಾರಗಳನ್ನು ಹೇಳಿರುವರು. ಮಹಾತ್ಮರು ಹಾಕಿಕೊಟ್ಟ ದಾರಿಯನ್ನು ಅನುಸರಿಸಿದರೇನೇ ಬಂಗಾಲ ಮತ್ತು ಹಿಂದುಸ್ತಾನದಲ್ಲಿ ಸುಖ ನೆಲೆಸುವದೆಂದು ಅವರು ಅಭಿಪ್ರಾಯಪಟ್ಟಿದ್ದರು. ಪಕ್ಷೋಪಪಕ್ಷಗಳಲ್ಲಿ, ವರ್ಗವರ್ಗಗಳಲ್ಲಿ, ಬಹುಸಂಖ್ಯಾಕರ ಬಲದ ಮೇಲೆ ಆಡಳಿತವನ್ನು ಸಾಗಿಸುವ ಮಂತ್ರಿಗಳು ಮತ್ತು ಅಲ್ಪಸಂಖ್ಯಾಕರಲ್ಲಿ, ಮಂತ್ರಿಗಳು ಮತ್ತು ಸರಕಾರದ ಶಾಶ್ವತ ನೋಕರರಲ್ಲಿ ಸ್ನೇಹಸೌಹಾರ್ದ ಭಾವವನ್ನುಂಟು ಮಾಡುವದು ಗವರ್ನರ ಮತ್ತು ಗವರ್ನರ ಜನರಲ್ಲರ ಮುಖ್ಯ ಕೆಲಸವಾಗಿದೆ. ಆಯಾ ಜನಗಳಲ್ಲಿನ ತಿಕ್ಕಾಟವನ್ನು ತಪ್ಪಿಸಿ ದೇಶವು ಸುಖಸಮೃದ್ಧಿಯಲ್ಲಿ ತೇಲುವಂತೆ ಮಾಡುವದೂ ಅವರ ಹೊಣೆಯಾಗಿದೆಂದು ರಾಜಾಜಿಯವರು ಹೇಳಿದರು. ಬಹುಸಂಖ್ಯಾಕರ ಆಡಳಿತದಲ್ಲಿ ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳು ರಕ್ಷಿಸಲ್ಪಡದಿದ್ದರೆ ಆಡಳಿತವು ಅಸಹ್ಯವಾದೀತೆಂದೂ ಅವರು ಎಚ್ಚರಿಕೆ ಕೊಟ್ಟಿರುವರು. ಬಹುಮತ ಪಕ್ಷದ ಸರಕಾರವಿದ್ದಲ್ಲಿ ಅಲ್ಪಸಂಖ್ಯಾಕರ ರಕ್ಷಣೆಯು ಸರಕಾರದ ಮುಖ್ಯ ಹೊಣೆಯಾಗಿದೆ. ಆದರೆ ಆಯಾ ಮಂತ್ರಿಮಂಡಳಗಳು ತಮ್ಮ ಬಹುಮತವನ್ನು ಕಾಯ್ದುಕೊಳ್ಳುವುದಕ್ಕಾಗಿ ಅಲ್ಪಸಂಖ್ಯಾಕರ ಬೇಡಿಕೆಗಳತ್ತ ದುರ್ಲಕ್ಷ್ಯ ಮಾಡುವದುಂಟು. ಹೀಗಾಗಬಾರದೆಂದೇ ಗವರ್ನರ ಜನರಲ್ಲರು ಸಮಯೋಚಿತ ಸಲಹೆ ಕೊಟ್ಟಿರುವರು. ಬಂಗಾಲ ಸರಕಾರದ ನವಕರ ವರ್ಗವನ್ನು ಪ್ರೇರಿಸಿ ಹಿಂದೊಮ್ಮೆ ಭಾಷಣಮಾಡುತ್ತ ರಾಜಾಜಿಯವರು, ನವಕರರು ಮತ್ತು ಪ್ರಜೆಗಳಲ್ಲಿ ಸೌಹಾರ್ದಭಾವನೆಯಿದ್ದು ನವಕರರು ಪ್ರಜೆಗಳ ಸೇವಕರೆಂಬ ಭಾವನೆಯಿಂದ ಕಾರ್ಯಕಲಾಪಗಳನ್ನು ಸಾಗಿಸಬೇಕೆಂದು ಉಪದೇಶಿಸಿದ್ದುಂಟು. ಮಾನ್ಯ ರಾಜಾಜಿಯವರ ಉಪದೇಶದತ್ತ ಆಯಾ ಮಂತ್ರಿಮಂಡಲಗಳು ಮತ್ತು ನವಕರರು ಗಮನವಿಟ್ಟು ತಮ್ಮ ತಮ್ಮ ಕರ್ತವ್ಯ ಮತ್ತು ಹೊಣೆಯನ್ನು ನಿರ್ವಹಿಸುವದು ಅತ್ಯಂತ ಅವಶ್ಯವಾಗಿದೆ.

ಬ್ರಹ್ಮದೇಶದಲ್ಲಿ ಕಮ್ಯುನಿಝಂ

ಏಶಿಯಾದ ಅಧಿಕೃತ ಸರಕಾರದ ಪ್ರತಿನಿಧಿಯೊಬ್ಬ ಇತಿಹಾಸದಲ್ಲೆ ಮೊದಲನೆ ಬಾರಿ ರಶಿಯನ್ ಮಾದರಿಯಲ್ಲಿ ಕಮ್ಯುನಿಸ್ಟ ತತ್ವವನ್ನು ತನ್ನ ದೇಶ ಅನುಸರಿಸುವದೆಂದು ಕಳೆದ ವಾರ ಸಾರಿದನು. ಬ್ರಹ್ಮೀ ಮುಖ್ಯ ಮಂತ್ರಿ ಥಾಕಿನ್ ನೂನೇ ಆ ವ್ಯಕ್ತಿ. ಸುತ್ತಲೂ ಬಂಡವಲಗಾರ ಪದ್ಧತಿಯ ರಾಜ್ಯಗಳಿದ್ದರೂ ಬ್ರಹ್ಮದೇಶ ಕಮ್ಯುನಿಸ್ಟ ತತ್ವವನ್ನನುಸರಿಸುವದಲ್ಲದೆ ರಶಿಯಾದ ಕೂಡ ಅರ್ಥಿಕ ಮತ್ತು ರಾಜಕೀಯ ಸಂಬಂಧವನ್ನು ಬೆಳೆಸಲು ಪ್ರಯತ್ನಿಸುವದೆಂದು ಅವರು ಹೇಳಿದ್ದರಿಂದ ಆಂಗ್ಲೋ-ಅಮೇರಿಕನ್ ವರ್ಗಗಳಲ್ಲಿ ಗಾಬರಿಯುಂಟಾಗಿದೆ. ಕೈಕಾಲು ಕಳೆದುಕೊಂಡವರಲ್ಲಿ ಮೊದಲನೆಯವರೆಂದರೆ ಬ್ರಿಟಿಶ ಬಂಡವಲುಗಾರರು. ಕೋಟ್ಯಂತರ ಪೌಂಡುಗಳನ್ನು ಅವರು ಬ್ರಹ್ಮದೇಶದಲ್ಲಿ ವ್ಯಾಪಾರೋದ್ಯೋಗಗಳಲ್ಲಿ ತೊಡಗಿಸಿದ್ದಾರೆ. ೧೯೧೭ರಲ್ಲಿ ರಶಿಯಾದಲ್ಲಿ ಲೆನಿನ್ನರ ಸರಕಾರ ಮಾಡಿದಂತೆ ಬ್ರಹ್ಮೀಯರೂ ದೇಶದಲ್ಲಿದ್ದ ಎಲ್ಲ ವಿದೇಶೀ ಬಂಡವಲು ಮತ್ತು ವಿದೇಶೀ ಸಾಲಗಳನ್ನು ರದ್ದುಗೊಳಿಸಿಬಿಟ್ಟರೇನು ಗತಿ? ಆದರೆ ಅದಕ್ಕಿಂತಲೂ ಭಯಾನಕವಾದ ಪರಿಣಾಮಗಳನ್ನೂ ನಿರೀಕ್ಷಿಸಲಾಗಿದೆ. ಝೆಕೊಸ್ಲೊವಾಕಿಯಾ ಮೊದಲಾದ ದೇಶಗಳ ಅನುಭವವನ್ನು ನೋಡಿದರೆ ಒಮ್ಮೆ ಕಮ್ಯುನಿಸ್ಟರ ಮೀಸೆ ಹೊಕ್ಕಿತೆಂದರೆ ಅವರು ಇಡಿ ದೇಶವನ್ನೆ ಆಕ್ರಮಿಸುವರೆಂಬದು ಖಂಡಿತ. ಇಂಡೋ-ಚೀನ, ಇಂಡೊನೇಶಿಯಾ, ಚೀನ, ಮಲಯ ಮೊದಲಾದ ಸುತ್ತಮುತ್ತಲ ರಾಜ್ಯಗಳಲ್ಲಿ ಬಿಳಿಯರ ಸಾಮ್ರಾಜ್ಯವಾದದ ಫಲವಾಗಿ ಕಮ್ಯುನಿಝಂನ ಪ್ರತಿಷ್ಠೆ ಬೆಳೆಯುತ್ತಿದೆ. ಹೀಗಿರುವಾಗ ಅದಕ್ಕೆ ಬ್ರಹ್ಮದೇಶದಲ್ಲಿ ಅಧಿಕೃತ ಸ್ಥಾನ ದೊರಕಿದರೆ ಪರಿಣಾಮವೇನೆಂದು ಹೇಳಬೇಕೆ? ಈ ಅಪಾಯವನ್ನೆದುರಿಸಲು ಹಿಂದುಸ್ತಾನವೇ ಮೊದಲಾದ ದೇಶಗಳಿಗೆ ಅಮೇರಿಕೆ ಅರ್ಥಿಕ ಸಹಾಯ ನೀಡಬೇಕೆಂದು ಬ್ರಿಟಿಶ "ಮೆಂಚೆಸ್ಟರ್ ಗಾರ್ಡಿಯನ್" ಸೂಚಿಸಿದೆ. ಉದಕಮಂಡಲದಲ್ಲಿ ಕಳೆದವಾರ ಇಂಥ ಸೂಚನೆಯನ್ನು ರಾಯಭಾರಿ ಗ್ರೇಡಿಯವರು ನಿರಾಕರಿಸಿದಂತೆಯೆ ಮಾಡಿದ್ದರು. ಏಶಿಯದಲ್ಲಿ "ಕಮ್ಯುನಿಝಂನ ಗಂಡಾಂತರ" ನೈಜವಾದ ಹೊರತು ಅಮೇರಿಕನ್ ಧನಸಹಾಯ ಏಶಿಯಾಕ್ಕೆ ದೊರಕಲಾರದೆಂದು ಕೆಲದಿನಗಳ ಹಿಂದೆ ಗುಂಥರ ಸ್ಟೀನರು ಬರೆದಿದ್ದರು. ಈಗ ಅದು ಬಹಳ ನೈಜವಾಗಿಪರಿಣಮಿಸಿದ್ದರಿಂದ ಅಮೇರಿಕನ್ನರು ತಮ್ಮ ವಿಚಾರಗಳನ್ನು ಬದಲಿಸಿದರೂ ಬದಲಿಸಬಹುದು.

ರೂಪರಂಗ

"ಬಾಂಬೆ ಟಾಕೀಸಿ"ನ ಸ್ಥಿತಿ

ಕಳೆದ ೫ ವರ್ಷಗಳಿಂದ 'ಬಾಂಬೆ ಟಾಕೀಸಿ'ನ ಪರಿಸ್ಥಿತಿ ಕೆಟ್ಟಿದೆ. ದಿವಂ. ಹಿಮಾಂಶುರಾಯರ ಕಾಲದಲ್ಲಿ ಅದು ಬಹಳ ಚೆನ್ನಾಗಿ ನಡೆದು ಒಳ್ಳೆಯ ಕೀರ್ತಿಯನ್ನು ಗಳಿಸಿತು. ಆದರೀಗ ಕಲಾಸಿಷ್ಟರ ಅಭಾವದಿಂದ ನಿರ್ದೇಶಕರ ಲಾಭಬಡಕತನದಿಂದ ೩೦೦ ಕ್ಕೇರಿದ್ದ ೧೦೦ ರ ಶೇರು ೧೦೦ ಕ್ಕೂ ಕೆಳಗಿಳಿವಂತಾಗಿದೆ.

ಈ ಟಾಕೀಸಿನವರು ಚೆನ್ನಾಗಿ ತಯಾರಿಸಿದ ಕಡೆಯ ಚಿತ್ರವೆಂದರೆ 'ಕಿಸ್ಮತ್' ಅದಾದ ಬಳಿಕ ತಯಾರಾದವೆಲ್ಲ ಕಂಪನಿಯ ಯೋಗ್ಯತೆಗೆ ಸಲ್ಲದ, ನಷ್ಟಕರವೆನಿಸಿದ ಚಿತ್ರಗಳು. ಕೆಲಸಗಾರರ ಕಡಿತಾಯ, ಅವರಿಗೆ ಸಂಬಳ ಸಾರಿಗೆ ಸರಿಯಾಗಿ ಕೊಡದಿರುವುದು ಇತ್ಯಾದಿ ಅವ್ಯವಸ್ಥೆಯಿಂದ ಒಂದೆರಡು ಸಲ ಮುಷ್ಕರದ ಬೆದರಿಕೆ ಕೂಡ ನಿರ್ದೇಶಕರನ್ನು ಆವರಿಸಿತ್ತು.

ಸದ್ಯಃ ಅಶೋಕ ಕುಮಾರ ಮತ್ತು ಎಸ್. ವಚ ಇವರು ನಿರ್ಮಾಣ ಶಾಖೆಯನ್ನು ಸಂಪೂರ್ಣವಾಗಿ ತಮ್ಮ ಆಡಳಿತಕ್ಕೆ ತೆಗೆದುಕೊಂಡಿದ್ದಾರೆ. ಇವರು ಕಂಪೆನಿಗೆ ಮೊದಲಿನ ಗೌರವವನ್ನು ತರಿಸಿ ಕೊಡತಕ್ಕ ಚಿತ್ರಗಳನ್ನು ತಯಾರಿಸುವರೆಂದು ನಂಬಬಹುದಾಗಿ ಬಲ್ಲವರು ಹೇಳುತ್ತಾರೆ. ನಮ್ಮದಾದರೂ ಅದೇ ಅಭಿಪ್ರಾಯ. ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಿ ಕೆಲಸಗಾರರಿಗೆ ಪಗಾರ, ಭತ್ತೆ ಮುಂತಾದವನ್ನು ನ್ಯಾಯವಾಗಿ ಸಲ್ಲಿಸುವ ವ್ಯವಸ್ಥೆಯಾಗುವುದೂ ಚಿತ್ರ ನಿರ್ಮಿತಿಯಲ್ಲಿ ಕಲಾಕುಶಲತೆಯಷ್ಟೇ ಅಗತ್ಯವಾದ ಸಾಧನವೆಂಬುದನ್ನು ನಾವಿಲ್ಲಿ ಒತ್ತಿ ಹೇಳದಿರಲಾರೆವು.

ಅವಮಾನಕರ

ಇತ್ತೀಚೆಗೆ ತಯಾರಾದ ಗುಜರಾತಿ ಚಿತ್ರಗಳು ಪ್ರಾಂತಕ್ಕೇ ಅವಮಾನಕರವಾಗುವಂತಿವೆಯೆಂದು "ಫಿಲ್ಮಿಂಡಿಯಾ" ಪತ್ರಿಕೆ ಸಾರಿದೆ. ಈ ಗುಜರಾತಿ ಚಿತ್ರಗಳಿಂದ ಪ್ರೇಕ್ಷಕರು ಹಿಂದೆ ಗುಜರಾತೆಂಬದು ಹುಡುಗಿಯರ ಬೇಟೆಯಾಡುವ ಮತ್ತು ಅಫೀಮು ತಿನ್ನುವ ಅರಸರು, ಆಸ್ಥಾನ ವಿಧೂಷಕರೆನಿಸಿದ ಸಚಿವರು, ಕಳ್ಳರೂ ಪಾಪಿಗಳೂ ಎನಿಸಿದ ವ್ಯಾಪಾರಿಗಳು, ಸೂಳೆಯರೆನಿಸಿದ ಹೆಂಗಸರು ಮತ್ತು 'ಶತದಡ್ಡ'ರೆನಿಸಿದ ಸಾಮಾನ್ಯ ಜನರು ಇವರಿಂದ ತುಂಬಿತ್ತು ಎಂದು ತಿಳಿಯಬೇಕಾಗುತ್ತದೆ! ಚಿತ್ರಗಳಲ್ಲಿ ಗುಜರಾತಿನ ವೈಭವದ ಕುರುಹೊಂದೂ ಇಲ್ಲ, ಅವರ ಜೀವನದ ಅತಿ ಹಾಸ್ಯಾಸ್ಪದವಾದ, ಅಸಹ್ಯವಾದ ಅಂಶಗಳಷ್ಟನ್ನು ಮಾತ್ರ ಕಾಣಬಹುದಾಗಿದೆ. ಈ ಕಾಡುತನ ಹೋಗುವುದೆಂದು? ಗುಜರಾತಿನ ಸಂಸ್ಕೃತಿಯ ಬಗ್ಗೆ ಜಂಭ ಕೊಚ್ಚುವವರೆಲ್ಲ ನಿದ್ರಿಸುತ್ತಿರುವರೆ? ಅವರನ್ನು ಕುಂಭಕರ್ಣ ಬಂದು ಬಡಿದುಕೊಂಡನೆ? ಎಂದು ಒಬ್ಬರು ಹೇಳುತ್ತಾರೆ.

ನ್ಯೂಯಾರ್ಕಿನಲ್ಲಿ ಭಾರತೀಯ ಚಿತ್ರ

ಹಿಂದುಸ್ತಾನದಲ್ಲಿ ತಯಾರಾದ "ರಾಮರಾಜ್ಯ" ಎಂಬ ಚಿತ್ರವೀಗ ನ್ಯೂಯಾರ್ಕಿನಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಪ್ರಕಾಶ ಕಂಪನಿಯವರು ಅದನ್ನು ನಿರ್ಮಿಸಿದವರು. "ಇಂಡಿಯಾ ಸೊಸಾಯಿಟಿ ಆಫ್ ಅಮೇರಿಕ" ಅಥವಾ "ಈಸ್ಟ್—ವೆಸ್ಟ್ ಅಸೋಸಿಯೇಶನ್" ಎಂಬ ಸಂಸ್ಥೆ ಈ ಕೆಲಸದಲ್ಲಿ ಮುಂದಾಳಾಗಿ ನಿಂತಿದೆ. ಹೀಗೆ ಭಾರತದಲ್ಲಿ ಉತ್ತಮವೆನಿಸಿದ ಕೆಲವಾರು ಚಿತ್ರಗಳನ್ನು ನ್ಯೂಯಾರ್ಕ, ಲಂಡನ್, ಬರ್ಲಿನ್, ಪ್ಯಾರಿಸ್ ಮತ್ತು ಮಾಸ್ಕೋಗಳಲ್ಲಿ ಪ್ರದರ್ಶಿಸುವುದು ಹಿಂದೀ ಸಂಸ್ಕೃತಿ ಪ್ರಚಾರಕ್ಕೆ ಅತ್ಯಂತ ಅವಶ್ಯಕವೆಂಬುದನ್ನು ಇಲ್ಲಿ ಒತ್ತಿ ಹೇಳದಿರಲಾಗದು. ಹಿಂದೀ ಚಿತ್ರ ನಿರ್ಮಾಪಕರು ಇತ್ತ ಕಡೆ ಗಮನಿಸುವರೆ?

೧೮೫೭

೧೮೫೭ ರಲ್ಲಿ ನಡೆದ ಶಿಪಾಯಿದಂಗೆ ಅಥವಾ ಹಿಂದೀ ಸ್ವಾತಂತ್ರ್ಯ ಸಮರವನ್ನು ಇತಿಹಾಸಭ್ಯಾಸಿಗಳೆಲ್ಲರೂ ಬಲ್ಲರು. ಅದನ್ನು ವಸ್ತುವನ್ನಾಗಿ ತೆಗೆದುಕೊಂಡು "ಮುರಾರಿ ಪಿಕ್ಚರ್ಸಿ"ನವರು ಸಿನೆಮ ಒಂದನ್ನು ತಯಾರಿಸಿದ್ದಾರೆ. ಮೋಹನ ಸಿಂಹರು ದಿಗ್ದರ್ಶಕರು; ಚಿತ್ರ ಹಿಂದುಸ್ತಾನಿಯಲ್ಲಿದೆ. ಸುರೇಂದ್ರ, ವಾಸ್ತಿ, ಮದನಪುರಿ, ಸುರಾಯ, ಮೇನಕಾ, ಲಕ್ಷ್ಮಿ ಮುಂತಾದವರು ತಾರತಾರೆಯರು. ಮುಂಬಯಿಯ ಲ್ಯಾಮಿಂಗಟನ್ ರಂಗದಲ್ಲಿ ಇದನ್ನು ಪ್ರದರ್ಶಿಸಲಾಗುತ್ತಿದೆ.

ಇದು ಮೋಸಗೊಳಿಸುವ ಹೆಸರುಳ್ಳ ಚಿತ್ರ. ಕಥೆ ಯದ್ವಾತದ್ವಾ ರಚಿತವಾಗಿದೆ. ಅಭಿನಯ ಅಸ್ತವ್ಯಸ್ತ. ಕುಳಿತರೆ ಎಷ್ಟು ಹೊತ್ತಿಗೆ ಎದ್ದು ಹೋಗೋಣ ಎಂಬ ತವಕ ಉದಯಿಸುತ್ತದೆ. ಇಲ್ಲಿ ಹಿಂದುಸ್ತಾನದ ಅತಿ ವೈಭವದ, ಪ್ರತಾಪದ ಪ್ರದರ್ಶನ ನಡೆದ ಐತಿಹಾಸಿಕ ಸಂಗತಿಯನ್ನು ಬಹಳ ಕ್ಷುದ್ರವಾಗಿ ಕಾಣುವಂತೆ ಮಾಡಲಾಗಿದೆ. ಇದು ನಿಂದ್ಯ.

ಹೆಣ್ಣು ಹೂವೂ ಹೌದು, ಮುಳ್ಳೂ ಹೌದು!

ನವಯುಗ ಚಿತ್ರಪಟದವರು "ಫೂಲ್ ಔರ್ ಕಾಂಟೆ" ಎಂಬ ಚಿತ್ರವನ್ನು ತಯಾರಿಸಿದ್ದಾರೆ. ಇಂದರ ರಾಜರು ಕತೆಗಾರರು, ಸಂಭಾಷಣ ರಚಕರು. ವಿಶ್ವಾಮಿತ್ರ ಆದಿಲರು ಗೀತ ರಚಕರು. ಲಲಿತಾ ಪವಾರ, ಸಾಳವಿ, ಸರೋಜ ಬೋರಕರ, ಮೋಹನ ಸೈಗಾಲ, ಮಾಸ್ಟರ ರತನ, ಶಾಲಿನಿ ಎಂಬವರು ನಟನಟಿಯರು. ಅಚ್ಯುತ ರಾನಡೆಯವರು ದಿಗ್ದರ್ಶಕರು.

"ಫೂಲ್ ಔರ್ ಕಾಂಟೆ" ಒಂದು ಸಾಮಾಜಿಕ ಕಥೆ. ಅದರಲ್ಲಿ ಹೆಂಗಸು ಹೂವಿನಂತೆ ಹರ್ಷವಿತ್ತು ಮುಳ್ಳಿನಂತೆ ಕಥಾ ನಾಯಕನಿಗೆ ದುಃಖದಾಯಿಕೆಯಾಗುವುದನ್ನು ಚಿತ್ರಿಸಲಾಗಿದೆ. ಜಗತ್ತಿನ ಕುಟುಂಬ ಜೀವನದಲ್ಲಿ ಸ್ತ್ರೀಯರ ಅಜ್ಞಾನ ಅಸಂಸ್ಕಾರಗಳಿಂದ ಆಗುತ್ತಿರುವ ದುರಂತಗಳಿಗೆ ಇದೊಂದು ನಿದರ್ಶನ. ಹಿಂದೀ ಸ್ತ್ರೀಯರಿಗೆ ಇದು ಒಳ್ಳೆಯ ಪಾಠ ಕಲಿಸಿಕೊಡುವುದು— ಕಲಿತುಕೊಳ್ಳುವ ಬುದ್ಧಿಯಿದ್ದರೆ!

ಹಾಲಿವುಡ್ಡಿನಲ್ಲಿ ನಾಯಿಯ ನಟತ್ವ!

"ರಾಯರೋಜರ್ಸ್ ಎಂಡ್ ಟ್ರಿಗ್ಗರ್" ಕಂಪನಿಯವರು ಹಾಲಿವುಡ್ಡಿನಲ್ಲಿ "ಕ್ಯಾಲಿಫೋರ್ನಿಯದ ನಕ್ಷತ್ರಗಳ ಕೆಳಗೆ" ಎಂಬ ಚಿತ್ರವನ್ನು ತಯಾರಿಸುವಾಗ ಜರ್ಮನ್ ಪೋಲೀಸು ನಾಯಿಯಾದ "ಸ್ಪರ್" ಎಂಬುದನ್ನು ನಟನನ್ನಾಗಿ ತೆಗೆದುಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ದನಗಾಹಿಯ ಪಾತ್ರ ವಹಿಸಿದವನು ಈ ನಾಯಿಗೆ ಅಭಿನಯದಲ್ಲಿ ಯುಕ್ತ ಶಿಕ್ಷಣ ಕೊಡುತ್ತಿದ್ದಾನೆ. ನಾಯಿಯೂ ನಟನಾದ ಮೇಲೆ ನಾನೇಕಾಗಬಾರದು ಎಂದು ಇನ್ನು ಮೇಲೆ ಯಾರಾದರೂ ಕೇಳಬಹುದು. ಇಲ್ಲವೆ 'ನಾಯಿಯೂ ನಟನಾಗುತ್ತದೆ ಈ ಕಾಲದಲ್ಲಿ, ನಿನ್ನದೇನು ಹೆಚ್ಚು?' ಎಂದು ಜಂಭದ ತಾರತಾರೆಯರನ್ನು ಯಾರಾದರೂ ಕೇಳಬಹುದು! ನೀಲಕಂಠ ದೀಕ್ಷಿತರ ಸೌಂದರ್ಯ ವ್ಯಾಖ್ಯೆಯಂತೆ, ಪುಚ್ಛಾಂಚಲ ಕುಟಿಲತೆ= ಬಾಲದ ತುದಿ ಡೊಂಕಾಗಿರುವುದು ಯಾವ ನಾಯಿಯಲ್ಲಿ ಹೆಚ್ಚೋ ಅದು ಹೆಚ್ಚು ಸುಂದರಿಯಂತೆ! ಇದನ್ನು ಹಾಲಿವುಡ್ಡಿನ ಉಕ್ತ ಕಂಪನಿಯವರು ಗಮನಕ್ಕೆ ತಂದುಕೊಂಡಿರದಿದ್ದರೆ ಇನ್ನಾದರೂ ತಂದುಕೊಳ್ಳುವುದು ಅಗತ್ಯವಲ್ಲವೆ?

ತಾರೆಯೊಬ್ಬಳ ಮೂಗಿಗೆ ಅವಮಾನ!

ನ್ಯೂಯಾರ್ಕಿನಲ್ಲಿ ಶೃಂಗಾರ ಸಮುದ್ರವನ್ನು ಕಡೆದು ತೆಗೆದ ಸೌಂದರ್ಯರಾಶಿಯೆಂದು ಹೊಗಳಿಸಿಕೊಂಡ ಹೆಡಿ ಲಾಮಾರಳು ತನ್ನ ಮೂಗಿಗೆ ಅವಮಾನವಾಯಿತೆಂದು ೫೦ ಸಾವಿರ ಪೌಂಡುಗಳ ಪರಿಹಾರ ದ್ರವ್ಯವನ್ನು ಬೇಡಿದ್ದಾಳೆ. ಅಮೇರಿಕದ ಒಂದು ಪತ್ರಿಕೆಯಲ್ಲಿ ಶಸ್ತ್ರ ಚಿಕಿತ್ಸೆಯಿಂದ ಅವಳ ಮೂಗು ಬದಲಿಸಲ್ಪಟ್ಟಿದೆ ಎಂಬಂತೆ ಬರೆದು ಪ್ರಕಟಿಸಿದ್ದರಿಂದ ಅವಳ ಸೌಂದರ್ಯ ಪ್ರಸಿದ್ಧಿಗೆ ಭಂಗವುಂಟಾಗಿ ತನ್ಮೂಲಕ ಸಿನೆಮ ಪ್ರಪಂಚದಲ್ಲಿ ಅವಳ ಬೆಲೆ ಇಳಿವಂತಾಯಿತು ಎಂಬುದು ಅವಳ ವ್ಯಾಜ್ಯದ ಸಾರ! ಇಂಥವಳಿಗಾಗಿಯೇ ಶ್ರೀ ಕೆ. ವಿ. ಪುಟ್ಟಪ್ಪನವರು "ಹಿಗ್ಗುವೆಯೇತಕೆ ಚೆಲುವಿನ ಹೆಣ್ಣೇ!" ಎಂಬ ಪದ್ಯ ಬರೆದಂತಿದೆಯಲ್ಲವೆ?

ಬಹುಮುಖ ಪ್ರತಿಭೆಯ ಮೌಂಟಬ್ಯಾಟನ್

(೫ನೆಯ ಪುಟದಿಂದ)

ವನ್ನು ಮರೆತು ಬ್ರಿಟಿಶ ಗವರ್ನರ ಜನರಲ್ಲನಿಗೆ "ಮೌಂಟಬ್ಯಾಟನ್ ಕೀ ಜೈ" ಎಂದು ಅಖಂಡ ಜಯಜಯಕಾರವನ್ನು ಸುಮ್ಮನೆ ಮಾಡಿರಲಿಲ್ಲ!

ಇಂಗ್ಲಂಡಿನಲ್ಲಿರುವ ಬ್ರಾಡಲ್ಯಾಂಡ್ಸ್ (ವಿಶಾಲ ಭೂಮಿ) ಎಂಬ ಅವರ ಹಳ್ಳಿಯ ಮನೆಗೆ ನೀವು ಹೋದಿರೆಂದರೆ, ಅಲ್ಲಿ ನಿಮಗೆ ಸಿಂಹದ ಮರಿ, ಕಂಗರೂ ಮೊದಲಾದ ಅಸಾಮಾನ್ಯ "ಆಶ್ರಮ ಮೃಗ"ಗಳು ಎದುರಾಗುತ್ತವೆ! ಭೂಜಲಾಕಾಶ ಯುದ್ಧದಲ್ಲಿ ಅದ್ವಿತೀಯ ಪಂಡಿತರೆನಿಸಿದ ಮೌಂಟಬ್ಯಾಟನ್ನರಿಗೆ ಯೋಗ್ಯವಾದ ಸಾಕುಮೃಗಗಳೇ ಇವು.

ಮೌಂಟಬ್ಯಾಟನ್ನರ ದಶಾನಾಥ ಕಣ್ಣು ತೆರೆದದ್ದು ನಿಜವಾಗಿ ಮೊನ್ನಿನ ಮಹಾಯುದ್ಧದ ಕಾಲದಲ್ಲಿ ಅವರ ಬಿರುಗಾಳಿತನ ಯುದ್ಧಕಲೆಯಲ್ಲಿಯೂ ಪ್ರಕಾಶಕ್ಕೆ ಬಂದುದು. ಆಗಲೇ ಬ್ರಿಟಿಶ ಹಡಗಾದ "ಕೆಲ್ಲಿ"ಯನ್ನು ಅವರ ವಶಕ್ಕೊಪ್ಪಿಸಿ ಒಂದು ನೌಕಾಪಡೆಯ ಕ್ಯಾಪ್ಟನ್ನರನ್ನಾಗಿ ಮಾಡಿ ಅವರನ್ನು ಸಮುದ್ರಕ್ಕೆ ಕಳಿಸಲಾಯಿತು. "ಕೆಲ್ಲಿ" ಯನ್ನು ಸಮುದ್ರಯಾನಕ್ಕೆ ಸಿದ್ಧಗೊಳಿಸಲು ಮೂರು ವಾರ ಬೇಕೆಂದು ಅಧಿಕಾರಿಗಳು ಹೇಳಿದರು. ಸೈರಣೆಗೇಡಿ ಮೌಂಟಬ್ಯಾಟನ್ನರು "ಗಾಡ್ಸ ಟೀತ್" (ದೇವರ ಹಲ್ಲು. ಮೌಂಟಬ್ಯಾಟನ್ನರ ಪರಿಭಾಷೆಯಲ್ಲಿ "ಹಾಳಾಯಿತು!" ಎಂದ ಹಾಗೆ!) ಎಂದು ಶಪಿಸಿ ತಾವೇ ಒಂದು ಬಕೀಟು ತುಂಬ ಬಣ್ಣ ತುಂಬಿಕೊಂಡು ಹಡಗಿಗೆ ಬಣ್ಣ ಬಳಿಯತೊಡಗಿದರು. ಮೂರು ವಾರದ ಬದಲು ಮೂರೇ ದಿನಗಳಲ್ಲಿ ಹಡಗು ಸಿದ್ಧವಾಯಿತು.

ಉತ್ತರ ಸಮುದ್ರದಲ್ಲಿ ಮೌಂಟಬ್ಯಾಟನ್ನರ 'ಕೆಲ್ಲಿ' ಹಿಟ್ಲರನ ಹಡಗುಗಳಿಗೆ ಯಮಪ್ರಾಯವಾಗಿ ಓಡಾಡುತಿತ್ತು. ನಾಲ್ಕು ಬಾರಿ ಅದು ಬಾಂಬಿನ ಇಲ್ಲವೆ ಸುರಂಗದ ಗಂಡಾಂತರಕ್ಕೀಡಾಯಿತು. ಕೊನೆಯ ಬಾರಿ ನಾರ್ವೇ ಸಮೀಪದಲ್ಲಿ ಸುರಂಗ ಬಡಿದು ಅದರ ಅಸೆ ತೀರಿದಾಗ ಕ್ಯಾಪ್ಟನ್ "ಲೂಲಿ" (ಮೌಂಟಬ್ಯಾಟನ್ನರ ಗುಪ್ತ ನಾಮ) ಹಡಗನ್ನು ತ್ಯಜಿಸಲೊಪ್ಪದೆ ಪ್ರಾಣ ಭಯವನ್ನೂ ಲೆಕ್ಕಿಸದೆ ಹೇಗೋ ಮಾಡಿ ಅದನ್ನು ಸ್ವದೇಶಕ್ಕೆ ಸಾಗಿಸಿಕೊಂಡು ಬಂದರು. ಇದು ಅವರ ಪ್ರತಿಷ್ಠೆಗೆ ಒಪ್ಪ ಕೊಟ್ಟಿತು. ಚರ್ಚಿಲ್ಲರು ಅವರನ್ನು ಭೂಜಲಾಕಾಶ ಸಂಯುಕ್ತ ಯುದ್ಧದ ಅಧಿನಾಯಕನಾಗಿ ಮಾಡಿದರು. ಅವರ ಹೊಸ ತಂತ್ರದ ಯಶಸ್ಸು ಭೂಮಧ್ಯ ಸಮುದ್ರದಿಂದ ಉತ್ತರ ಆಫ್ರಿಕೆಯಲ್ಲಿ ಮಿತ್ರರ ಸೇನೆಗಳು ಪ್ರಯಾಣಕ್ಕಾಗಿ ಇಳಿದಾಗ ಸಿದ್ಧವಾಯಿತು. ಆ ಮೇಲೆಯೆ ಆಗ್ನೇಯ ಏಶಿಯಾ ಅಧಿಪತ್ಯಕ್ಕೆ ಅವರನ್ನು ಚರ್ಚಿಲ್ಲರು ನೇಮಿಸಿದ್ದು.

ಕೊನೆಯ ನೇಮಕ

ಮೌಂಟಬ್ಯಾಟನ್ನರಿಗೆ ದೊರೆತ ಕೊನೆಯ ನೇಮಕ ಸಾಮಾನ್ಯವಲ್ಲ, ರಾಜಕೀಯ. ಹಿಂದುಸ್ತಾನವನ್ನು ೧೪ ತಿಂಗಳೊಳಗೆ-ಜೂನ್ ೧೯೪೮ ರೊಳಗೆ—ತೆರವು ಮಾಡಿ ಅಲ್ಲಿಯವರಿಗೆ ಅಧಿಕಾರ ಒಪ್ಪಿಸಿ ಬರುವ ಕೆಲಸಕ್ಕೂ ಒಂದು ಬಿರುಗಾಳಿಯೆ ಬೇಕಾಗಿತ್ತು. ಭಾರತದ ಹೊಂದಿಕೆಯಾಗಲಾರದ ಮುಂದಾಳುಗಳನ್ನು ಹೊಂದಿಸುವ ಕೆಲಸ ಅವರ ಪಾಲಿಗೆ ಬಂತು. ಮೌಂಟಬ್ಯಾಟನ್ನರಿಗೆ ಆಶ್ಚರ್ಯವಾದರೂ ಆಶ್ಚರ್ಯ ಪಡಲಿಕ್ಕೊಳ್ಳಲಿಲ್ಲ. "ದೇವರ ಹಲ್ಲು!" ಎಂದು ಇನ್ನೊಮ್ಮೆ ಅವರು ಶಪಿಸಿರಬೇಕು. ೧೪ ತಿಂಗಳ ಸಮಯ ಹೆಚ್ಚಾಗಿ ತೋರಿರಬೇಕು ಅವರಿಗೆ. ೫ ತಿಂಗಳುಗಳಲ್ಲಿ ಅವರು ಅಧಿಕಾರ ವರ್ಗಾಂತರವನ್ನು ಮುಗಿಸಿದರು. ಭಾರತವನ್ನು ಎರಡು ತುಂಡು ಮಾಡಿದರೂ ಅವರು ಭಾರತೀಯರ ಪ್ರೇಮವನ್ನು ಗಳಿಸಿಕೊಂಡು ಇಂದು ಇಲ್ಲಿಂದ ಹೊರಟಿದ್ದಾರೆ.

ಇದಿಷ್ಟು ಅವರ ಚರಿತ್ರೆಯಾಯಿತು. ಮೌಂಟಬ್ಯಾಟನ್ನರ ಭವಿತವ್ಯವೇನು? ಹಿಂದುಸ್ತಾನದಿಂದ ಹಿಂತಿರುಗಿದ ಬಳಿಕ ಈ ಸಾಹಸಿಗಾಗಿ ಯಾವ ಸ್ಥಾನ ಕಾಯುತಿದೆ? ನೀವು ಮೌಂಟಬ್ಯಾಟನ್ನರನ್ನೇ ಕೇಳಿದರೆ ಅವರನ್ನುವರು: "ನಾನು ನೌಕಾಪಡೆಗೇ ಮರಳುವೆ." ಸಮುದ್ರ ಅವರನ್ನು ಬೇರಾವುದಕ್ಕಿಂತಲೂ ಹೆಚ್ಚು ಆಕರ್ಷಿಸುತ್ತದೆಯೆಂಬುದೇನೊ ನಿಜ. ಆದರೆ ಬ್ರಿಟಿಶ ರಾಷ್ಟ್ರ ಅವರನ್ನು ಹೀಗೆಯೆ ಬಿಡುವದೆ? ಬ್ರಿಟಿಶರ ರಾಜಕೀಯ ಇತಿಹಾಸದಲ್ಲಿ ಎಷ್ಟೊ ವಿರೋಧಾಭಾಸಗಳು ಸಿಗುತ್ತವೆ. ಆದುದರಿಂದ ರಾಜಕುಲದ ಮೌಂಟಬ್ಯಾಟನ್ನರನ್ನು ಮುಖ್ಯ ಮಂತ್ರಿಗಳಾಗಿ ಮಾಡಿಕೊಂಡು ಬ್ರಿಟಿಶ ರಾಜಕಾರಣಿಗಳು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ ಗಂಡಾಂತರ ಕಾಲವನ್ನು ದಾಟ ಹೋಗಲು ಹವಣಿಸಿರುವರೆಂಬ ಸುದ್ದಿ ಅಷ್ಟೇನು ಅವಿಶ್ವಾಸ್ಯವೆಂದು ಹೇಳಲಾಗುವದಿಲ್ಲ. ಮೌಂಟಬ್ಯಾಟನ್ನರಿಗೂ ಈಗಿನ ಕೂಲಿಕಾರ ಮಂತ್ರಿಗಳಿಗೂ ಅನೇಕ ವಿಷಯಗಳಲ್ಲಿ ಮತೈಕ್ಯವುಂಟು. ಮೌಂಟಬ್ಯಾಟನ್ನರ ಪುಸ್ತಕಶಾಲೆಯಲ್ಲಿ ಸಾಮ್ಯವಾದಿ ಸಾಹಿತ್ಯ ಸಾಕಷ್ಟು ಇದೆಯೆಂದು ಪ್ರತೀತಿ. ಚರ್ಚಿಲ್ಲರು ಚೈತನ್ಯಮಯರೇನೋ ನಿಜ. ಆದರೆ ಅವರ ದೃಷ್ಟಿ ಬಹಳ ಸಂಕುಚಿತ. ಮೌಂಟಬ್ಯಾಟನ್ನರಲ್ಲಿ ಎಳೆತನದ ಹುರುಪು, ವಯೋವೃದ್ಧರಲ್ಲಿರುವ ಜಾಣ್ಮೆ, ಕ್ರಾಂತಿಕಾರಿಯಲ್ಲಿರುವ ದೃಷ್ಟಿ ವೈಶಾಲ್ಯ ಇವೆಲ್ಲವನ್ನು ಕಾಣಬಹುದು. ಹಳೆಯ ಸಾಮ್ರಾಜ್ಯವಾದಿ ಕಟ್ಟಡವನ್ನು ಕೆಡಹಿ ಬ್ರಿಟಿಶ ಸಾಮ್ರಾಜ್ಯವನ್ನು ಹೊಸ ಸತ್ವಪೂರ್ಣ ತಳಹದಿಯ ಮೇಲೆ ಪುನಾರಚಿಸಲು ಅವರು ಮುಖಿಗಳಾಗಿದ್ದಾರೆ. ಮದ್ದು ಗುಂಡುಗಳ ಬದಲು ಸ್ನೇಹ ಸೌಹಾರ್ದಗಳ ಬಲದಿಂದ ಬ್ರಿಟನ್ನಿನ ನೇತೃತ್ವದಲ್ಲಿ ಒಂದು ರಾಜ್ಯ ಸಂಘವನ್ನು ನಿರ್ಮಿಸಿ ಕತ್ತರಿಸುತಿರುವ ಬ್ರಿಟಿಶ ರಾಷ್ಟ್ರಕ್ಕೆ ಹೊಸ ಚೈತನ್ಯವನ್ನು ದಾನ ಮಾಡಲು ಅವರು ಸಮರ್ಥರಾಗಬಹುದು.



ಗಾಂಧೀಜಿಯ ಸ್ಮಶಾನಯಾತ್ರೆಯ ಕಾಲಕ್ಕೆ ಮೌಂಟಬ್ಯಾಟನ ದಂಪತಿಗಳು

ಜನಮತ

ವಿವರಣ ಅವಶ್ಯಕ

ಯುದ್ಧ ಮುಗಿದು ಈಗ ವರ್ಷಗಳಾಗಿ ಹೋದವು. ಅನ್ನ ವಸ್ತ್ರಗಳ ಚಿಂತೆ ಬಗೆಹರಿಯಲಿಲ್ಲ. ನಿತ್ಯೋಪಯೋಗಿ ವಸ್ತುಗಳ ಕೊರತೆಯುಂಟು ಎಂಬಂತಾಗಿದೆ. ಅನ್ನ, ವಸ್ತ್ರ, ಮುಂತಾದ ವಸ್ತುಗಳ ಬೆಲೆ ಏರಿದ್ದು, ಕೊರತೆಯುಂಟಾದದ್ದು ತಮ್ಮ ಮಿತಿಯನ್ನು ಮೀರಿ ಹೋಗಿದ್ದರೂ ಜನರು ಆ ಬಗ್ಗೆ ನಾನಾ ಮುಖದಿಂದ ಅಕ್ರೋಶ ಮಾಡುತ್ತಿದ್ದರೂ ಸರಕಾರ ಬರಿದೆ 'ಸಾವಧಾನ, ಸಾವಧಾನ' ಎಂಬ ಮಂತ್ರವನ್ನು ಜಪಿಸುತ್ತಿದೆ. ಸರಕಾರದವರಲ್ಲಿ ನ್ಯಾಯವಾದ ಕಾರಣವಿರಬಹುದು; ಆದರೆ ಅದನ್ನು ಜನರಿಗೆ ತಿಳಿಯುವಂತೆ ಅಧಿಕಾರಿಗಳು ವಿವರಿಸದೆ ಬರಿದೆ 'ಇಲ್ಲ, ಏನು ಮಾಡುವುದು? ತಾಳ್ಮೆಯಿಂದಿರಬೇಕು' ಎನ್ನುತ್ತ ಕುಳಿತಿರುವುದರಿಂದ ಇಂದಿನ ನಮ್ಮ ಸರಕಾರಕ್ಕಿಂತ ಹಿಂದಿನ ಪರ ಸರಕಾರವೇ ಉತ್ತಮವೆಂದು ಸಾಮಾನ್ಯರು ತಿಳಿದುಕೊಂಡು ದೂರಿದರೆ ತಪ್ಪೆನಲು ಸಾಧ್ಯವಿಲ್ಲ. ಸರಕಾರಕ್ಕೆ ಪ್ರಕಟನ ಖಾತೆಯೊಂದಿದೆ. ಆದರೆ ಅಲ್ಲಿ ಸರಕಾರ ಕೊಟ್ಟ ಭಾಷೆಗೆ ತಪ್ಪಲು ಕೈಮೀರಿದ ಕಾರಣಗಳಾವುವೆಂಬುದನ್ನು ಕಾರ್ಯ ಕಾರಣಸಮನ್ವಯದಿಂದ ಹೇಳದುದರಿಂದ ಜನರ ಸಹನೆ,ವಿಶ್ವಾಸಗಳು ಹಾರಿಹೋಗುತ್ತಿವೆ. ಮುಖಂಡರು ಕಾಗದದ ಮತ್ತು ಬಾಯಿ ಮಾತಿನ ಆಶ್ವಾಸನಗಳನ್ನು ಕಂಡಾಬಟ್ಟೆ ಕೊಡುತ್ತ ಅವುಗಳಲ್ಲಿ ಅಲ್ಪಾಂಶವನ್ನು ಕಾಲಕ್ಕೆ ಸರಿಯಾಗಿ ಪೂರೈಸದಿರುವುದು ಮುಖಂಡರಿಗೂ ಅವರ ಪಕ್ಷಕ್ಕೂ ಪ್ರತಿಷ್ಠಾಭಂಗಕ್ಕೆ, ಅಧಿಕಾರಲೋಪಕ್ಕೆ ಕಾರಣವಾಗಬಹುದಾಗಿದೆ. ಈ ಎಚ್ಚರಿಕೆಯನ್ನು ಸರಕಾರದಲ್ಲಿ ಅಧಿಕೃತರಾದ ಮತ್ತು ಪಕ್ಷಗಳಲ್ಲಿ ಪ್ರಭಾವವಿರುವ ಮುಖಂಡರು ಸಕಾಲದಲ್ಲಿ ತೆಗೆದುಕೊಳ್ಳದಿದ್ದರೆ, ಅರಾಜಕತೆ ಹೆಚ್ಚಬಹುದು ಎಂಬುದನ್ನು ಅವರ ಗಮನಕ್ಕೆ ತರಬಯಸುತ್ತೇನೆ.

ಹುಬ್ಬಳ್ಳಿ — ಓರ್ವ ನಾಗರಿಕ

x x x

ವಿದ್ಯಾಭ್ಯಾಸದಲ್ಲಿ ಧರ್ಮದ ಸ್ಥಾನ

ಎಲ್ಲೆತ್ತ ಧರ್ಮ ಅಸ್ಪೃಶ್ಯಮ. ಕುರುಡು ಧರ್ಮ ಪಾತಾಳಕ್ಕೆ ಸಮ, ಧರ್ಮವೇ ಇಲ್ಲದಿರುವುದು ತ್ರಿಶಂಕು ಸ್ವರ್ಗಕ್ಕೆ ಸಮ. ಆದುದರಿಂದ ಬುದ್ಧ, ಪರಮಹಂಸ, ಗಾಂಧಿ ಮುಂತಾದವರ ವಿಶ್ವಧರ್ಮ ನೀತಿಗಳನ್ನು ಕ್ರೋಡೀಕರಿಸಿ ಅವಕ್ಕೆ ವೇದ, ಕುರಾನು, ಬೈಬಲ್ಲುಗಳ ಆಧಾರದಿಂದ ಸಮರ್ಥನೆ ಕೊಟ್ಟು ಚಿಕ್ಕಂದಿನಿಂದ ಮಕ್ಕಳಿಗೆ ಶಾಲೆಗಳಲ್ಲಿ ಬೋಧಿಸುವುದು ಅವರನ್ನು ಸನ್ಮಾನ್ಯ ನಾಗರಿಕರನ್ನಾಗಿ ತಯಾರಿಸುವುದಕ್ಕೆ ಅನಿವಾರ್ಯವಾದ, ಅತ್ಯವಶ್ಯಕವಾದ ಸಾಧನವೆಂಬುದನ್ನು ಬಹಳ ಜನ ಶಾಸ್ತ್ರಜ್ಞರು ಮತ್ತು ವಿದ್ಯಾಶಾಸ್ತ್ರಜ್ಞರು ಮನನ ಮಾಡಿಕೊಂಡಂತಿಲ್ಲ. ಈ ಮುಖ್ಯಾಂಶವನ್ನು ಅತಿ ತ್ವರೆಯಿಂದ ವಿಚಾರಶೀಲರು ಮನಗಂಡು ವಿದ್ಯಾಭ್ಯಾಸ ಪದ್ಧತಿ ಹೊಸದಾಗಿ ರೂಪಿತವಾಗಲಿರುವ ಈ ಕಾಲದಲ್ಲಿ ಕರ್ತವ್ಯ ಪ್ರಜ್ಞೆಯಿಂದ ಇದಕ್ಕೆ ಅವಕಾಶವನ್ನು ಔದಾರ್ಯದಿಂದ ಕೊಡಿಸಬೇಕೆಂಬ ಸಜ್ಜನಿಕೆಯ ಅಗ್ರಹ ಪೂರ್ವಕ ವಿನಂತಿ. ಮಾನವ ಏಕೀಕರಣ, ಜಾಗತಿಕ ಐಕ್ಯ ಸಿದ್ಧಿ, ಸರ್ವಹಿತ ಸಾಧನೆ, ವಿಶ್ವಜನೀನತ್ವ ಇತ್ಯಾದಿ ವಿಶ್ವಧರ್ಮ ಪ್ರಯೋಜನ, ಸಕಲ ಸುಗುಣ ಪ್ರವೃತ್ತಿಗಳನ್ನು ಭಾವೀ ನಾಗರಿಕರಲ್ಲಿ ಅಳವಡಿಸಬೇಕಾದರೆ ಇಂಥ ಪ್ರಬುದ್ಧ ಧರ್ಮದಿಂದಲ್ಲದೆ ಕೇವಲ ಆಜ್ಞೆ, ವಿಧಿ, ಉಪದೇಶ, ದಂಡನೆಗಳಿಂದ ಸಾಧ್ಯವಿಲ್ಲ. — ಶ್ರೀ

ವಿಶ್ವಲಿಂಗಪ್ಪನು ಬ್ಯಾಂಕಿನವರಲ್ಲಿ ಒಂದು ಚೆಕ್ಕನ್ನು ಪಡೆಯುತ್ತಿದ್ದನು. ಗುಮಾಸ್ತನು ಹಣ ಎಣಿಸುವುದನ್ನು ನೋಡುತ್ತಿದ್ದು, ಆನಂತರ ವಿಶ್ವಲಿಂಗಪ್ಪನು ಒಂದಕ್ಕೆ ಎರಡೆರಡು ಸಲ ನೋಟು ಎಣಿಸಿದನು. ೩ ನೆಯ ಸಲ ಅವನು ಎಣಿಸತೊಡಗಿದಾಗ ಗುಮಾಸ್ತ ಕೇಳಿದ: 'ಸರಿಯಾಗಿ ಹಣ ಸರಿಯಾಗಿಲ್ಲವೆ?' ವಿಶ್ವಲಿಂಗಪ್ಪ ಗಂಭೀರವಾಗಿ, 'ಹೌದು, ಎಷ್ಟು ವಿಶೇಷವೇ ಸರಿಯಾಗಿ ಅಷ್ಟೇ ಇದೆ.'


ವಿವಿಧ ಪ್ರಪಂಚ

ಅಂತರ್ಮುಖರೂ ಬಹಿರ್ಮುಖರೂ

ಮಾನವರಲ್ಲಿ ಎರಡು ಮಾದರಿಯವರಿದ್ದಾರೆ. ಅಂತರ್ಮುಖರು, ಬಹಿರ್ಮುಖರು ಎಂದು, ಡಾ. ಕಾರ್ಲ ಜಂಗರ ಮತ. ಬಹಿರ್ಮುಖರು ಸಮಾಜದಲ್ಲಿ ಸುಲಭವಾಗಿ ಬೆರೆತುಕೊಳ್ಳುತ್ತಾರೆ, ಗೆಳೆಯರನ್ನು ಸಂಪಾದಿಸಿಕೊಳ್ಳುತ್ತಾರೆ, ಮನಸ್ಸಿಗೆ ಬಂದುದನ್ನು ಸ್ಪಷ್ಟವಾಗಿ ಆಡಿಬಿಡುತ್ತಾರೆ, ವರ್ತಮಾನಕಾಲದ ವಿಷಯಗಳಲ್ಲಿ ಆಸಕ್ತಿ ವಹಿಸುತ್ತಾರೆ. ಅಂತರ್ಮುಖರು ತಮ್ಮಲ್ಲೇ ಲೀನರಾಗಿರುತ್ತಾರೆ, ಸಾಮಾಜಿಕರೊಡನೆ ಬೆರೆಯುವುದು ಅವರಿಗೆ ಕಷ್ಟವಾಗಿ ತೋರುತ್ತದೆ. ಮಾತಾಡುವುದರ ಬದಲು ಓದುವುದು ಮತ್ತು ಆಲೋಚಿಸುವುದು ಇವೇ ಅಂಥವರಿಗೆ ಹೆಚ್ಚಾಗಿ ಸೇರುವುದು. ಈ ಎರಡು ಮಾದರಿಗಳ ನಡುವೆ ಇನ್ನೆಷ್ಟೋ ಅಂಶತಃ ವಿವಿಧರಾಗಿರುವ ವ್ಯಕ್ತಿಗಳಿದ್ದಾರೆಂದು ಜಂಗರು ಅಭಿಪ್ರಾಯ ಪಡುತ್ತಾರೆ. ಅಲ್ಲದೆ, ಕಡೆಯಲ್ಲಿ ಅವರು ಈಯೆರಡು ಮಾದರಿಗಳಲ್ಲಿ ಒಂದೊಂದನ್ನು ನಾಲ್ಕು ವಿಭಾಗ ಮಾಡಿದರು. ವಿಚಾರಶೀಲರು (ಆಲೋಚನಾಪರರು), ಭಾವನಾಪರರು, ಅನುಭವಪರರು, ಮತ್ತು ಸ್ಫೂರ್ತಿಪರರು ಎಂದು. ಅಂತರ್ಮುಖರು ಬೇಗ ಪ್ರಸಿದ್ಧಿಗೆ ಬರಲಾರರು, ಬಹಿರ್ಮುಖರು ಬಹು ಬೇಗ ಸಾರ್ವಜನಿಕರಲ್ಲಿ ಪ್ರಾಮುಖ್ಯ ಪಡೆಯುವರು, ನಾಯಕ ಗುಣವನ್ನು ಬೆಳೆಸಿಕೊಳ್ಳುವರು. ಮೊದಲಿನವರು ಆತ್ಮನಿರೀಕ್ಷಣ ಮಾಡುವುದು ಹೆಚ್ಚು, ಎರಡನೆಯವರು ಕಡಿಮೆ.

ವೈದಿಕ ಶಬ್ದಕೋಶವೊಂದನ್ನು ಭಾರತದಲ್ಲಿಯೂ ಇಲ್ಲದಷ್ಟು ಚೆನ್ನಾಗಿ ರಶಿಯದ ವಿದ್ವಾಂಸರು ತಯಾರಿಸಿದ್ದಾರೆ. ಈ ಕೋಶಕ್ಕೆ ವಿಶ್ವ ಸಾಹಿತ್ಯದಲ್ಲಿ ಸ್ಥಾನವಿದೆಯೆಂದು ವಿದ್ವಾಂಸರ ಮತ. ಇದಿನ್ನೂ ಹೆಚ್ಚಾಗಿ ಭಾರತೀಯ ವಿದ್ವಾಂಸರಿಗೆ ಲಭ್ಯವಾಗಿಲ್ಲ. ಬುದ್ಧಿವಂತರೂ ಅಧ್ಯಯನಶೀಲರೂ ಆದ ರಶಿಯದ ವಿದ್ಯಾರ್ಥಿಗಳು ಭಾರತವು ತಮ್ಮ ನೆರೆಯ ದೇಶವೆಂದು ತಿಳಿದು ಅಲ್ಲಿಯ ಸಂಗತಿಗಳನ್ನು ತಿಳಿಯಲು ಕುತೂಹಲಪಡುತ್ತಾರೆ; ಅಲ್ಲಿಯ ಸಾಹಿತ್ಯ ಸಂಸ್ಕೃತಿಗಳನ್ನು ತಿಳಿಯಲು ಹಾತೊರೆದು ಮುಂದೆ ಬರುತ್ತಿದ್ದಾರೆ. ಅವರಲ್ಲಿ ಅನೇಕರು ಸಂಸ್ಕೃತವನ್ನು ಭಾಷೆಗಳ ಜನನಿಯೆಂದು ತಿಳಿಯುತ್ತಾರೆ. ಸಂಸ್ಕೃತ ಬರದ ಯಾವನೂ ಭಾಷಾಶಾಸ್ತ್ರದಲ್ಲಿ ಮುಂದುವರಿಯಲಾರನೆಂದು ಅವರ ನಿರ್ಣಯ. ರಶಿಯದಲ್ಲಿ ಸಂಸ್ಕೃತದಲ್ಲಿ ಬರೆದ ಅಭ್ಯಾಸ ಕಡಿಮೆಯಾದರೂ ಸಂಸ್ಕೃತದಿಂದ ಅನುವಾದಿಸುವುದು ಬಹಳ ಜೋರಾಗಿ ಸಾಗಿದೆ.

ಸಂಸ್ಕೃತ ಗ್ರಂಥಗಳ ಅನುವಾದಕ್ಕೆ ರಶಿಯದಲ್ಲಿ ಭಹಳ ಬೆಲೆಯಿದೆ. ಅನುವಾದವಾದ ಗ್ರಂಥಗಳಲ್ಲಿ ಪಂಚತಂತ್ರ, ಮಹಾಭಾರತ ಮತ್ತು ಕಾಲಿದಾಸನ ಕೃತಿಗಳು ಬಹು ಮುಖ್ಯವಾದುವು. ಗೀತೆಯ ಬಗ್ಗೆ ರಶಿಯದಲ್ಲಿ ಅಷ್ಟು ಆಸಕ್ತಿಯಿಲ್ಲ. ಏಕೆಂದರೆ, ಸಾಮಾನ್ಯ ತರುಣರಿಗೆ ನಮ್ಮ ಧರ್ಮದ ಮೇಲೆ ಉಪೇಕ್ಷೆಯಿದೆ. ಬೌದ್ಧ ಸಾಹಿತ್ಯದ ಮೇಲೆ ಮಾತ್ರ ಅವರಿಗೆ ವಿಶೇಷ ಮಮತೆಯಿದೆ. ಅದನ್ನವರು ಬಹಳ ಗಂಭೀರವಾದ ಆಸಕ್ತಿಯಿಂದ ಓದುತ್ತಾರೆ. ಇದರಿಂದ ರಶಿಯ ಮತ್ತು ಭಾರತಗಳ ನಂಟು ದಿನೇ ದಿನೇ ದೃಢವಾಗುತ್ತಿದೆ ಎಂದು ದಿಲ್ಲಿಯ "ಅಮರ ಭಾರತ" ಅಭಿಪ್ರಾಯಪಡುತ್ತದೆ.



ಇಂಗ್ಲೀಷು ಕಡಲ್ಗಾಲುವೆಯ ಶೋಧ—ಎಚ್. ಎಂ. ಎಸ್. 'ಟ್ಯಾಲೆಂಟ್' ಎಂಬ ಹಡಗಿಗೆ ಇಲ್ಲಿ ವಿಶಿಷ್ಟ ಯಂತ್ರ ಸಾಧನಗಳನ್ನು ಜೋಡಿಸಲಾಗುತ್ತಿದೆ. ಅದರಲ್ಲಿ ಕುಳಿತು ವಿಜ್ಞಾನಿಗಳು ಕಡಲ್ಗಾಲುವೆಯ ತಳದಲ್ಲಿರುವ ಮಣ್ಣಿನ ಗುಣವನ್ನು ಪರಿಶೀಲಿಸುವರು.

ರಶಿಯದಲ್ಲಿ ಸಂಸ್ಕೃತಕ್ಕೆ ಮಾನ್ಯತೆ

ಮಹಾಪಂಡಿತ ರಾಹುಲ ಸಾಂಕೃತ್ಯಾಯನರು ಲೆನಿನ್ ಗ್ರಾಡ್ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತದ ಅಧ್ಯಾಪಕರಾಗಿದ್ದರು. ೬೦ ವಿದ್ಯಾರ್ಥಿಗಳು ಅಲ್ಲಿ ಅಗ ಸಂಸ್ಕೃತವನ್ನು ಅಭ್ಯಾಸಕ್ಕಾಗಿ ಆರಿಸಿಕೊಂಡಿದ್ದರು. ತತ್ವಶಾಸ್ತ್ರದ ಆರಾಧಕರಾದ ರಶಿಯನ್ ವಿದ್ಯಾರ್ಥಿಗಳು ಭಾರತೀಯ ಸಂಸ್ಕೃತಿಯಿಂದ ಬಹಳವಾಗಿ ಆಕರ್ಷಿಸಲ್ಪಟ್ಟರು. ಇಷ್ಟರಲ್ಲೇ ಭಾರತೀಯ ಸಂಸ್ಕೃತಿಯ ಪ್ರಭಾವವು ರಶಿಯದ ಸಾಹಿತ್ಯದಲ್ಲಿ ಮೂಡತೊಡಗಿದೆಯೆಂದು ಬಲ್ಲವರೆನ್ನುತ್ತಾರೆ.

ವೈದ್ಯಶಾಸ್ತ್ರದಿಂದ

ಸರಳ ಜೀವನಕ್ಕೆ ಹೆಸರಾದ ಹಿಂದುಸ್ಥಾನದಿಂದು ತನಗೆ ಅಸ್ವಾಭಾವಿಕವಾದ ಪಾಶ್ಚಾತ್ಯ ಆಹಾರ ಉಡುಪುಗಳನ್ನು ಬಳಸ ತೊಡಗಿ ಅನಾರೋಗ್ಯ ಮತ್ತು ಆರ್ಥಿಕ ಪರಿಸ್ಥಿತಿಗಳಲ್ಲಿ ಹಾಸಿಗೆ ಹಿಡಿದಿರುವುದು ಕಣ್ಣು ತೆರೆದರೆ ಕಾಣದಿರದು. ಅದೇ ಮೇರೆಗೆ ನಮ್ಮ ವೈದ್ಯಗಳು ಬೆಳೆದು. ಈ ನಮ್ಮಲ್ಲಿ ಲಭ್ಯವಾದ ಮೂಲಿಕಾದಿಗಳಿಂದ ಸ್ವಾಭಾವಿಕವಾಗಿ ಚಿಕಿತ್ಸೆ ತೆಗೆದುಕೊಳ್ಳುವುದನ್ನು ಬಿಟ್ಟು ಅಸಹ್ಯ ಔಷಧಗಳಾಗಿ ಹಿಂದುಸ್ಥಾನದಿಂದ ಪರದೇಶಗಳಿಗೆ ಕೋಟಿಗಟ್ಟಲೆ ದ್ರವ್ಯವನ್ನು ವೆಚ್ಚ ಮಾಡುತ್ತಿದೆ. ಪರಂಪರೆಯಿಂದ ಅತಿ ಸುಲಭವಾಗಿ ಮಾಡಬಹುದಾದ ಔಷಧೋಪಚಾರಗಳಿಗೆ ಕೆಳಗಿನವು ಉದಾಹರಣೆಗಳು. ಬಡವರು ಇಂತಹ ಔಷಧಜ್ಞಾನವನ್ನು ಅಗತ್ಯವಾಗಿ ಪಡೆದು ತಮ್ಮಲ್ಲಿ ಬಳಕೆಗೆ ತಂದುಕೊಳ್ಳುವುದು ಲಾಭಕರ:

೧) ಉಬ್ಬಸ, ಕೆಮ್ಮು:— ಇದಕ್ಕೆ ಅರ್ಧ ತೊಲೆ ಉಳ್ಳಾಗಡ್ಡಿ ರಸ, ಅರ್ಧ ತೊಲೆ ಸುಂಟೀರಸ, ಅರ್ಧ ತೊಲೆ ಮಂಡಕಳ್ಳಿ ರಸ, (ಮಂಡಕಳ್ಳಿಯನ್ನು ಬಿಸಿ ಬೂದಿಯಲ್ಲಿ ಸುಟ್ಟು) ಅವು ಮೂರು ರಸವನ್ನೂ ಸೇರಿಸಿ (ಗುಲಗುಂಜಿಯ ಗಾತ್ರದಷ್ಟು ಕಟುಕ ರೋಹಿಣಿ, ಕಾಳು ಮೆಣಸು ೧೦ ಇವುಗಳನ್ನು ಅರೆದು ಪುಡಿ ಮಾಡಿ) ಆ ರಸದೊಳಗೆ ಸೇರಿಸಿ ೧ ಕಾಸಿನಷ್ಟು ಜೇನುತುಪ್ಪವನ್ನು ಬೆರೆಸಿ ಅದನ್ನು ದಿನಕ್ಕೆ ೨ ಹೊತ್ತು ತೆಗೆದುಕೊಳ್ಳಬೇಕು.

ಶುದ್ಧ ಜೇನಿಗೆಯಲ್ಲಾದರೆ ಜೇನುತುಪ್ಪವನ್ನು ಬಿಟ್ಟು ಕಲ್ಲುಸಕ್ಕರೆಯನ್ನು ಪುಡಿ ಮಾಡಿ ಹಾಕಿ ಕೊಡಬೇಕು. (೬ ತಿಂಗಳು ೯ ತಿಂಗಳು ಮಕ್ಕಳಿಗೆ ಔಷಧಿಗೆ ಹಾಕುವ ಸಾಮಾನಿನ ಪ್ರಮಾಣ ಕಡಿಮೆ ಮಾಡಿ ಒಂದು ಚಮಚದಷ್ಟು ಹಾಕಬೇಕು.) ಇದು ದೊಡ್ಡವರಿಗೂ ಹುಡುಗರಿಗೂ ಸರ್ವರಿಗೂ ಬರುತ್ತದೆ.

೨) ವಾಂತಿ ಭೇದಿ:— ವಾಂತಿ ಭೇದಿ ಎರಡೂ ಆಗುತ್ತಿದ್ದರೆ ಅರ್ಧ ತೊಲೆ ಬಿಳೀ ಉಳ್ಳಾಗಡ್ಡಿ ರಸ, (ಬಹಳ ಜೋರಾಗಿದ್ದರೆ) ೪ ಬೆಳ್ಳುಳ್ಳಿ ಬೇಳೆಯ ರಸ ಕೂಡಿಸಿ ತೆಗೆದು ಅದಕ್ಕೆ ಹತ್ತು ಹನಿ ಜೇನುತುಪ್ಪವನ್ನು ಹಾಕಿ ಕುಡಿಯಲು ಕೊಡಬೇಕು. (ಜ್ವರ ವಾಂತಿ ಎರಡೂ ಇಲ್ಲದಿದ್ದರೆ ಬರೀ ಉಳ್ಳಾಗಡ್ಡಿ ರಸ ಜೇನುತುಪ್ಪ ಸೇರಿಸಿ ರೋಗಿಗೆ ಕೊಡಬೇಕು.

೩) ಹೊಟ್ಟೆಉಬ್ಬರ, ಹೊಟ್ಟೆಯಲ್ಲಿ ಸುಳುಕು (ಚಳಕು) :— ೧/೪ ತೊಲೆ ಕರಿ ಜೀರಿಗೆ, ೧/೪ ತೊಲೆ ಸಿಹಿಜೀರಿಗೆ, ೧/೪ ತೊಲೆ ಓಮ್ಲ ದಂಟು, ಕಡಲೇಕಾಳಷ್ಟು ಒಣ ಶುಂಠಿ (೨ ಜೀರಿಗೆಯನ್ನೂ ಅರ್ಧ ಹಸಿ ಅರ್ಧ ಬಿಸಿ) ಅಷ್ಟನ್ನೂ ಕುಟ್ಟಿ ೩ ಸೇರು ನೀರನ್ನು ಇಟ್ಟು ಈ ಪುಡಿಗಳನ್ನೆಲ್ಲ ಹಾಕಿ ಚೆನ್ನಾಗಿ ಬತ್ತಿಸಿ ಅರ್ಧ ಸೇರಿಗೆ ಇಳಿಸಿ ಪಾವು ಕಷಾಯಕ್ಕೆ ಅರ್ಧ ತೊಲೆ ಎಮ್ಮೆ ಬೆಣ್ಣೆಯನ್ನು ಹಾಕಿ ಕುಡಿಯಬೇಕು. ಇದೇ ಪ್ರಕಾರ ೩ ದಿನ ಮಾಡಿದರೆ ಚಳಕು, ಹೊಟ್ಟೆ ಉಬ್ಬರ ಹೋಗುತ್ತದೆ.

ರೋಗವಾಹಕರು

ವೇಶ್ಯೆಯರೇ ಮೊದಲಾದವರು ಸ್ವತಃ ರೋಗಕ್ಕೆ ತುತ್ತಾಗದೆ ಅನೇಕ ವೇಳೆ ಸಮಾಜದಲ್ಲಿ ರೋಗ ವಾಹಕರಾಗಿ ಕೆಲಸ ಮಾಡುತ್ತಾರೆ. ಅವರ ರಕ್ತದಲ್ಲಿ Antibodies ಪಿಂಡವಿರೋಧಿಗಳೆಂಬ ಅಣುಗಳನ್ನು ಅವರ ಶರೀರ ಬೆಳೆಸಿಕೊಳ್ಳುತ್ತದೆ. ಅವು ಅವರ ದೇಹದೊಳಗೆ ನುಗ್ಗಿದ ರೋಗಾಣುಗಳು ಅವರ ಮೇಲೆ ದಾಳಿ ಮಾಡದಂತೆ ರಕ್ಷಣೆ ಕೊಡುತ್ತವೆ. ಅದರಿಂದ ರೋಗಾಣುಗಳು ಹಾನಿಮಾಡುವಷ್ಟು ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳಲು ಶಕ್ತವಾಗುವುದಿಲ್ಲ. ಎರಡನೆಯವನಾದ ರಕ್ಷಕಾಣುಗಳಿಲ್ಲದ ಮನುಷ್ಯನು ಈ ರೋಗವಾಹಕರೊಡನೆ ಸಂಬಂಧ ಬೆಳೆಸಿದರೆ ಅವನು ಆಗಿಂದಾಗ ವಿಶಿಷ್ಟ ರೋಗಕ್ಕೆ ಬಲಿಯಾಗುತ್ತಾನೆ. ಇಂಥ ವರ್ಗಾಯಿಸಲ್ಪಡುವ ರೋಗಗಳಲ್ಲಿ ಮೆದುಳಿನ ಜ್ವರ, ಅತಿಸಾರ, ವಿಷಮ ಶೀತ ಜ್ವರ, ವಾಯಿದೆ ಜ್ವರ ಮುಂತಾದವು ಬಹು ಸಾಮಾನ್ಯವಾದವು. ರೋಗ ವಾಹಕರಲ್ಲಿ ರಕ್ಷಕಾಣುಗಳ ಬಲ ಕುಂದಿದ ಮೂರು ನಿಮಿಷದಲ್ಲಿ, ಅವರು ಆ ರೋಗಕ್ಕೆ ಪ್ರತೀಕಾರವಿಲ್ಲದಂತೆ ಒಂದೇ ಬಾರಿಗೆ ಅಹುತಿಯಾಗುವರು !

ಹೊಲಿಗೆಯ ವಿದ್ಯಾಲಯ

ಹೊಸ ವರ್ಗಗಳು ಪ್ರಾರಂಭವಾಗಿವೆ. ಇದೇ ಜುಲೈ ಒಂದರೊಳಗಾಗಿ ಬರುವವರಿಗೆ ಮಾತ್ರ ಪ್ರವೇಶವಿದೆ. ಪರಿಚಯ ಪತ್ರಿಕೆಗೆ ಇಂದೇ ಬರೆಯಿರಿ.

ಹೊಲಿಗೆಯ ವಿಷಯ ತೆಗೆದುಕೊಂಡ ಶಿಕ್ಷಕ ಶಿಕ್ಷಕಿಯರಿಗೆ ವಿಶೇಷ ಅನುಕೂಲತೆಗಳಿವೆ. ಸುಪ್ರಸಿದ್ಧ ಸೂಚಿ ಶಿಲ್ಪಿಗಳು ತಮ್ಮ ಅಮೌಲ್ಯ ಅನುಭವದ ಲಾಭ ಮಾಡಿಕೊಡಲಿದ್ದಾರೆ. ಮುಂಬೈ ಸರಕಾರದಿಂದ ಪಠ್ಯ ಪುಸ್ತಕವೆಂದು ಮಂಜೂರಾದ "ಸೂಚಿ ಶಿಲ್ಪ ಕಲೆ"ಯ ಲೇಖಕರೇ ಪ್ರಿನ್ಸಿಪಾಲರು.

ಕರ್ನಾಟಕ ಹೊಲಿಗೆಯ ವಿದ್ಯಾಲಯ
ಗಾಂಧೀ ಚೌಕು, ಧಾರವಾಡ.

ಅಧಿಕಾರಸ್ಥಾನ ಮತ್ತು ಸಂಬಳ

ನಾವು ದೂರ ಮಾಡಬೇಕಾದ ಹಳೆಯ ದೋಷಗಳಲ್ಲಿ ಅಧಿಕಾರ ಸ್ಥಾನಕ್ಕೂ ಸಂಬಳಕ್ಕೂ ಗಂಟು ಹಾಕುವ ಪದ್ಧತಿಯೂ ಒಂದು. ಸರಕಾರಿ ನೌಕರಿಗಳನ್ನು ಸಂಘಟಿಸುವಾಗ, ಹೊಣೆಗಾರ ಅಧಿಕಾರ ಸ್ಥಾನಗಳನ್ನು ವಹಿಸುವವರಿಗೆ ಅವರು ಅಧಿಕಾರದಲ್ಲಿರುವಷ್ಟು ಕಾಲ ಅವರ ಜೀವನ ನಿರ್ವಾಹ ಸುಗಮವಾಗಿ ಸಾಗುವಷ್ಟು ಪ್ರತಿಫಲ ಸಿಗಬೇಕು, ಅವರು ತಮ್ಮ ಎಲ್ಲ ಸತ್ವ ಸಾಮರ್ಥ್ಯಗಳನ್ನೂ ತಮ್ಮ ಅಧಿಕಾರ ಸ್ಥಾನದ ಕರ್ತವ್ಯ ನಿರ್ವಹಣೆಗಾಗಿ ಉಪಯೋಗಿಸಬೇಕು ಮತ್ತು ಕರ್ತೃತ್ವಶಾಲಿಗಳಾದ ಜನರು ಹೆಚ್ಚಾಗಿ ಸರಕಾರದ ನೌಕರಿಗಳಿಗೆ ಸೇರಬೇಕೆಂಬೀ ತತ್ವಗಳನ್ನಷ್ಟೇ ಗಮನಿಸದೆ, ಹೊಣೆಗಾರಿಕೆ ಹೆಚ್ಚಿದಂತೆ ಅದರ ಸಂಗಡಲೇ ಸಂಬಳ, ಭತ್ತೆ, ವಸತಿ ಸೌಕರ್ಯ ಮೊದಲಾದವುಗಳೂ ಕೊನೆವರೆಗೆ ಏರುತ್ತ ಹೋಗಬೇಕೆಂಬ ತತ್ವವನ್ನೂ ಇಟ್ಟುಕೊಳ್ಳಲಾಗಿದೆ. ಪ್ರತಿಯೊಂದು ನೌಕರಿಗೂ ಗುತ್ತಿಗೆ ಪದ್ಧತಿಯೇ ಮೂಲ ತತ್ವವಾಗಿರಬೇಕೆಂದೂ ಅಧಿಕಾರಿಯಿಂದ ರಾಜ್ಯಕ್ಕೆ ದೊರೆತ ಸೇವೆಯನ್ನು ಅಭಿನಂದಿಸಲಿಕ್ಕೂ ಅವನಿಂದ ಪರಮಾವಧಿ ಸೇವೆ ದೊರಕುವಂತೆ ಮಾಡಲಿಕ್ಕೂ ಹಣವೊಂದೇ ಸಾಧನವೆಂದೂ ಬಗೆಯಲ್ಪಟ್ಟಿದೆ.

ಸರಕಾರದಲ್ಲಿ ಎಷ್ಟೇ ಹೊಣೆಯುಳ್ಳ ಪದವಿಗೂ ಒಂದು ನಿರ್ದಿಷ್ಟ ಮಿತಿಗಿಂತ ಹೆಚ್ಚು ಸಂಬಳವಿರತಕ್ಕದ್ದಲ್ಲವೆಂದು ಕಾಂಗ್ರೆಸು ಕೆಲ ವರ್ಷಗಳ ಕೆಳಗೆ ಒಂದು ಗೊತ್ತುವಳಿ ಮಾಡಿತ್ತು. ಆಗಿನ ಚಲಾವಣೆಯ ಬೆಲೆಯ ಮೇಲೆ ಈ ಪರಮಾವಧಿಯನ್ನು ರೂ. ೫೦೦ ಎಂದು ನಿರ್ದಿಷ್ಟಗೊಳಿಸಲಾಗಿತ್ತು. ಇಂದಿನ ಸ್ಥಿತಿಗತಿಗಳಲ್ಲಿ ಅಷ್ಟು ಹಣ ಏನೂ ಸಾಲದೆ ಹೋಗಬಹುದು. ಅದನ್ನು ಬದಲಿಸಿ ಇಂದಿನ ಹಣದ ಬೆಲೆಯ ಮೇಲೆ ಒಂದು ಹೊಸ ಮೊತ್ತವನ್ನು ಗೊತ್ತು ಮಾಡಬಹುದು. ನನ್ನ ವಿಚಾರದಲ್ಲಿ ಈ ೫೦೦ ರೂಪಾಯಿಯೆಂಬದು ಮಹತ್ವದ ವಿಷಯವಲ್ಲ. ಆದರೆ ಮೊದಲನೆಯದಾಗಿ ಒಂದು ಮಿತಿಗಿಂತ ಮೇಲೆ ಅಧಿಕಾರ ಸ್ಥಾನಕ್ಕೂ ಸಂಬಳದ ಪ್ರಮಾಣಕ್ಕೂ ತಳಕು ಹಾಕಬಾರದು ಮತ್ತು ನಮ್ಮ ಸಂಬಳದ ಪ್ರಮಾಣ ಈ ಬಡ ದೇಶದ ಶಕ್ತಿಗೆ ಅನುಗುಣವಾಗಿರಬೇಕೆಂದು ನನ್ನ ವಾದ.

ಇವೆರಡೂ ವಿಚಾರಗಳನ್ನು ಕಾಂಗ್ರೆಸ್ ಸರಕಾರಗಳೂ ಘಟನೆಯ ಕರಡನ್ನು ಸಿದ್ಧಗೊಳಿಸಿದವರೂ ತ್ಯಜಿಸಿಬಿಟ್ಟಂತೆ ತೋರುವದು. ಕರಡಿನ ಎರಡನೆ ಪರಿಶಿಷ್ಟದಲ್ಲಿ ಅಧ್ಯಕ್ಷ, ಗವರ್ನರರು, ಮಂತ್ರಿಗಳು, ಶಾಸನ ಸಭಾಪತಿ, ವರಿಷ್ಠ ನ್ಯಾಯಾಲಯದ ಮತ್ತು ಹೈಕೋರ್ಟುಗಳ ನ್ಯಾಯಮೂರ್ತಿಗಳು ಮೊದಲಾದ ಉಚ್ಚಾಧಿಕಾರಿಗಳ ಸಂಬಳವನ್ನು ಉಲ್ಲೇಖಿಸಲಾಗಿದೆ. ಕೆಳಗಿನ ಅಧಿಕಾರಿಗಳ ಸಂಬಳಗಳನ್ನು ನಿಷ್ಕೃಷ್ಟವಾಗಿ ಈ ಕೆಳಗಿನಂತೆ ಕೊಡಲಾಗಿದೆ:

- ಅಧ್ಯಕ್ಷ: ತಿಂಗಳಿಗೆ ರೂ. ೫೫೦೦ ಮತ್ತು ಭತ್ತೆ.
- ಗವರ್ನರರು: ತಿಂಗಳಿಗೆ ೪೫೦೦ ಮತ್ತು ಭತ್ತೆ.
- ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ: ರೂ. ೫೦೦೦ ಮತ್ತು ಇತರ ನ್ಯಾಯಾಧೀಶರು: ರೂ. ೪೫೦೦.
- ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು: ರೂ. ೪೦೦೦, ಇತರ ನ್ಯಾಯಾಧೀಶರು: ರೂ ೩೫೦೦.

ಅಧ್ಯಕ್ಷ ಮತ್ತು ಗವರ್ನರರುಗಳಿಗೆ ಭತ್ತೆ ಕೊಡುವದು ಅತಿಥಿ ಅಭ್ಯಾಗತರನ್ನು ಆದರಿಸಿ ಭೋಜನ ಸಮಾರಂಭಗಳನ್ನು ಏರ್ಪಡಿಸಲಿಕ್ಕೂ ರಾಜಕೀಯ– ಸಾಮಾಜಿಕ ಸ್ವರೂಪದ ವೆಚ್ಚಗಳನ್ನು ತುಂಬಲಿಕ್ಕೂ ಇರಬಹುದು.

ಬ್ರಿಟಿಶರು ಹಿಂದುಸ್ತಾನಕ್ಕೆ ಬಂದ ಸ್ವಲ್ಪ ಕಾಲದಲ್ಲಿಯೆ ನಮ್ಮ ಜನಾಂಗದ ಒಂದು ದೌರ್ಬಲ್ಯವನ್ನು ಕಂಡುಕೊಂಡರು. ದರಬಾರು, ಮೆರವಣಿಗೆ, ಉತ್ಸವ ಮೊದಲಾದ ಸಾಮೂಹಿಕ ಸಮಾರಂಭಗಳ ಮೂಲಕ ಶ್ರೀಮಂತಿಕೆಯ ಪ್ರದರ್ಶನ ಮಾಡುವದರಿಂದ ನಮ್ಮ ಮನಸಿನ ಮೇಲೆ ಎಷ್ಟು ಪರಿಣಾಮವಾಗುವದೋ ಅಷ್ಟು ಇನ್ನೇತರಿಂದಲೂ ಆಗುವದಿಲ್ಲ. ಬಡವರಲ್ಲಿ ಬಡವನಾಗಿ, ವರ್ಷಾದಿಯಿಂದ ವರ್ಷಾಂತ್ಯದ ವರೆಗೂ ಅರೆಹೊಟ್ಟೆಯ ದೀನ ಜೀವನವನ್ನು ಸಾಗಿಸುವವನು ಕೂಡ, ಕುಟುಂಬದಲ್ಲಿ ಮದುವೆಯೋ ಮರಣವೋ ಸಂಭವಿಸಿದರೆ, ಆ ಸಂದರ್ಭಗಳಲ್ಲಿ ಒಮ್ಮೆಲೆ ಸಿಕ್ಕಸಿಕ್ಕಂತೆ ವೆಚ್ಚ ಮಾಡುವ ಶೂರನೂ ಕಲಾಪ್ರೇಮದ ಆರಾಧಕನೂ ಆಗಿಬಿಡುತ್ತಾನೆ. ಇದಕ್ಕಾಗಿ ಅವನು ಹೊಲ ಮನೆಗಳನ್ನು ಮಾರಲು ಇಲ್ಲವೆ ಒತ್ತೆ ಹಾಕಲು ಹಿಂಜರಿಯುವದಿಲ್ಲ; ವಸ್ತ್ರಾಭರಣಗಳನ್ನು ಎರವು ತರಲೂ ಸಿದ್ಧನಾಗುತ್ತಾನೆ. ಮೊನ್ನೆ ಮೊನ್ನೆಯ ವರೆಗೆ ಈ ವೆಚ್ಚಗಳಿಗಾಗಿ ಹಣ ದೊರಕಿಸಲು ಆಜನ್ಮ ಜೀತದಾಳಾಗಿ ದುಡಿಯುವ ಕರಾರಿಗೆ ಸಹಿ ಹಾಕುತ್ತಿದ್ದವರುಂಟು. ದರಿದ್ರರಲ್ಲಿ ದರಿದ್ರನೂ ತನ್ನ ಜಾತಿಯ ಶ್ರೀಮಂತರಲ್ಲಿ ಶ್ರೀಮಂತನನ್ನು ಅನುಕರಿಸಲು ಪ್ರಯತ್ನಿಸುತ್ತಾನೆ. ''ಶ್ರೀಮದ್ಗಂಭೀರ''ವಾದ ಆಡಳಿತೆಯನ್ನು ಸಾಗಿಸಿದ ಹೊರತು ಜನರು ಸರಕಾರವನ್ನು ಗೌರವಿಸಲಾರರೆಂದು ಬ್ರಿಟಿಶರು ತಿಳಿದುಕೊಂಡಿದ್ದರು.

ನಮ್ಮೀ ರಾಷ್ಟ್ರೀಯ ದೌರ್ಬಲ್ಯವನ್ನು ನಾವು ದುರ್ದೈವ ದುರ್ದೈವಗಳೆರಡರಲ್ಲೂ ಅವಿಚ್ಛಿನ್ನವಾಗಿ ಉಳಿಸಿಕೊಂಡು ಬಂದಿದ್ದೇವೆ. ಆಗಸ್ಟ ೧೫ ನೆ ದಿನ ಸ್ವರಾಜ್ಯ ದೊರೆತದ್ದರ ಸಮಾರಂಭವನ್ನೂ ಮುಂದೆ ಗಾಂಧೀಜಿಯ ಉತ್ತರಕ್ರಿಯೆ ಮತ್ತು ಅಸ್ಥಿವಿಸರ್ಜನ ಕರ್ಮಗಳನ್ನೂ ನಾವು ಆಚರಿಸಿದ ಬಗೆ, ಮೊಗಲರ ಕಾಲದ ಅಂಥ ಸಮಾರಂಭಗಳನ್ನು ಮತ್ತು ಈಚೆಗೆ ನಾವೇ ಧಿಕ್ಕರಿಸಿದ ಲಾರ್ಡ ಕರ್ಜನರ ದಿಲ್ಲಿ ದರ್ಬಾರನ್ನು ಮರೆಸುವಂಥದೆನ್ನದಿದ್ದರೂ ಅವುಗಳಿಗೆ ಸಮಾನವಾಗಿತ್ತೆಂದು ಒಪ್ಪಿಕೊಳ್ಳಬೇಕು. ಗಾಂಧೀಜಿ ದುಂಡುಮೇಜಿನ ಪರಿಷತ್ತಿಗೆ ಹೋದಾಗ ಬಡದೇಶವೊಂದರ ಪ್ರತಿನಿಧಿಗೆ ತಕ್ಕಂತೆ ಕಾಣಿಸಿಕೊಳ್ಳಲು ಎಚ್ಚರ ವಹಿಸಿದ್ದರು. ಗಾಂಧೀಜಿ ಸತ್ತಾಗ ಅವರು ಜಗತ್ತಿನಲ್ಲೆಲ್ಲ ಸುಸಮೃದ್ಧವಾದ ರಾಷ್ಟ್ರದ ಪಿತಾಮಹನೋ ಎಂಬಂತೆ ಅವರ ಉತ್ತರಕ್ರಿಯೆಗಳೂ ಶ್ರಾದ್ಧವೂ ನಡೆಯುವಂತೆ ನಾವು ನೋಡಿಕೊಂಡೆವು.

ಈ ಪ್ರದರ್ಶನಗಳ ಹಿಂದಿರುವ ಮನೋವೃತ್ತಿಯನ್ನನುಸರಿಸಿಯೇ ಉಚ್ಚ ಅಧಿಕಾರಿಗಳಿಗೆ ಸಂಬಳ ಕೊಡುವ ರೀತಿಯೂ ಅವರ ಖಾತೆಗಳನ್ನು ನಡೆಸುವ ಪದ್ಧತಿಯೂ ರೂಪುಗೊಂಡಿವೆ. ನಮ್ಮ ಸರಳತೆ, ಬುದ್ಧಿಶಕ್ತಿ, ನಡತೆ ಇವುಗಳಿಂದ ಸ್ವಕೀಯ ಪರಕೀಯರ ಮನಸ್ಸನ್ನು ಸೂರೆಗೊಳ್ಳುವ ಬದಲು ಭಾರಿ ಜಲಸೆಗಳನ್ನೂ ತಮಾಷೆಗಳನ್ನೂ ಕೂಡಿಸುವ ಮೂಲಕ ಆ ಕೆಲಸ ಮಾಡಬಯಸುತ್ತೇವೆ. ಇದು ಸಾಧ್ಯವಾಗಬೇಕಾದರೆ ಅಧಿಕಾರ ಸ್ಥಾನ ಏರಿದಂತೆ ಸಂಬಳ ಪ್ರಮಾಣವೂ ಏರುವಂತೆ ಮಾಡಬೇಕಾಗುತ್ತದೆ.

ಕೇವಲ ತ್ಯಾಗಜೀವನವನ್ನೆ ಸರಕಾರಿ ನವಕರರು ನಡೆಸಬೇಕೆಂದು ನನ್ನ ಅಭಿಪ್ರಾಯವಲ್ಲ. ಆದರೆ ಅವರು ಸಾದಾ ಜೀವನವನ್ನು ನಡೆಸಬೇಕೆಂಬುದು ನನ್ನ ಅಭಿಲಾಷೆ. ಸಾರ್ವಜನಿಕ ಜೀವನದಲ್ಲಿ ಈ ಮಟ್ಟವು ಹೆಚ್ಚತಕ್ಕದ್ದಲ್ಲ. ಕೆಲಮಟ್ಟದವರಿಗೆ ಉದಾಹರಣೆಗಾಗಿ, ಸರಕಾರೀ ನವಕರರು ಜಿಲ್ಹಾಧಿಕಾರಿಗಳು, ಮ್ಯಾಜಿಸ್ಟ್ರೇಟ, ಜಜ್ಜು, ಕಲೆಕ್ಟರ, ಪೋಲೀಸ ಸುಪರಿಂಟೆಂಡೆಂಟ ಆಗುವ ವರೆಗೆ– ಅಧಿಕಾರ ಸ್ಥಾನಕ್ಕೂ ಸಂಬಳಕ್ಕೂ ತಳಕು ಇದ್ದರೆ ಅಡ್ಡಿಯಿಲ್ಲ. ಅನಂತರ ಯಾರೊಬ್ಬನೂ ಹಿರಿತನದ ಹಕ್ಕಿನಿಂದ ಯಾವದೊಂದು ವಿಶಿಷ್ಟ ಸ್ಥಳಕ್ಕೆ ನೇಮಿಸಲ್ಪಡಲಿಕ್ಕೆ ಬೇಕೆಂದ್ರು ಸಾಧಿಸಲಾರನು. ಇಂಥ ಸ್ಥಳಗಳಿಗೆ ಆರಿಸುವಾಗ ಕೇವಲ ಯೋಗ್ಯತೆಯೆ ನಿಕಷವಾಗಿರಬೇಕು. ಈ ರೀತಿ ಆಯ್ಕೆಯಾದರೂ ಸಂಬಳದ ರೂಪದಿಂದ ಅವನಿಗೆ ಹೆಚ್ಚಿನ ಯಾವದೇ ಲಾಭವಾಗತಕ್ಕದ್ದಲ್ಲ. ಹೆಚ್ಚಿನ ಹೊಣೆಗಾರಿಕೆಯ ಸ್ಥಳಕ್ಕೆ ನೇಮಿಸಲ್ಪಡುವದೇ ಅವರ ಯೋಗ್ಯತೆಗೆ ತಕ್ಕ ಪ್ರತಿಫಲವೆಂದು ಭಾವಿಸಲ್ಪಡಬೇಕು. ಉಚ್ಚ ಸ್ಥಳಕ್ಕೆ ನೇಮಿಸಲ್ಪಡುವದರಿಂದಲೆ ಅವನಿಗೆ ಹೆಚ್ಚಿನ ಗೌರವ ಮತ್ತು ಮನ್ನಣೆ ದೊರೆಯುವದು. ಸಂಬಳ ಹೆಚ್ಚಿಸುವದು ಅನವಶ್ಯಕವಾಗುವದು. ಉಚ್ಚ ಸ್ಥಳಕ್ಕೆ ಬರುವದರಿಂದ ಹೆಚ್ಚಿಗೆ ಸಂಚರಿಸುವದು, ಹೆಚ್ಚು ಅತಿಥಿಗಳನ್ನು ಬರಮಾಡಿಕೊಳ್ಳುವದು ಮೊದಲಾದ್ದಕ್ಕೆ ಹೆಚ್ಚು ಹಣ ಅವಶ್ಯವೆನಿಸಿದರೆ ಆ ಹಣವನ್ನು ಕೊಡತಕ್ಕದ್ದು. ಇದರ ಹೊರತು ಹಾಯಕೋರ್ಟಿನ ಜಜ್ಜರಲ್ಲಿ ಮತ್ತು ಮುಖ್ಯ ಜಜ್ಜರಲ್ಲಿ ಮತ್ತು ವರಿಷ್ಠ ನ್ಯಾಯಾಲಯದ ನ್ಯಾಯಾಧೀಶರ ಸಂಬಳದಲ್ಲಿ ಯಾವದೇ ಬಗೆಯ ಹೆಚ್ಚು ಕಡಿಮೆ ಇರಲಿಕ್ಕೆ ಕಾರಣವೇನೂ ಇಲ್ಲ. ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನೆಂದು ಯಾರೊಬ್ಬನನ್ನು ಆರಿಸುವದೆಂದರೆ ಉಳಿದ ನ್ಯಾಯಾಧೀಶರು ಮತ್ತು ವಕೀಲಿ ಉದ್ಯೋಗದಲ್ಲಿ ಇದ್ದ ಉಳಿದ ಜನರಿಗಿಂತ ಇವರ ಯೋಗ್ಯತೆ ಮತ್ತು ಸೇವೆಗೆ ಹೆಚ್ಚಿನ ಮನ್ನಣೆ ಮತ್ತು ಗೌರವ ಕೊಟ್ಟಂತಾಗುವದು. ಆದರೆ ಈರೀತಿ ನೇಮಕವಾದ ಕೂಡಲೆ ಅವರಲ್ಲಿ ಬೇರೆ ತರದ ಬುದ್ಧಿಕೌಶಲ್ಯ ಇಲ್ಲವೆ ಕಾರ್ಯಕೌಶಲ್ಯ ಬರುವದೆಂದಲ್ಲಿ ಅಥವಾ ನ್ಯಾಯಾಧೀಶನೆಂದು ಇಲ್ಲವೆ ವಕೀಲನೆಂದು ಅವನು ಎಷ್ಟು ಗಂಟೆಕಾಲ ಕೆಲಸ ಮಾಡುತ್ತಿದ್ದನೋ ಅದಕ್ಕಿಂತ ಹೆಚ್ಚು ಅವಧಿಯ ವರೆಗೆ ಈಗ ದುಡಿಯಬೇಕಾಗುವದೆಂದೂ ಅಲ್ಲ. ವರಿಷ್ಠ ನ್ಯಾಯಾಲಯದ ಉಳಿದ ನ್ಯಾಯಾಧೀಶರು ಅವನ ಕೈಕೆಳಗೆ ಕೆಲಸಮಾಡಿ ಅವನ ಆಜ್ಞೆಯಂತೆಯೇ ನಡೆಯಬೇಕಾದರೂ ಅವರು ಮುಖ್ಯ ನ್ಯಾಯಾಧೀಶರಿಗಿಂತ ತಮ್ಮ ಕಾರ್ಯದಲ್ಲಿ ಕಡಮೆ ಶ್ರಮ ವಹಿಸಬೇಕಾಗುವದೆಂದೂ ಇಲ್ಲವೆ ಕಡಮೆ ತರದ ಕಾಯದೆಯ ಜ್ಞಾನವನ್ನು ಉಪಯೋಗಿಸಬೇಕಾಗುವದೆಂದೂ ಅರ್ಥವಾಗದು. ಉಳಿದ ನ್ಯಾಯಾಧೀಶರಿಗಿಂತ ಮುಖ್ಯ ನ್ಯಾಯಾಧೀಶರಲ್ಲಿ ಯಾವದೇ ಬಗೆಯ ಹೆಚ್ಚಿನ ಶ್ರೇಷ್ಠತೆ ಇದ್ದರೂ ಅದನ್ನು ಹಣದಿಂದ ಅಳೆಯತಕ್ಕದ್ದಲ್ಲ. ವರಿಷ್ಠಾಧಿಕಾರಿಯ ಡಾಂಭಿಕತೆಗೆ ಮನ್ನಣೆ ಕೊಡುವದಾದರೆ ಯಾವದೊಂದು ಗೌರವದ ಪದವಿಯನ್ನು ಅವನಿಗೆ ದಯಪಾಲಿಸತಕ್ಕದ್ದು. ಆದರೆ ವರಿಷ್ಠ ಸ್ಥಳವೆಂದ ಕೂಡಲೆ ಹೆಚ್ಚಿನ ಸಂಬಳವಿರಲಿಕ್ಕೆಬೇಕೆಂದು ಭಾವಿಸುವದಕ್ಕೆ ಯಾವದೇ ಕಾರಣವಿಲ್ಲ. ಅಧ್ಯಕ್ಷರು, ಗವರ್ನರರು, ಮುಖ್ಯ ಮಂತ್ರಿಗಳು ಇವರ ಸಂಬಂಧದಲ್ಲಿಯೂ ಇದೇ ತರ್ಕಸರಣಿಯನ್ನು ಉಪಯೋಗಿಸಬಹುದು.

ಇನ್ನೊಂದು ವಿಸಂಗತ ನಿಯಮವೂ ಈ ಪದ್ಧತಿಯಲ್ಲಿ ಬಂದುಬಿಟ್ಟಿದೆ. ಯಾವನೊಬ್ಬನು ತಾತ್ಪುರ್ತಿಕವಾಗಿ ಯಾವುದೊಂದು ಸ್ಥಳಕ್ಕೆ ಏರಿದ ಕೂಡಲೆ ಅವನ ಸಂಬಳದಲ್ಲಿಯೂ ತಾತ್ಪುರ್ತಿಕ ಹೆಚ್ಚಳವಾಗುವದು. ಈ ರೀತಿಯಾಗಿ ಗವರ್ನರನೊಬ್ಬನು ಒಂದು ವಾರ ಇಲ್ಲವೆ ಎರಡು ವಾರ ರಜೆಯ ಮೇಲೆ ಹೋದರೆ ಅವನ ಕೆಳಗೆ ಇರುವ ಅಧಿಕಾರಿಯು ಅಷ್ಟು ಅವಧಿಯ ವರೆಗೆ ಆ ಕೆಲಸವನ್ನು ಮಾಡತಕ್ಕವನು; ಆ ಅವಧಿಯಲ್ಲಿ ಅವನಿಗೆ ಹೆಚ್ಚಿನ ಭತ್ತೆ ಸಿಕ್ಕಬೇಕೆಂಬುದು ನಿಯಮವಾಗಿದೆ. ಅವನು ಮೊದಲಿನ ಕೆಲಸ ಮಾಡುವಾಗ ವಾಡಿಕೆಯಾಗಿ ಆರು ಏಳುಗಂಟೆ ಕೆಲಸಮಾಡುತ್ತಿದ್ದರೆ ಈಗ ಹನ್ನೆರಡು ಗಂಟೆ ಕೆಲಸ ಮಾಡಬೇಕಾಗುವದು ಇಲ್ಲವೆ ಈ ಅವಧಿಯಲ್ಲಿ ಅನ್ನ ಮಗನ ಕಾಲೇಜ ಫೀ ಹೆಚ್ಚಿಗೆ ಕೊಡಬೇಕಾಗುವದು ಮತ್ತು ತನ್ನ ಕೈಕೆಳಗಿನ ನವಕರರಿಗೆ ಹೆಚ್ಚಿನ ಸಂಬಳ ಕೊಡಬೇಕಾಗುವದು ಎನ್ನುವಂತೆ ಅವನ ಭತ್ತೆಯನ್ನು ಹೆಚ್ಚಿಸಲಾಗುವದು. ಈ ತಳಕನ್ನು ಬೇಗಹರಿದೊಗೆದಷ್ಟು ಒಳ್ಳೆಯದು.

ಅವು ತರುವ ಸಂಬಳಕ್ಕಾಗಿ ಅಲ್ಲದೆ ದೇಶಸೇವೆ ಮಾಡುವುದರ ಜೊತೆಗೆ ತಮ್ಮ ವ್ಯಕ್ತಿತ್ವವನ್ನು ಬೆಳಸಿಕೊಳ್ಳುವ ಸಂದರ್ಭ ಸಿಗುವುದೆಂದು ಹೊಣೆಗಾರಿಕೆಯ ಕಾರ್ಯಾಲಯ ಮತ್ತು ಅಧಿಕಾರ ಸ್ಥಾನಗಳಿಗೆ ತರುಣರು ಹೋಗಬಯಸುವಂತೆ ಮಾಡಲು ಹೊಸದೊಂದು ಪರಂಪರೆಯನ್ನು ಸ್ಥಾಪಿಸಬೇಕು. ಉಚ್ಚ ವರ್ಗದವರೇ ಮೊದಲು ಇದಕ್ಕೆ ಮಾದರಿಯಾಗಿ ನಡೆದುಕೊಳ್ಳಬೇಕು.

ವರ್ಧಾ ೧೦–೬–೪೮ — ಕಿ. ಘ. ಮಶ್ರುವಾಲಾ

ಸರಿಯಾದ ಉಪಾಯ

ಮದ್ರಾಸದ ಮುಖ್ಯ ಪ್ರಧಾನರಾದ ಮಾನ್ಯ ರೆಡ್ಡಿಯಾರರು ಆಹಾರ ಪರಿಷತ್ತಿನಲ್ಲಿ ಮಾತನಾಡುತ್ತ ಮದ್ರಾಸ ಪ್ರಾಂತ ಒಂದರಲ್ಲಿಯೇ ೨॥ ಯಿಂದ ೩ ಕೋಟಿ ಜನರಿಗೆ ಆಹಾರ ಧಾನ್ಯ ಒದಗಿಸುವ ಹೊಣೆಯನ್ನು ಸರಕಾರವು ಹೊರಬೇಕಾಗಿದೆಯೆಂದು ಉದ್ಗಾರ ತೆಗೆದರು. ಯುದ್ಧ ಮುಗಿದು ೪ ವರ್ಷಗಳಾದ ಮೇಲೆಯೂ ಹಿಂದುಸ್ತಾನವೇಕೆ ಈ ಬಗ್ಗೆ ಇಷ್ಟು ಗಂಡಾಂತರಕ್ಕೆ ಗುರಿಯಾಗಬೇಕು? ಈ ಅಪರಾಧಕ್ಕೆ ಶಿಕ್ಷಾಪಾತ್ರರಾದವರು ಯಾರು?

ಅದೇ ಪರಿಷತ್ತಿನಲ್ಲಿ ಪಂಡಿತ ಜವಾಹರಲಾಲ ನೆಹರು ಅವರೂ ಹೀಗೆ ಹೇಳಿದರು:

> ''ನಮ್ಮ ಅನೇಕ ಸಮಸ್ಯೆಗಳ ಪರಿಹಾರೋಪಾಯವು ಅಧಿಕ ಆಹಾರೋತ್ಪಾದನೆಯಲ್ಲಿ ಅಡಗಿದೆ. ಒಂದಿಲ್ಲೊಂದು ಕಾರಣದಿಂದ ಈ ಮೊದಲು ಈ ವಿಷಯದತ್ತ ಸಾಕಷ್ಟು ಲಕ್ಷ್ಯ ಪೂರೈಸಿಲ್ಲ. ಈ ಬಗ್ಗೆ ಮತಭೇದವಿಲ್ಲದಿದ್ದರೂ ಈ ಅಚಾತುರ್ಯ ನಡೆದುಹೋಗಿದೆ.''

ಕೃಷಿಪ್ರಧಾನ ದೇಶದಲ್ಲಿ ಸರಕಾರದ ಕೃಷಿ ಶಾಖೆಯು ಜನರ ನಿರಾಹಾರ ನಿವಾರಣೆಯ ಹೊಣೆ ಹೊರಬೇಕಾದುದು ಕ್ರಮಪ್ರಾಪ್ತವಾಗಿದೆ. ಕೃಷಿ ಶಾಖೆಗಾಗಿ ವೆಚ್ಚ ಮಾಡಿದ ಹಣವೆಂದರೆ, ಅನ್ನಾಭಾವವನ್ನು ನಿವಾರಿಸಲೋಸುಗ ತುಂಬಿದ ವಿಮಾ ಕಂತುಗಳೆಂದೇ ತಿಳಿಯತಕ್ಕದ್ದು. ತೆರಿಗೆ ಕೊಡುವವರ ಅಪಾರ ಸಂಪತ್ತನ್ನು ಈ ಶಾಖೆ ವ್ಯಯಿಸುತ್ತಿದ್ದರೂ ನಾಗರಿಕರು ಆಗಾಗ ಅನ್ನಾನ್ನಗತಿಕರಾಗಿರಬೇಕಾಗುವ ಪ್ರಸಂಗಗಳೇ ಬಹಳ. ಎಲ್ಲಿಯೋ ಯಾವದೋ ಒಂದು ಮಹಾಪ್ರಮಾದವಿದೆ. ಅದನ್ನು ತಿದ್ದಬೇಕಲ್ಲದೆ ತಪ್ಪಿಗೆ ಕಾರಣರಾದವರನ್ನು ಕೂಡಲೇ ತೊಲಗಿಸಿಬಿಡಬೇಕು.

ಸಾಮಾನ್ಯವಾಗಿ ಕಠಿನ ಪ್ರಸಂಗಗಳನ್ನು ಎದುರಿಸಲು ನಾವು ತಾತ್ಪುರ್ತಿಕ ಶಮನೋಪಾಯಗಳನ್ನು ಹುಡುಕುವೆವಲ್ಲದೆ ಶಾಶ್ವತವಾದ ಸಮರ್ಪಕ ಉಪಾಯಗಳ ವಿಚಾರ ಮಾಡುವದಿಲ್ಲ. ವಿದೇಶದಿಂದ ಆಹಾರದ ಆಯಾತ ಮಾಡಿಕೊಳ್ಳಬೇಕೆಂದೂ ಅದಕ್ಕಾಗಿ ಬೇರೆ ವಸ್ತುಗಳನ್ನು ನಾವು ವಿದೇಶಕ್ಕೆ ನಿರ್ಯಾತ ಮಾಡಬೇಕೆಂದೂ ಹೇಳಲಾಗುತ್ತಿದೆ.

ನಮ್ಮ ಈ ಪ್ರಾಚೀನ ದೇಶದಲ್ಲಿ ಭೂಮಿಗೆ ಹೊರೆವ ಭಾರ ಹೆಚ್ಚಿದೆಯೆಂದರೂ ಸಲ್ಲುವದು. ಆಹಾರೋತ್ಪಾದನೆಗೇ ನಾವು ಅಗ್ರಸ್ಥಾನ ಕೊಡತಕ್ಕದ್ದು. ಆದರೆ, ೭ನೆಯ ಅಂತರ್‍ರಾಷ್ಟ್ರೀಯ ಹತ್ತಿಯ ಸಲಹೆ ಮಂಡಲದ ಸಭೆಗೆ ಹೋದ ಹಿಂದುಸ್ತಾನದ ಶಿಷ್ಟಮಂಡಲವು, ಉದ್ದೇಳೆಯ ಹತ್ತಿಯನ್ನು ಹೆಚ್ಚಿಗೆ ಬೆಳೆಯಲು ಈಗಿದ್ದುದಕ್ಕಿಂತ ಹೆಚ್ಚು ಭೂಮಿ ಮೀಸಲಾಗಬೇಕೆಂದು ಶಿಫಾರಸು ಮಾಡಿದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವದಾದರೆ ಆಹಾರ ಧಾನ್ಯ ಬೆಳೆವ ಭೂಭಾಗವನ್ನು ಉದ್ದೇಳೆಯ ಹತ್ತಿಯನ್ನು ಬೆಳೆಯಲು ಬಿಟ್ಟುಕೊಡಬೇಕು. ತಂಬಾಕದ ಬೆಳೆಯ ಬಗ್ಗೆಯೂ ಇದೇ ಕತೆ. ಎಂದ ಮೇಲೆ ನಮಗೋಸುಗ ನಮ್ಮ ದೇಶದಲ್ಲಿ ಅಧಿಕ ಆಹಾರೋತ್ಪಾದನೆಯಾಗುವ ಬಗೆಯೆಂತು?

ಕೃಷಿ ಶಾಖೆಯು ಇದಕ್ಕೆ ಕೊಡುವ ಸಮಾಧಾನವೇನು ? ಈ ಬಗ್ಗೆ ವಿಚಾರಣೆಯೇನಾದರೂ ನಡೆದಿತೆ? ನಮಗೆ ತಿಳಿದ ಮಟ್ಟಿಗೆ ಈ ಶಾಖೆಯು ಗಿರಣಿಗಳಿಗೆ ಕಚ್ಚಾ ಮಾಲು ಪೂರೈಸಲು ತಕ್ಕ ಬೆಳೆಯನ್ನು ಬೆಳೆಯುವದರಲ್ಲಿಯೇ ಮಗ್ನವಾಗಿ ಹೋಗಿದೆ. ಆಹಾರ ಧಾನ್ಯ ಬೆಳೆವ ಹೊಣೆಯನ್ನು ಒಕ್ಕಲಿಗನಿಗೆ ಬಿಟ್ಟು ತಾನು ತಣ್ಣಗೆ ಕುಳಿತಿದೆ. ನ್ಯೂ ಸೌಥವೇಲ್ಸದಲ್ಲಿ, ಮರಿಂಬ್ರಿಜ್ಜದ ನೀರಾವರಿ ವಿಭಾಗದಲ್ಲಿ ಒಂದು ಎಕರೆಗೆ ೧.೭೫ ಟನ್ನ ಅಕ್ಕಿ ಬೆಳೆಯುತ್ತಾರಂತೆ. ಇಷ್ಟೇ ಅಲ್ಲ ಆದರ್ಶಮಯ ಪರಿಸ್ಥಿತಿಯಲ್ಲಿ ಒಂದು ಎಕರೆಗೆ ೪ ಟನ್ನ ಅಕ್ಕಿ ಬೆಳೆದದ್ದೂ ಉಂಟೆಂದು ವರದಿಯಿದೆ. ವ್ಹಿಕ್ಟೋರಿಯಾದಲ್ಲಿ ಒಂದು ಎಕರೆಗೆ ೪೩೦ ಬುಟ್ಟಿಗೆಗಳಷ್ಟು ಟೊಮ್ಯಾಟೊ ಬೆಳೆಯುತ್ತಾರಂತೆ. ಹೀಗೆ ತೋರಿಸಬರುವಂತೆ ನಮ್ಮ ಕೃಷಿ ಶಾಖೆಯವರ ಬಳಿ ಏನಾದರೂ ಛಪತೆಯ ಮಾತುಗಳಿವೆಯೆ?

ಕೃಷಿ ಶಾಖೆಯನ್ನು ಪುನರ್ನಿಯೋಜಿಸುವ ಕಾಲವೀಗ ಬಂದಿದೆ. ಗಿರಣಿಗಳಿಗೂ ಕಾರಖಾನೆಗಳಿಗೂ ಕಚ್ಚಾ ಮಾಲು ಒದಗಿಸುವ ಮತ್ತು ವ್ಯಾಪಾರಾರ್ಥವಾಗಿರುವ ಬೆಳೆ ಬೆಳೆಯಲು ಬೇರೆ ಇನ್ನಾವುದೇ 'ಭೂಶೋಷಣ ಶಾಖೆ'ಗೆ ಒಪ್ಪಿಸಬಹುದು. ಈ ವಿಭಾಗಕ್ಕೆ ತಗಲುವ ವೆಚ್ಚವನ್ನು ಧನಿಕರ, ಬಂಡವಾಳಗಾರರ ಸುಂಕದಿಂದ ತುಂಬಿ ತೆಗೆಯಬೇಕಲ್ಲದೆ ರೈತನ ಕಂದಾಯದ ಹಣ ಇದಕ್ಕೆ ವೆಚ್ಚವಾಗತಕ್ಕದ್ದಲ್ಲ. ಜನರಿಗಾಗಿ ಅನ್ನೋತ್ಪಾದನೆಮಾಡುವ ಕಾರ್ಯವನ್ನು ಮಾತ್ರ ಕೃಷಿ ಶಾಖೆಗೆ ಒಪ್ಪಿಸಬೇಕು. ಇನ್ನು ಬೇರಾವ ವಿಷಯದಲ್ಲೂ ಈ ಶಾಖೆ ಅಧಿಕ ಪ್ರಸಂಗ ಮಾಡಲೇ ಕೂಡದು.

ಈ ವಿಭಾಗಕ್ಕೆ ಒಬ್ಬ ಕೃಷಿಕನು ಅಧ್ಯಕ್ಷನಾಗಿರಬೇಕಲ್ಲದೆ ಆಯ್. ಸಿ. ಎಸ್. ಅಧಿಕಾರಿಯಲ್ಲ. ಈ ವಿಭಾಗದ ಮುಖ್ಯಾಧಿಕಾರಿಗೆ ಹಣದ ರೂಪದಲ್ಲಿ ಸಂಬಳ ಕೊಡದೆ ಬತ್ತ ಬೆಳೆದು ಜೀವನ ಸಾಗಿಸಲು ಸಾಕಷ್ಟು ಭೂಮಿಯನ್ನೇ ಉಂಬಳಿಯಾಗಿ ಕೊಡಬೇಕು.

ಆಗ ಮಾತ್ರ ಕೃಷಿ ಶಾಖೆಯು ಒಕ್ಕಲಿಗನ ಮತ್ತು ನಾಗರಿಕರ ಅನ್ನ ಸಮಸ್ಯೆಯನ್ನು

(೧೦ನೆಯ ಪುಟಕ್ಕೆ)

ಬ್ರಿಟನ್ನಿನಲ್ಲಿ ಸಾಮಾಜಿಕ ಭದ್ರತೆ

ತೊಟ್ಟಿಲಿಂದ ಗೋರಿಯವರೆಗೆ ನಿಶ್ಚಿಂತೆಯ ಯೋಜನೆ

ನಾಳೆ ಜುಲೈ ೫ ರಿಂದ ಬ್ರಿಟನ್ನಿನಲ್ಲಿ ಯಾರೂ ಯಾವ ಅಭಾವದಿಂದಲೂ ನರಳ ಬೇಕಾಗಿಲ್ಲ. ಯುದ್ಧ ಕಾಲದಲ್ಲಿ ಲಾರ್ಡ ಬಿವರಿಜರು ಸಿದ್ಧಗೊಳಿಸಿದ ಸಾಮಾಜಿಕ ಭದ್ರತೆಯ ಯೋಜನೆ ಜಾರಿಗೆ ಬಂದು ಬಡವರಲ್ಲಿ ಬಡವರಾದ ಕೂಲಿಕಾರರಿಗೆ ಕೂಡ ತೊಟ್ಟಿಲಿಂದ ಗೋರಿಯತನಕ ನಿಶ್ಚಿಂತತೆಯನ್ನು ಕೊಡಲಿದೆ. ಹಿಂದೀ ಕೂಲಿಕಾರರಿಗೆ ಅದರ ಕೆಲವು ವಿವರಗಳು ರುಚಿಸಬಹುದು.

× × ×

ಈ ಯೋಜನೆ ಬ್ರಿಟನ್ನಿನ ಎಲ್ಲ ಪ್ರಜೆಗಳಿಗೂ ಅನ್ವಯಿಸುವದು. ಕೂಲಿಕಾರನೇ ಇರಲಿ, ಸಂಬಳದ ನೌಕರನೇ ಇರಲಿ, ದೊಡ್ಡ ಕಾರಖಾನೆಗಳ ಒಡೆಯನಿರಲಿ, ಒಬ್ಬಂಟಿಗ ವ್ಯಾಪಾರಿಯಿರಲಿ, ಎಲ್ಲರಿಗೂ ಬರುವ ತಿಂಗಳಿಂದ ರಾಷ್ಟ್ರೀಯ ವಿಮಾ ಕಾಯದೆ ಮತ್ತು ಔದ್ಯೋಗಿಕ ಅಪಘಾತ ಕಾಯದೆಗಳ ಪ್ರಯೋಜನ ದೊರಕಲಿವೆ.

ಜಡ್ಡಾದರೆ ಸಂರಕ್ಷಣೆ

ಸಾಮಾನ್ಯ ಕೂಲಿಕಾರನೊಬ್ಬನ ಜೀವನದಲ್ಲಿ ಈ ಕಾಯದೆಗಳು ಹೇಗೆ ಪರಿಣಾಮಕರವಾಗುತ್ತವೆಯೆಂದು ನೋಡೋಣ. ಅವನಿಗೆ ಹೆಂಡತಿ, ಇಬ್ಬರು ಮಕ್ಕಳಿರುವರೆಂದಿಟ್ಟುಕೊಳ್ಳೋಣ.

ಅವನಿಗಾಗಲಿ ಅವನ ಕುಟುಂಬದಲ್ಲಿ ಯಾರಿಗಾಗಲಿ ಜಡ್ಡಾದರೆ ಅವನು ತನಗೆ ಬೇಕಾದ ಡಾಕ್ಟರರಿಂದ ಸಹಾಯ ಪಡೆಯಬಹುದು. ಅದಕ್ಕಾಗಿ ಡಾಕ್ಟರರು ಅವನಿಗೆ ಬಿಲ್ಲು ಕಳಿಸುವದಿಲ್ಲ. ಅವರಲ್ಲಿ ಯಾರಿಗಾದರೂ ಆಸ್ಪತ್ರೆಯ ಶುಶ್ರೂಷೆಯಾಗಲಿ, ಶಸ್ತ್ರಕ್ರಿಯೆ, ಔಷಧ ಉಪಚಾರಗಳಾಗಲಿ ಬೇಕಾದರೆ ಹಣ ಕೊಡದೆ ಸಿಗುವವು.

ಹೆಂಡತಿಗೆ ಇನ್ನೊಂದು ಮಗು ಹುಟ್ಟಿದರೆ ಹೆರಿಗೆಯ ಸಮಯಕ್ಕೆ ಡಾಕ್ಟರ, ಸೂಲಗಿತ್ತಿ ಇವರ ಸಹಾಯವೂ ಪುಕ್ಕಟೆ ದೊರೆಯುವದು. ಮಗು ಹುಟ್ಟಿದ ದಿನವೇ ಅವಳಿಗೆ ೪ ಪೌಂಡ (ರೂ. ೫೩) ಹೆರಿಗೆಯ ಧನ ಸಹಾಯ ಬರುವದು. ಅವಳು ಕೆಲಸಕ್ಕೆ ಹೋಗುವವಳಿದ್ದು ಕೆಲಸ ಮಾಡುತ್ತಲೆ ಇದ್ದರೆ ೧೩ ವಾರಗಳ ವರೆಗೆ ವಾರಕ್ಕೆ ರೂ. ೨೩-೪-೦ ಯಂತೆ ಸಹಾಯ ಧನ ಬರುವದು. ಮನೆವಾರ್ತೆಯೆ ಅವಳ ಕೆಲಸವಾಗಿದ್ದರೆ ವಾರಕ್ಕೆ ೧೩-೩-೦ ರಂತೆ ನಾಲ್ಕು ವಾರದ ವರೆಗೆ ಮಾತ್ರ ದೊರೆಯುವದು. ಇದಲ್ಲದೆ ಆ ಮಗು ೧೬ ರ ವಯಸ್ಸಿಗೆ ಬರುವ ವರೆಗೆ ವಾರಕ್ಕೆ ರೂ. ೩-೫-೦ ಯಂತೆ ಮಗುವಿಗೆ ಸಹಾಯ ಧನ ಬರುವದು.

× × ×

ಇನ್ನು ವಿಮೆಯ ವಿಷಯ. ಕೂಲಿಕಾರನಿಗೆ ಜಡ್ಡಾದರೆ ವೈದ್ಯಕೀಯ ಸಹಾಯವಂತೂ ಪುಕ್ಕಟೆ ದೊರೆಯುವದಲ್ಲದೆ, ಅವನು ಜಡ್ಡು ಬಿದ್ದಷ್ಟು ಕಾಲವೂ ವಾರಕ್ಕೆ ಅವನಿಗೆ ರೂ. ೧೬-೪-೦, ಹೆಂಡತಿಗೆ ರೂ. ೧೦-೧೦-೦ ಮೊದಲನೆ ಮಗುವಿಗೆ ರೂ. ೫-೦-೦ ರಂತೆ ಜಡ್ಡಿನ ಸಹಾಯಧನ ಸಿಗುವದು. ಉಳಿದ ಮಕ್ಕಳಿಗೆ ವಾರಕ್ಕೆ ರೂ. ೩-೫-೦ ಯಂತೆ ಸಿಕ್ಕೇಸಿಗುವದು.

ಅವನು ನಿರುದ್ಯೋಗಿಯಾದರೆ ವಾರಕ್ಕೆ ರೂ. ೧೦-೧೦-೦ ಯಂತೆ ೧೮೦ ದಿನಗಳ ವರೆಗೆ (ಅವಶ್ಯ ಬಿದ್ದರೆ ೧ ವರ್ಷದ ವರೆಗೂ) ಸಹಾಯ ಸಿಗುವದು.

ಅಪಘಾತ ವಿಮೆ

ಕೂಲಿಕಾರ ಕೆಲಸ ಮಾಡುವಾಗ ಅಪಘಾತಕ್ಕೀಡಾದರೆ ಅಥವಾ ಯಾವುದಾದರೊಂದು ಔದ್ಯೋಗಿಕ ರೋಗ ಅವನಿಗಂಟಿದರೆ ಆಗ ಅವನು ಹಾಸಿಗೆ ಹಿಡಿದಷ್ಟು ಕಾಲ ವಾರಕ್ಕೆ ರೂ. ೨೯-೧೩-೦ ರಂತೆ ಲಭಿಸುವದು. ಆ ಸಮಯಕ್ಕೆ ಅವನ ಹೆಂಡತಿ ಮಕ್ಕಳಿಗೂ ಮೇಲಿನ ಪ್ಯಾರಾಗಳಲ್ಲಿ ಹೇಳಿದಂತೆ ಸಹಾಯವಂತೂ ಇದ್ದೇ ಇದೆ.

೬೫ ವಿರಾಮವೇತನದ ವಯಸ್ಸು. ಆಗ ಕೂಲಿಕಾರ ವಿರಾಮ ಹೊಂದಿದರೆ ಅವನಿಗೆ ವಾರಕ್ಕೆ ರೂ. ೧೬-೪-೦ ವಿರಾಮವೇತನ ಕೊಡುತ್ತಾರೆ. ಅವನ ಹೆಂಡತಿಗೆ ಆಗ ೬೦ ವಯಸ್ಸಾಗಿದ್ದು ಅವಳು ಮನೆಗೆಲಸದಲ್ಲಿದ್ದರೆ ಅವಳಿಗೆ ರೂ. ೧೦-೧೦-೦ ಸಹಾಯ. ೬೦ ಆಗಿರದಿದ್ದರೆ ಆಗ ಗಂಡನಿಗೆ ವಾರಕ್ಕೆ ೧೦-೧೦-೦ ಹೆಚ್ಚು ವಿರಾಮವೇತನ. ೬೫ ರ ಮೇಲೂ ಅವನು ಕೆಲಸ ಮಾಡುತ್ತಲೆ ಹೋದರೆ ವಿರಾಮ ವೇತನ ಇಲ್ಲ. ಮಾತ್ರ ಅವನು ಮುಂದೆ ವಿರಾಮ ಹೊಂದಿದಾಗ ಅವನಿಗೆ ಇನ್ನೂ ಹೆಚ್ಚು ವಿರಾಮ ವೇತನ ಸಿಗುವದು.

ವಿಧವೆಗೆ ಸಹಾಯ

ಕೂಲಿಕಾರ ಸತ್ತರೆ, ಅವನ ಉತ್ತರ ಕ್ರಿಯೆಗಾಗಿ ರೂ. ೨೬೫ ಅವನ ವಿಧವೆಗೆ ಒಡನೆ ಸಿಗುವದಲ್ಲದೆ ೧೩ ವಾರಗಳ ತನಕ ಅವಳಿಗೂ ಅವಳ ಮೊದಲನೆ ಮಗುವಿಗೂ ಸೇರಿ ವಾರಕ್ಕೆ ರೂ. ೨೪-೧೪-೦ ರಂತೆ ವಿಧವೆಯ ಸಹಾಯ ಧನ ಬರುತ್ತದೆ. ಆ ಮೇಲೆ ಆ ಮಗು ೧೬ ವಯಸ್ಸಿಗೆ ಬರುವ ವರೆಗೂ ವಾರಕ್ಕೆ ರೂ. ೨೨-೩-೦ ವಿಧವೆ ತಾಯಿಯ ಸಹಾಯ ಧನ ಸಿಗುವದು. ಅಷ್ಟರಲ್ಲಿ ಅವಳಿಗೆ ೪೦ ತುಂಬಿದ್ದರೆ ಆಜೀವ ಅವಳಿಗೆ ರೂ. ೧೬-೪-೦ ರಂತೆ ವಾರವಾರವೂ ಬರುತ್ತಲೇ ಇರುವದು.

ಸದ್ಯಕ್ಕೆ ವರ್ಷಕ್ಕೆ ರೂ. ೫೫೯೦ ಕ್ಕಿಂತ ಹೆಚ್ಚು ಉತ್ಪನ್ನವುಳ್ಳ ಶ್ರಮಜೀವಿಗಳಲ್ಲದವರಿಗೆ ಈ ಯೋಜನೆಗಳ ಲಾಭ ಸಿಗುವದಿಲ್ಲ.

× × ×

ಇದೆಲ್ಲ ಸುಮ್ಮನೆ ಆಗುತ್ತದೆಯೆ? ವರ್ಷಕ್ಕೆ ಕೋಟ್ಯಂತರ ರೂಪಾಯಿಗಳು ಬೇಕು. ಇದನ್ನು ಯಾರು ಕೊಡಬೇಕು? ಬ್ರಿಟನ್ನಿನ ಎಲ್ಲ ಪ್ರಜೆಗಳೂ ಎಂದು ಇದಕ್ಕೆ ಉತ್ತರ ಕೊಡಬೇಕಾಗುವದು.

ಮನೆವಾರ್ತೆಯಲ್ಲಿರುವ ಹೆಂಗಸರನ್ನು ಬಿಟ್ಟು ಉಳಿದ ಎಲ್ಲ ಗಂಡಸು ಹೆಂಗಸರೂ ಈ ಎಲ್ಲ ಸೌಕರ್ಯಗಳಿಗಾಗಿ ವಾರವಾರವೂ ರೂ. ೩-೩-೦ ಯಂತೆ ವರ್ಗಣಿ ಕೊಡಬೇಕಾಗುತ್ತದೆ. ಅಂತೆಯೆ ಕೂಲಿಕಾರರನ್ನು ನೇಮಿಸಿಕೊಂಡ ಒಡೆಯರೂ ಪ್ರತಿಕೂಲಿಕಾರಗೆ ವಾರಕ್ಕೆ ರೂ. ೨-೧೨-೦ ಯಂತೆ ತುಂಬುತ್ತಾರೆ. ಆದರೆ ಇಷ್ಟೆಲ್ಲ ವರ್ಗಣಿಯಿಂದ ಈ ಸೌಕರ್ಯಗಳ ವೆಚ್ಚದ ಅರ್ಧಕ್ಕರ್ಧದಷ್ಟು ಕೂಡ ತುಂಬಿ ಬರುವದಿಲ್ಲ. ನೂರಕ್ಕೆ ೫೪ ರಷ್ಟನ್ನು ಸರಕಾರ ತುಂಬಬೇಕಾಗುತ್ತದೆ. ಅದನ್ನು ಕರಗಳಿಂದ ಭರ್ತಿ ಮಾಡಿಕೊಳ್ಳಲಾಗುವದು.

ಬ್ರಿಟಿಶ ಕೂಲಿಕಾರ ಕಳೆದ ಯುದ್ಧದಲ್ಲಿ ಸುಮ್ಮನೆ ಬೆವರು ಸುರಿಸಲಿಲ್ಲ. ಅವನನ್ನು ನಿಶ್ಚಿಂತೆಯಿಂದಿಡಲು ಅವನ ಸರಕಾರ ಇಷ್ಟೆಲ್ಲ ವ್ಯವಸ್ಥೆ ಮಾಡುವ ಭರವಸೆ ಕೊಟ್ಟಿತ್ತು. ಆ ಭರವಸೆಯನ್ನಿಂದು ಪೂರೈಸಲಾಗಿದೆ.

ಕಾಶೀಂ ರಜವಿಯ ಭ್ರಮೆ

ಮುಸಲ್ಮಾನರ ಅಪಮಾನ

ರಜವಿಯವರನ್ನು ನಂಬಬೇಡಿರಿ

ರಜಾಕಾರರ ಮುಖಂಡರಾದ ಕಾಶೀಂ ರಜವಿಯವರು ಸಿಕ್ಕಾಬಟ್ಟೆ ಭ್ರಮಿಷ್ಟನಂತೆ ಮಾತನಾಡುತ್ತಿರುವದನ್ನು ಖಂಡಿಸಿ ಬುದ್ಧಿ ಶುದ್ಧಿಯಿದ್ದ ಅನೇಕ ಮುಸ್ಲಿಂ ಮುಖಂಡರು ಪ್ರಕಟನೆ ಹೊರಡಿಸಿದ್ದಾರೆ. ಜಮಾಯತ್ ಉಲ್ ಉಲೇಮಾ ಹಿಂದ ಪ್ರಧಾನ ಕಾರ್ಯದರ್ಶಿಗಳಾದ ಮೌಲಾನಾ ಹಫೀಜುರ ರಹಿಮಾನರು ತಾ. ೧೨ ರಂದು ಹೊರಡಿಸಿದ ಪ್ರಕಟನೆಯಲ್ಲಿ ರಜವಿಯವರ ಅಸಂಬದ್ಧ ಮಾತುಗಳಿಂದ ಹೈದರಾಬಾದದ ಪ್ರಶ್ನೆಯು ಮತ್ತಷ್ಟು ಕಠಿಣವಾಗುತ್ತದೆಂದೂ ಅವರು ಲೋಕದ ಸುರಕ್ಷಿತತೆಗೆ ಗಂಡಾಂತರಪ್ರಾಯರಾಗಿದ್ದಾರೆಂದೂ ಹಿಂದುಸ್ತಾನದಲ್ಲಿದ್ದ ಮುಸಲ್ಮಾನರು ರಜವಿಯವರ ಹೇಯವಾದ ಕಾರ್ಯದಲ್ಲಿ ಸಹಕರಿಸುವಷ್ಟು ನೀಚರಾಗಿಲ್ಲವೆಂದೂ ಅಂದಿದ್ದಾರೆ. ಇದರಂತೆ ಅಖಿಲ ಭಾರತ ಕಾಂಗ್ರೆಸ ಸಮಿತಿಯ ಸದಸ್ಯರಾದ ಅನ್ಸಾರ ಹರವಾನಿಯವರು ತಾ. ೧೦ ಕ್ಕೆ ತೆಗೆದ ಒಂದು ಪ್ರಕಟನೆಯಲ್ಲಿ ಹೈದರಾಬಾದ ಜನತೆಯ ವಿಮೋಚನೆಗಾಗಿ ಹಿಂದೀ ಮುಸಲ್ಮಾನರು ಪಂ. ನೆಹರು ಮತ್ತು ಸರದಾರ ಪಟೇಲರನ್ನು ಅನುಸರಿಸಿ ನಡೆಯಬೇಕೆಂದು ಹೇಳಿದ್ದಾರೆ. ಅಲ್ಲದೆ, "ಕೆಂಪು ಕೋಟೆಯ ಮೇಲೆ ನಿಜಾಮರ ಧ್ವಜವನ್ನು ಹಚ್ಚುವದಾಗಿ ಮತ್ತು ಹಿಂದುಸ್ತಾನದ ೪ ಕೋಟಿ ಮುಸಲ್ಮಾನರ ಬಂಧ ಮುಕ್ತ ಮಾಡುವದಾಗಿ ರಜವಿಯವರು ಬಡಾಯಿ ಕೊಚ್ಚಿದ್ದಾರೆ. ಜಿನ್ನಾರ ಸರ್ವಾಧಿಕಾರತ್ವದ ಫಲಭೋಗವನ್ನು ಹಿಂದೀ ಮುಸಲ್ಮಾನರು ಸಾಕಷ್ಟು ಉಂಡಿದ್ದಾರೆ. ಹೈದರಾಬಾದದ ಈ ಮರಿ ಹಿಟ್ಲರರು ಹಿಂದೀ ಮುಸಲ್ಮಾನರನ್ನು ಮೋಸಗೊಳಿಸ ಬಂದಿದ್ದು ಹಿಂದೀ ಮುಸಲ್ಮಾನರು ಅಷ್ಟು ವಿಚಾರಶೂನ್ಯರಿಲ್ಲವೆಂದು ನಾನು ಹೇಳಬಲ್ಲೆ" ಎಂದು ಮೊದಲಾಗಿ ನುಡಿದಿದ್ದಾರೆ. ಸೊಲ್ಲಾಪುರದ ಮುಸ್ಲಿಂಲೀಗ ಎಂ. ಎಲ್. ಎ. ಆದ ಅಬ್ದುಲ್ ಸತ್ತಾರ ಮಹಮ್ಮದ ಹುಸೇನರು, ಕಾಶೀಂ ರಜವಿಯು ತನ್ನ ಜಂಬದ ಮಾತುಗಳಿಂದ ಹಿಂದಿ ಒಕ್ಕೂಟದ ಮುಸಲ್ಮಾನರೆಲ್ಲರ ಅಪಮಾನ ಮಾಡಿದ್ದಾನೆಂದು ಆಪಾದನೆ ಮಾಡಿದ್ದಾರೆ. ಆದ್ದರಿಂದ ಹಿಂದಿ ಒಕ್ಕೂಟದ ಆದರಂತೆ ಹೈದರಾದದ ಮುಸಲ್ಮಾನರು ರಜವಿಯವರ ಮಾತನ್ನು ನಂಬಿ ಮೋಸ ಹೋಗದೆ ಎಚ್ಚರದಿಂದಿರಬೇಕಾದುದು ಅಗತ್ಯ.

ಪಾಕಿಸ್ತಾನ ಪೋಲೀಸ ಅಧಿಕಾರಿಗಳು

ಲೂಟಿಯಲ್ಲಿ ಭಾಗ ವಹಿಸಿದರು

೧೯೪೮ ಜಾನೇವಾರಿ ೬ ನೇ ದಿನ ಮುಸ್ಲಿಮೇತರ ಆಸ್ತಿಯನ್ನು ಸುಲಿಯುವದರಲ್ಲಿ ಪಾಕಿಸ್ತಾನದ ಪೋಲೀಸ ಅಧಿಕಾರಿಗಳು ಕೂಡ ಭಾಗವಹಿಸಿದ್ದರಾಗಿ ತಿಳಿಯುತ್ತದೆ. ಹೀಗೆ ಸುಲಿಗೆಯಲ್ಲಿ ಭಾಗವಹಿಸಿದ್ದಕ್ಕೆ ಕರಾಚಿಯ ಸ್ಥಳೀಯ ನ್ಯಾಯಾಧೀಶರು ಓರ್ವ ಫೌಜದಾರನಿಗೆ ೨ ವರ್ಷ ಸಶ್ರಮ ಶಿಕ್ಷೆ ಮತ್ತು ೧೦೦೦ ರೂ. ದಂಡವನ್ನು ವಿಧಿಸಿದರು. ಫೌಜದಾರನು ಜಾನೆವರಿ ೬ ಕ್ಕೆ ಕರಾಚಿಯಲ್ಲಿ ಆದ ಲೂಟಿಯಲ್ಲಿ ೧ ಮೋಟಾರ ತುಂಬ ಬಟ್ಟೆಗಳನ್ನು ತನ್ನ ಮನೆಗೆ ಒಯ್ದಿದ್ದನು.

ಕರ್ನಾಟಕ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಭೆ

ಮಹತ್ವದ ಗೊತ್ತುವಳಿಗಳು

ಅಧಿಕಾರಿಗಳ ಆಯ್ಕೆ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯ ಸರ್ವಸಾಧಾರಣ ಸಭೆಯು ೧೩ ನೇ ತಾರೀಕು ಸಾಯಂಕಾಲ ನಾಲ್ಕು ಗಂಟೆಗೆ ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಹಾಯಸ್ಕೂಲಿನಲ್ಲಿ ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ೫೯ ಸದಸ್ಯರು ಸಭೆಗೆ ಬಂದಿದ್ದರು. ಕಳೆದ ವರುಷದ ಲೆಕ್ಕ ಪತ್ರ ಸ್ವೀಕೃತವಾಯಿತು. ಹೊಸ ವರುಷದಲ್ಲಿ ೩೩ಸಾವಿರ ರೂಪಾಯಿ ವೆಚ್ಚ ೧೩ಸಾವಿರ ರೂಪಾಯಿ ಆದಾಯವಿದ್ದು ಕೊರತೆಯ ಹಣವನ್ನು ಕಾಣಿಕೆ ರೂಪದಿಂದ ತುಂಬಿಕೊಳ್ಳಬೇಕೆಂದು ಗೊತ್ತಾಯಿತು. ಪ್ರಾಂತೀಯ ಕಾಂಗ್ರೆಸ ಸಮಿತಿಯ ಹೊಸ ಘಟನೆಯನ್ನು ಸಿದ್ಧಪಡಿಸಲು ಶ್ರೀ ರಂಗನಾಥ ದಿವಾಕರ (ಅಧ್ಯಕ್ಷ), ಯು. ಶ್ರೀನಿವಾಸ ಮಲ್ಯ, ಚನಬಸಪ್ಪ ಅಂಬಲಿ, ನಂಜರಾಜ ಅರಸ, ಟೇಕೂರು ಸುಬ್ರಹ್ಮಣ್ಯಂ ಮತ್ತು ಪ್ರಾಂತಿಕ ಕಾರ್ಯದರ್ಶಿಯ ಸಮಿತಿಯೊಂದನ್ನು ನೇಮಿಸಲಾಯಿತು.

ಏಕೀಕರಣ ಸಂಧಾನ ಸಮಿತಿ

ಮೈಸೂರು ಮತ್ತು ಒಕ್ಕೂಟ ಕರ್ನಾಟಕದ ಎರಡೂ ಘಟಕಗಳನ್ನು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಒಂದೇ ಆಡಳಿತದಲ್ಲಿ ಹೇಗೆ ತರಬೇಕೆಂಬದನ್ನು ಪರಿಶೀಲಿಸಿ ಮಾರ್ಗ ಹುಡುಕುವ ನಿಮಿತ್ತ ಸಮಿತಿಯೊಂದನ್ನು ನೇಮಿಸಬೇಕೆಂದು ಗೊತ್ತಾಯಿತು. ಈ ಸಮಿತಿಯಲ್ಲಿ ಪ್ರಾಂತೀಯ ಅಧ್ಯಕ್ಷರು, ಶ್ರೀ ರಂಗನಾಥ ದಿವಾಕರ, ಕೆ. ಆರ್. ಕಾರಂತ, ಎಂ. ಪಿ. ಪಾಟೀಲ, ಬಿ ಅನಂತಾಚಾರ್ಯರಿರುವರು.

ಅ- ಭಾ- ಕಾಂ. ಸಮಿತಿಯ ಆಯ್ಕೆ

ಅಖಿಲ ಭಾರತ ಕಾಂಗ್ರೆಸ ಸಮಿತಿಗೆ ಶ್ರೀ ಎಂ. ಪಿ. ಪಾಟೀಲ, ಸಿ. ಜೆ. ಅಂಬಲಿ, ಎಸ್. ನಿಜಲಿಂಗಪ್ಪ, ಎ. ಎ. ಮುಂಡಗಿ, ನಂಜರಾಜ ಅರಸ, ದಾಮೋದರ ಬಾಳಿಗಾ, ಯು. ಶ್ರೀನಿವಾಸ ಮಲ್ಯ, ಆರ್. ಜಿ. ದುಬೆ, ಟೇಕೂರ ಸುಬ್ರಹ್ಮಣ್ಯಂ ಮತ್ತು ರಂಗನಾಥ ದಿವಾಕರ ಈ ಹತ್ತು ಜನರು ಆರಿಸಲ್ಪಟ್ಟರು. ಕಾರ್ಯಕಾರಿ ಮಂಡಳವನ್ನು ಆರಿಸಿಕೊಳ್ಳುವ ಅಧಿಕಾರವನ್ನು ಅಧ್ಯಕ್ಷರಿಗೆ ಕೊಡಲಾಯಿತು. ಅಧ್ಯಕ್ಷರು ತಮ್ಮ ಕಾರ್ಯಕಾರಿ ಮಂಡಳದಲ್ಲಿ ಟಿ. ಆರ್. ನೆಸ್ವಿ, ಯು. ಶ್ರೀನಿವಾಸ ಮಲ್ಯ (ಉಪಾಧ್ಯಕ್ಷರು) ವೆಂಕಟೇಶ ಮಾಗಡಿ (ಪ್ರಧಾನ ಕಾರ್ಯದರ್ಶಿ) ಗುದ್ಲೆಪ್ಪ ಹಳ್ಳಿಕೇರಿ (ಜೊತೆ ಕಾರ್ಯದರ್ಶಿ) ವೀರನಗೌಡ ಪಾಟೀಲ (ಕೋಶಾಧ್ಯಕ್ಷ) ಶ್ರೀ ಚನಬಸಪ್ಪ ಅಂಬಲಿ, ಸಿದ್ದನಗೌಡ ಪಾಟೀಲ, ಹೊದಿಕೆ ಮಾಸ್ತರ, ಎಚ್. ಕೆ. ವೀರಣ್ಣಗೌಡ, ಮರಿಸ್ವಾಮಿ ಹಿರೇಮಠ, ಆರ್. ಜಿ. ದುಬೆ, ಬಸವಣ್ಣೆಪ್ಪ ಸಾಣೀಕೊಪ್ಪ, ಎಚ್. ನಾರಾಯಣರಾವ ಮತ್ತು ಕೆ. ಸಿ. ಕರಂಬಯ್ಯ ಇವರನ್ನು ತೆಗೆದುಕೊಂಡಿರುವರು.

ಹೈದರಾಬಾದ ಸಮಸ್ಯೆ

ಹೈದರಾಬಾದ ಸಮಸ್ಯೆಯ ಬಗ್ಗೆ ಸಮಿತಿಯಲ್ಲಿ ತೀವ್ರ ಚರ್ಚೆಯಾಯಿತು. ಅಲ್ಲಿನ ಪರಿಸ್ಥಿತಿ ಇನ್ನಷ್ಟು ಹದಗೆಡದಂತೆ ವ್ಯವಸ್ಥೆ ಮಾಡಲು ಹಿಂದುಸ್ತಾನ ಸರಕಾರವು ಒಪ್ಪಂದದ ವಿಚಾರದಲ್ಲಿ ಮೂಲಭೂತ ಕರಾರುಗಳನ್ನು ಇಳಿಸಕೂಡದು. ಹಾಗೂ ಆ ಸಂಸ್ಥಾನವು ಹಿಂದುಸ್ತಾನದಲ್ಲಿ ಸೇರಿ ಅಲ್ಲಿ ಪ್ರಜಾಪ್ರಭುತ್ವ ಸರಕಾರ ಸ್ಥಾಪಿತವಾಗುವಂತೆ ತಕ್ಕ ಉಪಾಯಗಳನ್ನು ಕೈಕೊಳ್ಳಬೇಕೆಂದು ಒಮ್ಮತದಿಂದ ನಿರ್ಣಯಿಸಲಾಯಿತು. ಇತ್ತೆಹಾದದ ಚಟುವಟಿಕೆಗಳನ್ನು ಖಂಡಿಸಲಾಯಿತು. ಹೈದರಾಬಾದದ ರಜಾಕಾರರಿಗೆ ಹೆದರದೆ ತಮ್ಮ ಧ್ಯೇಯ ಸಾಧಿಸುವ ವರೆಗೆ ಅವರ ಆಕ್ರಮಣವನ್ನು ಧೈರ್ಯದಿಂದ ಎದುರಿಸಬೇಕೆಂದು ಜನತೆಗೆ ಸೂಚಿಸಲಾಗಿದೆ. ಈ ಹಾವಳಿಯಿಂದ ಪೀಡಿತರಾದವರಿಗೆ ಸಹಾನುಭೂತಿಯನ್ನು ವ್ಯಕ್ತ ಮಾಡಿ ಸಹಾಯದ ಆಶ್ವಾಸನವನ್ನೂ ಕೊಡಲಾಗಿದೆ.

ಸೊಂಡೂರು ಸಂಸ್ಥಾನ

ಸೊಂಡೂರು ಸಂಸ್ಥಾನವು ಬಳ್ಳಾರಿ ಜಿಲ್ಲೆಯಲ್ಲಿ ಸೇರಿ ಹೋಗಬೇಕೆಂದು ಕೇಳಿಕೊಳ್ಳುತಿರುವ ಪ್ರಜೆಗಳ ಬೇಡಿಕೆಯನ್ನು ಹತ್ತಿಕ್ಕುವ ಚಟುವಟಿಕೆಗಳನ್ನು ಸರಕಾರವು ನಡೆಸಿದೆಂದು ತಿಳಿದಿದೆ. ಕಾರಣ ಆ ಸಂಸ್ಥಾನವನ್ನು ಸಂದ

ಧಾರವಾಡ

ಕೆ. ಈ. ಬೋರ್ಡ ಆರ್ಟ್ಸ ಕಾಲೇಜಿನ ವಿದ್ಯಾರ್ಥಿ ವಸತಿಗೃಹದ ಅಡಿಗಲ್ಲು ಕೂಡಿಸುವ ಸಮಾರಂಭವು ಗದುಗಿನ ಶ್ರೀ ಲಕ್ಷ್ಮಣದಾಸ ಸಾವಕಾರ ಇವರ ಅಮೃತಹಸ್ತದಿಂದ ೧೩ ನೇ ತಾರೀಕು ಮುಂಜಾನೆ ನೆರವೇರಿತು. ಶ್ರೀ ರಾಘವೇಶರಾವ ಶಿರೂರ ಇವರು ಅಧ್ಯಕ್ಷತೆ ವಹಿಸಿದ್ದರು. ಬೋರ್ಡಿನವರು ಧಾರವಾಡದಲ್ಲಿ ಮೈಲಾರಲಿಂಗನ ಹತ್ತರ ಕಾಲೇಜಿಗಾಗಿ ವಿಶಾಲ ಸ್ಥಳವನ್ನು ತೆಗೆದುಕೊಂಡಿರುವರು.

ಅ. ಭಾ. ಭಾವಸಾರ ಕ್ಷತ್ರಿಯ ಸಮಾಜ ಸೇವಾ ಸಂಘದ ಪ್ರಥಮ ಅಧಿವೇಶನ ಗದುಗಿನಲ್ಲಿ ಶ್ರೀ ರಾಣೋಜಿಯವರ ಅಧ್ಯಕ್ಷತೆಯಲ್ಲಿ ೧೩ ಕ್ಕೆ ಜರುಗಿತು. ಹೊಲಿಗೆಯ ಮತ್ತು ಹೆಣಿಕೆಯ ಪ್ರದರ್ಶನವೂ ಏರ್ಪಡಿಸಲ್ಪಟ್ಟಿದೆ.

ಧಾರವಾಡ ಜಿಲ್ಹೆಯ ಶ್ರೀ ಎಸ್. ಜಿ. ದೇಶಪಾಂಡೆಯವರು ೧ ನೇ ವರ್ಗದಲ್ಲಿ ಮತ್ತು ಪಿ. ಎಸ್. ಹಾನಗಲ್ಲ ಮತ್ತು ಆರ್. ಬಿ. ಬಾಗಲ ಎರಡನೆ ವರ್ಗದಲ್ಲಿ ಬನಾರಸ ಹಿಂದೂ ವಿಶ್ವವಿದ್ಯಾಲಯದ ಬಿ. ಎಸ್. ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು.

ಹುಬ್ಬಳ್ಳಿಯ ಶ್ರೀ ಮಹಾದೇವಪ್ಪಾ ಮುರಗೋಡ ಇವರನ್ನು ಸಾರ್ವಜನಿಕ ಸುರಕ್ಷಿತತೆ ಕಾಯಿದೆಯನ್ವಯ ಬೆಳಗಾವಿಯ ವಾರಂಟಿನ ಮೇಲೆ ಸೆರೆ ಹಿಡಿದು ಬೆಳಗಾವಿಗೆ ಕರೆದುಕೊಂಡು ಹೋದರು.

ಧಾರವಾಡದ ಮಾಧ್ವ ವಿದ್ಯಾಪೀಠದಲ್ಲಿ ತಾ. ೧೦–೧೧–೧೨ ಈ ಮೂರು ದಿನ ಪಂಢರಪುರದ ಪಂಡಿತ ನರಸಿಂಹಾಚಾರ್ಯ ವರಖೇಡಿಯವರು ಭಗವದ್ಗೀತೆಯ ಉಪದೇಶ ತತ್ವ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸವಿತ್ತರು. ಶ್ರೀ ಕುಲಕರ್ಣಿ ಕೃಷ್ಣರಾಯರು ಮತ್ತು ಪಾಂಡುರಂಗೀ ನಾರಾಯಣಾಚಾರ್ಯರು ದಾಸರ ಪದಗಳನ್ನು ಹೇಳಿದರು.

ಬಳ್ಳಾರಿ

ಹೊಸಪೇಟೆಯಲ್ಲಿ ಶ್ರೀಮನ್ನಿರಂಜನ ಜಗದ್ಗುರು ಕೊಟ್ಟೂರು ಮಹಾಸ್ವಾಮಿಗಳವರು ತಮ್ಮ ಮಠದಲ್ಲಿ ಪಾಠಶಾಲೆಯನ್ನು ಸ್ಥಾಪಿಸಿ ೧೨ ವರುಷಗಳಿಂದಲೂ ನಿರಾತಂಕವಾಗಿ ನಡೆಸಿಕೊಂಡು ಬಂದಿದ್ದಾರೆ. ಈ ಪಾಠಶಾಲೆಯಲ್ಲಿ ಸಂಸ್ಕೃತ, ಜ್ಯೋತಿಷ, ವೈದಿಕ ಪಾಠಗಳು ನಡೆಯುತ್ತವೆ. ಭರತಕ್ಕೆ ವಿದ್ಯಾರ್ಥಿಗಳು ಜೂನ ೩೦ ರೊಳಗಾಗಿ ಬರಬೇಕು.

ಹೊಸಪೇಟೆಯಲ್ಲಿ ಶ್ರೀ ಬೂದೀಹಾಳ ಅನಂತಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಯೋಗಿ ಅಚ್ಯುತರವರ ಕೃಪಾಪೋಷಿತ ಶ್ರೀ ವಿಜಯೀಂದ್ರ ಸಾಹಿತ್ಯ ಸೇವಾ ಸಮಿತಿಯು ಸ್ಥಾಪಿತವಾಗಿದೆ. ವಿಜಯೀಂದ್ರರ ಸಾಹಿತ್ಯ ಪ್ರಕಾಶನ ಮತ್ತು ಕವಿ ಸನ್ಮಾನಗಳೆ ಸಮಿತಿಯ ಧ್ಯೇಯಗಳಾಗಿವೆ. ಕನ್ನಡಿಗರೆಲ್ಲ ಸಹಾಯ ಸಲ್ಲಿಸಬೇಕಾಗಿ ಕೋರಲಾಗಿದೆ.

ರ್ಶಿಸಿ ಅಲ್ಲಿನ ರಾಜಕೀಯ ಪರಿಸ್ಥಿತಿಯ ವರದಿ ಮಾಡಲು ಶ್ರೀ ತಲ್ಲೂರ ರಾಯನಗೌಡರು (ಆಮಂತ್ರಕ), ಬಿ. ಎಸ್. ಮುನವಳ್ಳಿ, ಟೇಕೂರು ಸುಬ್ರಹ್ಮಣ್ಯಂ ಇವರ ಸಮಿತಿಯನ್ನು ಪ್ರಾಂತೀಯ ಕಾರ್ಯಕಾರೀ ಮಂಡಲದ ಸಭೆಯಲ್ಲಿ ನೇಮಿಸಲಾಯಿತು.

ನೀಲಗಿರಿ ಜಿಲ್ಹೆಯನ್ನು ಒಡೆದು ಮಲಬಾರ ಮತ್ತು ಕೊಯಿಮತ್ತೂರ ಜಿಲ್ಹೆಗಳಲ್ಲಿ ಹಂಚಬೇಕೆಂಬದನ್ನು ಖಂಡಿಸಿ ನೀಲಗಿರಿ ಜಿಲ್ಹೆಯ ಪ್ರಥಮ ಕನ್ನಡ ಪರಿಷತ್ತಿನಲ್ಲಿ ಸ್ವೀಕೃತವಾದ ಗೊತ್ತುವಳಿಯನ್ನು ಸಮರ್ಥಿಸಲಾಯಿತು.

ಮಂಗಳೂರು ಜಿಲ್ಹಾ ಕಾಂಗ್ರೆಸ ಸಮಿತಿ ಚುನಾವಣೆಗಳು ಕ್ರಮಬದ್ಧವಾಗಿ ಆಗಿಲ್ಲವೆಂದು ತಿಳಿದು ಬಂದದ್ದರಿಂದ ಅವನ್ನು ರದ್ದುಪಡಿಸಿ ಪುನಃ ಚುನಾವಣೆ ನಡೆಸಲು ಪ್ರಾಂತಿಕ ಕಾಂಗ್ರೆಸ ಸಮಿತಿಯು ತನ್ನ ಪ್ರಧಾನ ಕಾರ್ಯದರ್ಶಿಯನ್ನು ಅಲ್ಲಿಗೆ ಕಳಿಸಬೇಕೆಂದು ನಿರ್ಣಯಿಸಲಾಯಿತು. ಅಲ್ಲಿಯ ವರೆಗೆ ಹಳೆ ಸಮಿತಿಯೆ ಅಧಿಕಾರದಲ್ಲಿ ಉಳಿಯುವದೆಂದು ಮತ್ತೊಂದು ಗೊತ್ತುವಳಿಯಿಂದ ನಿರ್ಣಯಿಸಲಾಯಿತು.

ವಿಜಾಪುರ

ಬಾಗಲಕೋಟೆಯಲ್ಲಿ ಶ್ರೀ ಮುಳಗಿ ಕೃಷ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಬ್ರಾಹ್ಮಣ ಸಂಘದ ಪರವಾಗಿ ಸಭೆ ಸೇರಿ ದಿ. ಬುರ್ಲಿ ಶ್ರೀನಿವಾಸಾಚಾರ್ಯರ ಅಕಾಲ ನಿಧನದ ಬಗ್ಗೆ ದುಃಖ ಪ್ರದರ್ಶಿಸಲಾಯಿತು. ಹಲವರು ಭಾಷಣ ಮಾಡಿ ಆಚಾರ್ಯರ ವಿಧವಿಧ ಸಾಹಿತ್ಯಸಂಸ್ಕೃತಿ ಸೇವೆಯನ್ನು ಬಣ್ಣಿಸಿ ಬಾಗಲಕೋಟೆಯ ಜೀವಜ್ಯೋತಿಯೊಂದು ಕಣ್ಮರೆಯಾಯಿತೆಂದು ಹೇಳಿದರು.

ವಿಜಾಪುರ ಖಾದೀ ಕೇಂದ್ರದಲ್ಲಿ ೧೦ ನೇ ತಾರೀಕು ದಿ. ಕೌಜಲಗಿ ಹಣಮಂತರಾಯರ ಪುಣ್ಯತಿಥಿ ಆಚರಿಸಲಾಯಿತು. ರಾಷ್ಟ್ರಧ್ವಜ ವಂದನೆ ಸೂತ್ರಯಜ್ಞ ನಡೆದು ಸಾಯಂಕಾಲ ಶ್ರೀ ಕಂಕಣವಾಡಿ ವಕೀಲರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ದಿವಂಗತರ ಗುಣಗಾನ ಮಾಡಲಾಯಿತು. ಕೀರ್ತನ ಕೇಸರಿ ಜಿಯ ರಾಮಾಚಾರ್ಯರು ದಿವಂಗತರ ಚರಿತ್ರೆಯನ್ನು ಕೀರ್ತನ ರೂಪದಲ್ಲಿ ಎರಡು ಗಂಟೆಗಳ ಕಾಲ ಹೇಳಿದರು.

ಮುಧೋಳದಲ್ಲಿ ಸಾರ್ವಜನಿಕ ವಾಚನಾಲಯದಲ್ಲಿ ದಿವಂಗತ ಹಣಮಂತರಾವ ಕೌಜಲಗಿಯವರ ಭಾವಚಿತ್ರದ ಅನಾವರಣ ಸಮಾರಂಭವು ಶ್ರೀ ನಾಯಕ ವೆಂಕಟರಾಯರ ಹಸ್ತದಿಂದ ಜರುಗಿತು. ಅವರ ಹೆಸರಿನಲ್ಲಿ ವಾಚನಾಲಯದಲ್ಲಿ ಗಾಂಧೀ ಸಾಹಿತ್ಯವಿಭಾಗವನ್ನು ತೆರೆಯುವ ಸಮಾರಂಭವೂ ಇದೇ ಕಾಲಕ್ಕೆ ಜರುಗಿತು. ಈ ವಿಭಾಗಕ್ಕಾಗಿ ಈಗಾಗಲೆ ೫೦೦ ರೂಪಾಯಿ ಕೂಡಿವೆ.

ಸಿಂದಗಿ ಮೋಟರ ಸ್ಟ್ಯಾಂಡಿನ ಮೇಲೆ ಪೋಲೀಸರು ನಿಜಾಮರ ಹಸ್ತಕನೆಂಬ ಸಂಶಯದ ಮೇಲೆ ಓರ್ವನನ್ನು ೧೦ ನೇ ತಾರೀಖಿನ ದಿವಸ ಬಂಧಿಸಿದರು. ಝಡ್ತಿ ಮಾಡಲಾಗಿ ಅವರ ಹತ್ತರ ಕೆಲ ಕಾಗದ ಪತ್ರಗಳು ಸಿಕ್ಕಿದ್ದು ಪೋಲೀಸರು ಅವನ್ನು ವಶಪಡಿಸಿಕೊಂಡರು.

ಮುಗುಳಿ ಎಂಬ ಹಳ್ಳಿಯಲ್ಲಿ ನಿಜಾಮರ ಕಡುಕ ಕುದುರೆ ಸವಾರನೊಬ್ಬನು ಗುಂಡು ಹಾರಿಸಿ ಓಡಿ ಹೋಗಬೇಕೆಂದಿರುವಾಗ ಅಲ್ಲಿಯ ಪೋಲೀಸರು ಅವನನ್ನು ಬಂಧಿಸಿದರು. ನಿಜಾಮ ಪೋಲೀಸರ ಮೂರು ಲಾರಿಗಳು ಗಡಿಯ ಮೇಲೆ ಹೋಗುವಾಗ ದುಧನಿ ಕಡೆ ಕೆಲ ಗುಂಡು ಹಾರಿಸಿದರು.

ಬೆಳಗಾವಿ

ದಿವಂಗತ ಕೌಜಲಗಿ ಹಣಮಂತರಾಯರ ಪುಣ್ಯತಿಥಿಯು ೧೦ನೇ ತಾರೀಕು ಅಥಣಿಯಲ್ಲಿ ಕೌಜಲಗಿ ಅರ್ಥ ವಿಜ್ಞಾನ ಸಂಸ್ಥೆಯ ವತಿಯಿಂದ ಆಚರಿಸಲ್ಪಟ್ಟಿತು ಸೀನಿಯರ ಸಿವಿಲ್ ಜಜ್ಜರಾಗಿರುವ ಸಿಕ್ವೇರಾ ಇವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ಹಲವು ಮಹನೀಯರು ದಿವಂಗತರ ಚರಿತ್ರವನ್ನು ವಿವರಿಸಿದರು. ಈ ಅರ್ಥ ವಿಜ್ಞಾನ ಸಂಸ್ಥೆಯ ಪರವಾಗಿ ಪ್ರಸಿದ್ಧವಾಗಲಿರುವ "ಜೀವನ ಭೂಮಿ" ಎಂಬ ಚಿಕ್ಕ ಹೊತ್ತಿಗೆಯ ಪ್ರಕಾಶನ ಸಮಾರಂಭವೂ ಇದೇ ಕಾಲಕ್ಕೆ ಜರುಗಿತು.

ಉತ್ತರ ಕನ್ನಡ

ಶಿರಸಿಯ ಆಯುರ್ವೇದೀಯ ವೈದ್ಯರಾದ ಕೃಷ್ಣ ಜಿ. ಭಟ್ಟ ಎಂಬವರು ಸಚ್ಚಿದಾನಂದ ಸ್ವಾಮಿ ಎಂಬವರ ಆಶ್ರಮಕ್ಕೆ ಬೆಂಕಿ ಹಚ್ಚಿದರೆಂಬ ಬಗ್ಗೆ ನಡೆದ ಖಟ್ಲೆಯಲ್ಲಿ ಸೆಶನ್ಸ ಜಜ್ಜರು ಸಾಕ್ಷಿ ಪುರಾವೆ ಸಾಕಷ್ಟಿಲ್ಲೆಂದು ಆರೋಪಿಗಳನ್ನು ಬಿಡುಗಡೆ ಮಾಡಿದರು ಡಾಕ್ಟರರ ಸಂಬಂಧಿಕ ಸ್ತ್ರೀಯೊಬ್ಬಳಿಗೆ ಸಾಧುವು ಮಾಟ ಮಾಡಿದರೆಂದು ಭಟ್ಟರು ಅವರ ಆಶ್ರಮಕ್ಕೆ ಬೆಂಕಿ ಹಚ್ಚಿದರೆಂಬುದು ಖಟ್ಲೆಯ ಕಾರಣವಾಗಿತ್ತು.

ಉತ್ತರ ಕನ್ನಡ ಜಿಲ್ಹಾ ಮದ್ಯಪಾನ ಪ್ರತಿಬಂಧಕ ಸಮಿತಿಗೆ ಶ್ರೀ ಬಾಬೂ ಕಾಮತ ಮತ್ತು ಹರಿ ಪೈ ಇವರು ಗೌರವದ ಪ್ರಚಾರಕರೆಂದು ಮುಂಬಯಿ ಸರಕಾರದವರಿಂದ ನೇಮಕ ಹೊಂದಿರುವರು.

ಹಳ್ಯಾಳ ಮುನಿಸಿಪಾಲಿಟಿಯ ಹಿಂದಿನ ಅಧ್ಯಕ್ಷರಾದ ರಾವಸಾಹೇಬ ಅಡಿವೆಪ್ಪಣ್ಣ ಶಿಟ್ಟೂರರು ಹೊಸ ಅಧ್ಯಕ್ಷರಾದ ಡಾ. ಮಹಾಜನರು ಸರಿಯಾಗಿ ಆರಿಸಲ್ಪಟ್ಟಿಲ್ಲೆಂದು ಮಾಡಿದ ದಾವೆಯ ವಿಚಾರಣೆ ಜಿಲ್ಹಾ ನ್ಯಾಯಾಧಿ[illegible] ನಡೆದು ಡಾ. ಮಹಾಜನರಂತೆ ತೀರ್ಪು [illegible] [illegible]

ದಕ್ಷಿಣ ಕನ್ನಡ

ಉಡುಪಿಯ ಶ್ರೀ ಕೃಷ್ಣ ದೇ[illegible] ಸಾರ್ವಜನಿಕ ದೇವಾಲಯವೆಂದು [illegible] ಗವರ್ನರರು ಸಾರಿರುವರು. [illegible] ಚಾರ್ಯರಿಂದ ಸ್ಥಾಪಿತವಾದ ಈ ದೇ[illegible] ಸಾರ್ವಜನಿಕವಲ್ಲೆಂದು ಉಡುಪಿ [illegible] ವಾದಿಸಿದ್ದರು. ಆದರೆ ಮದ್ರಾಸ [illegible] ಈ ವಾದವನ್ನೊಪ್ಪದೆ ಅದನ್ನು [illegible] ವೆಂದು ಜಾಹೀರ ಮಾಡಿದರು.

ಕರ್ನಾಟಕದ ಪ್ರಸಿದ್ಧ ವಿದ್ವಾಂಸರಾಗಿ[illegible] ಪಂಡಿತ ಮುಳಿಯ ತಿಮ್ಮಪ್ಪಯ್ಯನವರು [illegible] ಪ್ರಾಧ್ಯಾಪಕ ಸ್ಥಾನದಿಂದ ಇದೇ [illegible] ನಿವೃತ್ತರಾದರು. ಇವರೀಗ ಮಂಗಳೂರಿನ ಸೆಂಟ ಎಲೋಶಿಯಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ದಕ್ಷಿಣ ಕನ್ನಡ ಪಂಡಿತ [illegible] ನೇತೃತ್ವದಲ್ಲಿ ೧೦ ನೇ ತಾರೀಕು [illegible] ಸನ್ಮಾನ ಮಾಡಲಾಯಿತು. ಪಟ್ಟಣವ[illegible] ಬಿಡುವ ಬಗ್ಗೆ ತಮಗೆ ದುಃಖವಾಗಿಲ್ಲ[illegible] ಗೆಳೆಯರ ಅಗಲುವಿಕೆಗಾಗಿ ದುಃಖವಾ[illegible] ದೆಂದು ಮುಂತಾಗಿ ಪಂಡಿತರು ಉತ್ತರ [illegible] ಎಲ್ಲರ ಆಭಾರ ಮನ್ನಿಸಿದರು.

ಕಾಸರಗೋಡಿನ ಹತ್ತರ ಸಮ[illegible] ತೇಲಿ ಬಂದ ಡಬ್ಬಿಯೊಂದರ ಕವಚವನ್ನು [illegible] ಕಮ್ಮಾರನೊಬ್ಬನು ತೆಗೆಯಲು [illegible] ತ್ನಿಸುತಿದ್ದಾಗ ಅದು ಸ್ಫೋಟವಾಗಿ ಕಮ್ಮಾ[illegible] ರನು ಕೂಡಲೆ ಮರಣಹೊಂದಿದನು. [illegible] ಕಲೆ ಮತ್ತು ಒಂದು ಕಾಲು ಬೇ[illegible] ಗಿದ್ದವು.

ಕನ್ನಡ ನಾಡಿನ ಪ್ರಸಿದ್ಧ ಸಾಹಿತಿ[illegible] ಗ್ರಂಥಕರ್ತರೂ ಕವಿಗಳೂ ನಾಟಕ[illegible] ಉಡುಪಿ ಬೋರ್ಡ ಹಾಯಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದ ಶ್ರೀ ಕೊರಡಕಲ್ಲ ಶ್ರೀನಿವಾಸರಾ[illegible] ೧೫ ನೇ ತಾರೀಕು ಕಟ್ಟಿನ ಜ್ವರದಿಂದ [illegible] ಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ. ಉಡುಪಿಯಲ್ಲಿಯ ವಿವಿಧ ಸಂಸ್ಥೆ[illegible] ಸಭೆಸೇರಿ ದುಃಖ ಪ್ರದರ್ಶಿಸಿದವು. [illegible] ಹಾಯಸ್ಕೂಲು ಇವರ ನಿಧನ ನಿಮಿತ್ತ ಮುಚ್ಚಲ್ಪಟ್ಟಿದ್ದಿತು.

ಕನ್ನಡ ಸಂಸ್ಥಾನ

ಕೆಲವು ನಿಜಾಮ ಸೈನಿಕರು ೧೨ ನೇ ತಾರೀಕು ತೊಂಡ್ಯಾಳ ಗ್ರಾಮದ ಮೇಲೆ ಏರಿ ಹೋಗಿ ಐದು ಜನ ಸ್ತ್ರೀಯರನ್ನು ಬಲಾತ್ಕಾರದಿಂದ ಎತ್ತಿಕೊಂಡು ಹೋಗಿದ್ದಾರೆಂದು ಪ್ರಸಿದ್ಧಸಲಾಗಿದೆ.

ಮಶ್ಯಾಳದ ಸುಮಾರು ೭೫ ಜನ [illegible] ರಜಾಕಾರ ಪುಂಡರು ಮಂಗಳೂರಿನ ಮೇಲೆ ದಾಳಿ ಮಾಡಿ ನಾಲ್ವರನ್ನು ಎಳೆದುಕೊಂಡು ಹೋದುದಲ್ಲದೆ ಬಂಡಿ ಮತ್ತು ಎತ್ತು[illegible] ತೆಗೆದುಕೊಂಡು ಹೋಗಿರುವರು.

ಗುಡೂರಲ್ಲಿ ಪ್ರತಿ ವರ್ಷ ಜರಗುವ ಚಂದಲಿಂಗನ ಜಾತ್ರೆಯಲ್ಲಿ ಭಾಗ ವ[illegible] ಬಂದ ಸಂಗಪ್ಪಾ ಅಂದಾನೆಪ್ಪಾ ಹೆರೂ[illegible] ಒಕ್ಕೂಟದವರೆಂದು ತಿಳಿದೊಡನೆ ರಜಾ[illegible] ಮತ್ತು ನಿಜಾಮ ಪೋಲೀಸರು ಅವ[illegible] ಹಿಡಿದು ತಂದು ಕೊಂದುಹಾಕಿದರು.

ಕಂದಗಲ್ಲ (ವಿಜಾಪುರ) ಮೇಲೆ [illegible] ಮಾಡಲಾಗುವದೆಂದು ರಜಾಕಾರರು [illegible] ನಿಜಾಮ ಪೋಲೀಸರು ಹೇಳಿ [illegible] ದರು. ಈಗಾಗಲೆ ಗಡಿಯ ಮೇಲೆ [illegible] ಮದ್ದುಗಳನ್ನು ರಜಾಕಾರರನ್ನು ತಂದಿ[illegible] ದೆಯೆಂದು ತಿಳಿಯುತ್ತದೆ.

ಶಿವಮೊಗ್ಗೆಯ ಬಿ. ಚಂದ್ರಶೇಖರ ಇವರು ಅಮೇರಿಕೆಯ ಮಿಚಿಗಾನ ಸ್ಟೇಟ ಕಾಲೇಜಿನ ಪಶು ಸ್ಪರ್ಧೆಯಲ್ಲಿ ಮೊದಲನೆ ಬ[illegible] ವನ್ನು ಪಡೆದಿರುವರು. ಕೋಳಿ ಪರಿ[illegible] ಗಾಗಿ ಈ ಬಹುಮಾನ ದೊರೆಯಿತು. [illegible] ಶೇಖರ ಇವರು ಮೈಸೂರು ಪಶು ವೈ[illegible] ಯಲ್ಲಿ ಕೆಲಸ ಮಾಡುತಿದ್ದು ಹೆಚ್ಚಿನ [illegible] ಭ್ಯಾಸಕ್ಕಾಗಿ ಅಮೇರಿಕೆಗೆ ಹೋ[illegible]

ಶಿವಮೊಗ್ಗೆ ಜಿಲ್ಹಾ ಬೋರ್ಡಿಗೆ [illegible] ಆರ್. ಬದರೀನಾರಾಯಣರು [illegible] ಆರಿಸಲ್ಪಟ್ಟಿದ್ದಾರೆ. ಇವರು [illegible] ಹುರಿಯಾಳುಗಳು. ಇವರ [illegible] ಶ್ರೀ ಪರಮೇಶ್ವರಪ್ಪನವರು [illegible] ಹೊಂದಿದರು.

ಶಿವಮೊಗ್ಗೆಯಲ್ಲಿ ಜೀವನ ಸಾಗಿಸು[illegible] ಕಠಿನವಾಗಿದೆ. ಅಕ್ಕಿ ರೂ. ಗೆ [illegible] ಆಗಿಷ್ಟು ಉರುವಲು ಗಾಡಿಯೊಂದಕ್ಕೆ [illegible] ೨೫ ರೂ. ಆಗಿದೆ. ರಾಗಿ ಜೋಳದ [illegible] ವಿಪರೀತವಾಗಿದೆ. ಹಳ್ಳಿಗಳಲ್ಲಿ [illegible]

ಗಾಂಧೀಜಿಯವರ ಜೀವನ ಚರಿತ್ರೆ

ನವಜೀವನ ವಿಶ್ವಸ್ತ ಮಂಡಲದವರು ಗಾಂಧಿಯವರ ಜೀವನ ಚರಿತ್ರೆಯನ್ನು ಬರೆಯುವ ಕೆಲಸ ಗೌರವಿಸಿದ್ದಾರೆ. ನಾನು ಸಂತೋಷದಿಂದ ಆ ಕರೆಗೆ ಓಗೊಟ್ಟಿದ್ದೇನೆ. (ಬೇರೊಂದು ಕಾಗದವನ್ನು ಬೇರೆ ಕಡೆ ಪ್ರಕಟಿಸಲಾಗಿದೆ.) ಗೌರವಕ್ಕಾಗಿ ನಾನು ಒಪ್ಪಿಕೊಂಡಿಲ್ಲ; ಅದೊಂದು ಪವಿತ್ರ ಕರ್ತವ್ಯ, ಹಕ್ಕು ಮತ್ತು ಪ್ರೀತಿಯ ಕೆಲಸ ಎಂದು ನಾನು ಆ ಕಾರ್ಯವ ವಹಿಸಿಕೊಂಡಿದ್ದೇನೆ. ಔಪಚಾರಿಕನಿಮಂತ್ರಣ ಅನವಶ್ಯಕವಿತ್ತು. ಅಂತರಾತ್ಮನ ತೃಪ್ತಿಗಾಗಿ ವೈಯಕ್ತಿಕ ಸ್ಮೃತಿಗಳನ್ನು ಬರೆವ ಕಾರ್ಯವನ್ನು ನಾನು ಕೈಕೊಂಡೇ ತೀರುತ್ತಿದ್ದೆ. ೨೫ ವರ್ಷ ಅತ್ಯಂತ ನಿಕಟ, ಅವಿಚ್ಛಿನ್ನ ಸಹವಾಸವು ಕೈಬಿಡಲಾರದಂಥ ಕರ್ತವ್ಯವನ್ನು ನನ್ನ ಮೇಲೆ ಹೊರಿಸಿದೆ. ಗಾಂಧಿಯವರ ನಿರೀಕ್ಷೆ ಕೂಡ ಹಾಗೆ ಇತ್ತು. ಮಹಾದೇವಭಾಯಿ ಬದುಕಿದ್ದಿದ್ದರೆ ಬಾಪುವಿನ ಜೀವನಚರಿತ್ರೆಯನ್ನು ಬರೆಯುವುದು ನಮ್ಮಿಬ್ಬರ ಸಂಯುಕ್ತ ಕಾರ್ಯವಾಗುತ್ತಿತ್ತು. ಅವರ ಕ್ರೂರ ಮತ್ತು ಅಕಾಲಿಕ ಸಾವು ಸಂಪೂರ್ಣವಾಗಿ ಆ ಭಾರವನ್ನು ನನ್ನ ಮೇಲೆ ಹೊರಿಸಿತಲ್ಲದೆ., ಅದರ ಮೇಲೆ ಅವರ ನೆನಹಿಗಾಗಿ ಏನಾದರೊಂದನ್ನು ಮಾಡುವ ಕರ್ತವ್ಯವನ್ನೂ ನನ್ನ ಮೇಲೆ ಹೇರಿತು. ಬಾಪು ಅವನ್ನು ತಿಳಿದಿದ್ದರು. ಅದುದರಿಂದ ನನ್ನ ಮೇಲಿನ ಭಾರವನ್ನು ಕಡಿಮೆ ಮಾಡಲು ತಮ್ಮ ಸಹಜವಾದ ರೀತಿಯಲ್ಲಿ ಒಮ್ಮೆ ಭಾವೀ ಕಾರ್ಯದಲ್ಲಿ ತಾವು ಸಹಾಯ ನೀಡುವುದಾಗಿ ಒಪ್ಪಿಗೆ ಕೊಟ್ಟಿದ್ದರು. ನಾನು ಮುಖ್ಯ ಸಂಗತಿಗಳ ಕರಡನ್ನು ಐತಿಹಾಸಿಕ ಕ್ರಮದಲ್ಲಿ ತಯಾರಿಸಿ ಅವರ ಮುಂದಿಡುವುದು ಮತ್ತು ಅವರು ನನಗೆ ಬೇಕಾದಾಗಲೆಲ್ಲ ಅವುಗಳ ಬಗ್ಗೆ ವ್ಯಾಖ್ಯೆ, ವಿವರಣ, ತಿಳಿವಳಿಕೆಗಳನ್ನು ಕೊಡುವುದು ಎಂಬುದು ನಮ್ಮ ಯೋಜನೆಯಾಗಿತ್ತು. ಆದರೆ ಅದು ಆಗದಾಯಿತು. ಏಕೆಂದರೆ ಮೊದಲು ಕಸ್ತೂರಿಬಾಯಿಯವರ ಕಾಹಿಲೆ ಅಡ್ಡ ಬಂದಿತು; ಆ ಬಳಿಕ ಗಾಂಧಿಯವರಿಗೇ ಸ್ವತಃ ರೋಗ ತಲೆದೋರಿತು. ಅದು ನಮ್ಮ ಮುಕ್ತಿಯಲ್ಲಿ ಕೊನೆಗೊಂಡಿತು. ನಾವು ಕಾರಾಗೃಹದಿಂದ ಮುಕ್ತರಾದ ನಂತರ ಘಟನಾನುಕ್ರಮವಾಗಿ ಸಂಭವಿಸಿದ ಸಂಗತಿಗಳು ಯೋಜನೆಯನ್ನು ಪುನಃ ಕೈಗೆ ತೆಗೆದುಕೊಳ್ಳುವುದಕ್ಕೆ ವಿಘ್ನಗಳಾದವು. ಕಡೆಯಲ್ಲಿ ನಾನು ಅವರೊಡನೆ ದಿಲ್ಲಿಯಲ್ಲಿ ಉಳಿವ ಕಾಲದವರೆಗೂ ಅದು ಹಾಗೇ ಉಳಿಯಿತು. ಆದರೆ ಅವರ ಮರಣಕ್ಕೆ ಕೆಲವು ದಿನಗಳ ಹಿಂದೆ ವಿಚಿತ್ರ ಸಂದರ್ಭವೊಂದು ಅವರ ನೆನಹಿನ ಮೊದಲನೆ ಅಧ್ಯಾಯವನ್ನು ನನಗೆ ಬರೆಯ ಹಚ್ಚಿತು. ಅದನ್ನು ಅವರೊಡನೆ ಚರ್ಚಿಸುವ ಅತ್ಯುತ್ತಮವಾದ ಸಮಾಧಾನಕರ ಸನ್ನಿವೇಶವೂ ನನಗೆ ಒದಗಿ ಬಂದಿತು. ಆದರೆ ಆ ಅಪೂರ್ಣ ಲೇಖನವನ್ನು ಒಮ್ಮೆ ಓದಿ ಮುಗಿಸುವುದರೊಳಗೇ ಅವರನ್ನು ಮೃತ್ಯುಪಾಶ ಕೊಂಡೊಯ್ದಿತು.

ಉದ್ದೇಶ ಪೂರ್ವಕ ಇಲ್ಲದೆ ಹಾಗೇ ಪ್ರಾರಂಭಿಸಲ್ಪಟ್ಟ ಆ ಕಾರ್ಯವು ನಿಶ್ಚಿಂತ ಭಾವದಲ್ಲಿ ಕೈಕೊಂಡದ್ದಾಗಿತ್ತು. ಈಗ ಒತ್ತುವ ದುಃಖ ಮತ್ತು ವಿರಹಗಳ ಭಾರದ ಅಡಿಯಲ್ಲಿ ಸಹಕಾರ ದೊರೆಯುವುದೆಂದು ಬಯಸಿದ ಅವರ ದಿವಂಗಮನದಿಂದ ಅವು ಮತ್ತೂ ಹೆಚ್ಚುತ್ತಿರುವಾಗ ಅದನ್ನು ಮುಂದುವರಿಸಿ ಮುಗಿಸಬೇಕಾಗಿ ಬಂದಿದೆ. ನನ್ನ ಶಕ್ತಿಯ ಇತಿಮಿತಿಯ ಅರಿವು ಕೊಡುತ್ತಿರುವ ದುಃಸ್ಸಹ ವೇದನೆಯಲ್ಲೇ ನಾನು ಆ ಕಾರ್ಯವನ್ನು ಮಾಡಲು ಹೊರಟಿದ್ದೇನೆ. ಆ ಕೆಲಸಕ್ಕೆ ಅಸಾಧಾರಣವಾದ ಶ್ರಮ, ಭಕ್ತಿ, ವಿಚಾರ ಮತ್ತು ಸಂಶೋಧನೆಗಳು ಅಗತ್ಯ. ಬರೆಯಲು ನಿಶ್ಚಿತವಾಗಿ ಕುಳಿತುಕೊಳ್ಳುವ ಮುನ್ನ ಹೆಚ್ಚಿನ ಪ್ರಾಥಮಿಕ ವಿಷಯ ಸಂಗ್ರಹ ಕಾರ್ಯವನ್ನು ಮಾಡಬೇಕಾಗಿದೆ. ಬಹಳ ಮಂದಿಯ ಸ್ವತಸ್ಸ್ಫೂರ್ತ ಮತ್ತು ಅನುಕೂಲ ಬುದ್ಧಿಯ ಸಹಕಾರವು ಅಗತ್ಯ. ಬೇಕಾದಷ್ಟು ಪ್ರಮಾಣದಲ್ಲಿ ಆ ಸಹಕಾರ ದೊರೆಯದಿದ್ದಲ್ಲಿ ನನಗೆ ಅದನ್ನು ಮಾಡಬೇಕಾದ ರೀತಿಯಲ್ಲಿ ಮಾಡಲು ಸಾಧ್ಯವಾಗಲಾರದೆಂಬುದನ್ನು ನಾನು ಬಲ್ಲೆ. ಗಾಂಧಿಯವರದು ಒಂದು ವಿಯುಕ್ತ ಜೀವನವಲ್ಲ. ತಮ್ಮ ವೈಯಕ್ತಿಕ ಉದಾಹರಣೆಯಿಂದಲೂ ಉಪದೇಶದಿಂದಲೂ ರೂಪಿಸಿದ ಅಸಂಖ್ಯಾತ ಜೀವಿಗಳಿಗಾಗಿ ಅವರೊಡನೆ ಬೆರೆತು ಅವರು ಜೀವಿಸಿದರು. ಒಬ್ಬನ ಜೀವನದ ನಿಜವಾದ ವ್ಯಾಖ್ಯೆ ಮತ್ತು ವಿವರಣವನ್ನು ಅವನ ಸುತ್ತಲಿನ ಸನ್ನಿವೇಶ ಮತ್ತು (ವಿಶೇಷತಃ ಅನ್ಯರ ವಿಚಾರ ಮತ್ತು ಜೀವನಗಳ ಮೇಲೆ ಅದ ಪರಿಣಾಮದಲ್ಲಿ ಕಾಣಬೇಕು ಎಂಬುದು ಅವರಿಗೆ ಪ್ರಿಯವಾದ ಸಿದ್ಧಾಂತವಾಗಿತ್ತು. ಅವರೊಡನೆ ಸಂಬಂಧ ಬೆಳೆಸಿದ, ಪತ್ರ ವ್ಯವಹಾರ ಮಾಡಿದ ಎಲ್ಲ ಮಾನ್ಯರೂ ತಂತಮ್ಮ ಸ್ಮೃತಿಗಳನ್ನು ಬರೆದು ರಜಿಸ್ಟರ್ಡ್ ಕವರಿನಲ್ಲಿ ನವಜೀವನ ಕಾರ್ಯಾಲಯ, ಟಪ್ಪಾಲು ಕಟ್ಟೆ ನಂಬರ್ ೧೦೫, ಅಹಮದಾಬಾದ್ ಎಂಬ ವಿಳಾಸಕ್ಕೆ ಕವರಿನ ಎಡಗಡೆಯ ಮೇಲ್ಮೂಲೆಯಲ್ಲಿ "ಜೀವನ ಚರಿತ್ರೆ" ಎಂದು ಬರೆದು ಕಳುಹಿದರೆ ನನ್ನ ಕಾರ್ಯಕ್ಕೆ ಬಹಳ ಸಹಾಯ ಮಾಡಿದಂತಾಗುತ್ತಿತ್ತು. ನಕಲಿನ ಜೊತೆಗೆ ಗಾಂಧಿಯವರು ಬರೆದ ಕಾಗದಗಳ ಮೂಲ ಪ್ರತಿಗಳೂ ಇರಬೇಕು. ನವಜೀವನ ಕಾರ್ಯಾಲಯದಲ್ಲಿ ಅವುಗಳನ್ನು ಸುರಕ್ಷಿತವಾಗಿ ಇಡಲಾಗುವುದಲ್ಲದೆ, ನಕಲನ್ನು ಮೂಲದೊಡನೆ ಹೋಲಿಸಿ ಸರಿ ನೋಡಿದ ಕೂಡಲೆ ಸುರಕ್ಷಿತವಾಗಿ ಇನ್ಶ್ಯೂರ್ಡ್ ಕವರಿನಲ್ಲಿ ಕಳುಹಿದವರಿಗೆ ತಿರುಗಿ ಕಳುಹಲಾಗುವುದು. ಯಾವ ಭಾಷೆಯಲ್ಲಿ ಬೇಕಾದರೂ ನೆನಹುಗಳನ್ನು ಬರೆಯಬಹುದು; ಆದರೆ ಅದನ್ನು ಕಳುಹುವ ಮುನ್ನ ಅವರ ನಕಲೊಂದನ್ನು ಗ್ರಂಥಕರ್ತನು ಇಟ್ಟುಕೊಳ್ಳುವ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಕಳಿಸಿದವರಲ್ಲಿ ಯಾರಾದರೂ ತಮ್ಮ ಸ್ಮೃತಿ ಇಲ್ಲವೆ ಪತ್ರವ್ಯವಹಾರವನ್ನು ಅರ್ಧ ಇಲ್ಲವೆ ಪೂರ್ಣವಾಗಿ ಗುಪ್ತವಾಗಿಡಬೇಕೆಂದು ಕೋರಿದರೆ ಯಾವ ಅಡ್ಡಿಯೂ ಇಲ್ಲದೆ ಆ ಕೋರಿಕೆಯನ್ನು ಮನ್ನಿಸಲಾಗುವುದು.

ಸಂಶೋಧಕರಾಗಿ, ಹಿಂದಿ, ಗುಜರಾತಿ ಇಲ್ಲವೆ ಇಂಗ್ಲೀಷು ಶೀಘ್ರ ಲಿಪಿಕಾರ ಮತ್ತು ಟೈಪಿಸ್ಟರಾಗಿ ಅಥವಾ ಹಿಂದಿ, ಗುಜರಾಥಿಗಳಿಂದ ಕೈಯಿಂದ ನಕಲು ತೆಗೆವವರಾಗಿ ಕಾರ್ಯಾಲಯದ ಕೆಲಸದಲ್ಲಿ ನೆರವೀಯಲು ಯಾರಾದರೂ ಮಿತ್ರರು ಬರುವವರಿದ್ದರೆ ಅವರು ತಮ್ಮ ಕರಾರು ಮತ್ತು ತಾವೀಯ ಬಯಸುವ, ತಮಗೆ ಈಯುವ ಅರ್ಹತೆಯಿರುವ ನೆರವಿನ ಬಗೆ—ಇವನ್ನು ನನಗೆ ತಿಳಿಯಪಡಿಸಬೇಕು.

ಇಷ್ಟರ ಮೇಲೆ ಇನ್ನೊಂದರಲ್ಲಿ ಜನರು ನನಗೆ ಸಹಾಯ ಕೊಡಬಹುದು. ೧೯೪೨ ರ ಚಲೇಜಾವ ಚಳವಳದಲ್ಲಿ ಸರಕಾರವು ಯಂಗ್ ಇಂಡಿಯ, ನವಜೀವನ ಮತ್ತು ಹರಿಜನ ಸಾಪ್ತಾಹಿಕಗಳ ಕಟ್ಟುಗಳನ್ನು ತೆಗೆದೊಯ್ದು ಹಾಳು ಮಾಡಿದ್ದನ್ನು ಎಲ್ಲರೂ ಬಲ್ಲರು. ನವಜೀವನ ಕಾರ್ಯಾಲಯವು ಕ್ರಮಶಃ ಗಾಂಧಿಯವರ ಪ್ರಕಟಿತ ಮತ್ತು ಅಪ್ರಕಟಿತ ಬರಹಗಳೆಲ್ಲವನ್ನೂ ಪ್ರಕಾಶಿಸಲು ಆತುರವುಳ್ಳದ್ದಾಗಿದೆ. ತಮ್ಮಲ್ಲಿ ಗಾಂಧಿಯವರ ಸಾಪ್ತಾಹಿಕಗಳು ಸಂಪೂರ್ಣ ಇಲ್ಲವೆ ಅಪೂರ್ಣವಾಗಿ ಇದ್ದರೆ, ಅವರ ಬಗ್ಗೆ ಅಲಭ್ಯವಾದ ಲೇಖನಗಳಿದ್ದರೆ ಅವನ್ನು ನವಜೀವನ ಕಾರ್ಯಾಲಯಕ್ಕೆ ದಾನವಾಗಿಯಾಗಲಿ ಮತ್ತಾವ ಕರಾರಿನ ಮೇಲಾಗಲಿ ಕಳಿಸಿದರೆ ಇಲ್ಲಿಯ ಕಟ್ಟುಗಳನ್ನು ಪೂರ್ತಿಗೊಳಿಸಿ ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮಾಡಲು ಸಾಧ್ಯವಾದೀತು. ನವಜೀವನ ಕಾರ್ಯಾಲಯದ ವ್ಯವಸ್ಥಾಪಕರು ಅಗತ್ಯವಿರುವ ವಿಷಯಂಗಳನ್ನು ಕಾಲಕಾಲಕ್ಕೆ ಪ್ರಕಟಿಸುವರು.

ಡೆಹರಾಡೂನ್ —ಪ್ಯಾರೇಲಾಲ

೨-೬-೪೮

ಪ್ಯಾರೇಲಾಲರಿಗೆ ವಿಶ್ವಸ್ತರ ಕಾಗದ

ಪ್ರಿಯ ಪ್ಯಾರೇಲಾಲಜೀ,

ನವಜೀವನ ವಿಶ್ವಸ್ತ ಸಮಿತಿಯ ವಿಶ್ವಸ್ತರು ಬಾಪುವಿನ ಒಂದು ಅಧಿಕೃತ ಜೀವನ ಚರಿತ್ರೆಯನ್ನು ಪ್ರಸಿದ್ಧಿಸಬೇಕೆಂದಿರುವುದು ನಿಮಗೆ ಗೊತ್ತಿರಬಹುದು. ಅಲ್ಲದೆ, ಅವರ ದಫ್ತರಗಳನ್ನೂ ಪ್ರಕಟಿತ ಮತ್ತು ಅಪ್ರಕಟಿತ ಹಸ್ತಪ್ರತಿಗಳನ್ನೂ ಖಾಸಗಿ ಪತ್ರವ್ಯವಹಾರ ಮುಂತಾದವನ್ನೂ ಬೆಳಕಿಗೆ ತರುವ ಆಲೋಚನೆ ಮಾಡಲಾಗಿದೆ. ಈ ಕೆಲಸವನ್ನು ಮಾಡಲು ನೀವೇ ಅತ್ಯಂತ ಅರ್ಹರೆಂದು ವಿಶ್ವಸ್ತರ ಭಾವನೆ- ನಿಮಗೆ ಯೋಗ್ಯವೆನ್ನಿಸಿದಂತೆ ಕೆಲಸ ಸಾಗಿಸಲು ನೀವು ಸ್ವತಂತ್ರರಿರುವಿರಿ ಮತ್ತು ಕೆಲಸಕ್ಕೆ ಅವಶ್ಯಕವೆನಿಸುವ ಎಲ್ಲ ಸೌಕರ್ಯಗಳನ್ನೂ ನಿಮಗೆ ಸಮಿತಿಯು ಕೊಡುವುದು. ನಿಮ್ಮ ಉತ್ತರವನ್ನು ದಯೆಯಿಟ್ಟು ಆದಷ್ಟು ಬೇಗ ಕೊಡುವಿರಾ?

ನವಜೀವನ ವಿಶ್ವಸ್ತ ಸಮಿತಿ, ಅಹಮದಾಬಾದ } ನಿಮ್ಮ ಜೀವಣಜಿ ದೇಸಾಯಿ

[illegible].೫.೪೮ ವ್ಯವಸ್ಥಾಪಕ

ನಿಜಾಮನಾಟಕದ ಮುಕ್ತಾಯ

ಹಿಂದೀ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ೧೬ರಲ್ಲಿ ಹಿಂದುಸ್ತಾನದ "ತೆರೆದ ಬಾಗಿಲ" ಧೋರಣೆಯನ್ನು ಹೊಸದಿಲ್ಲಿಯ ಸುದ್ದಿಗಾರರ ಸಭೆಯಲ್ಲಿ ಸಾರಿದರು. ಅವರ ಖಂಡಿತೋಕ್ತಿ ಕೆಳಗಿನಂತಿದೆ:

"ನಿಜಾಮರು ಈ ಕರಾರುಗಳನ್ನು ಒಪ್ಪದುದರಿಂದ ನನಗೆ ಎಳ್ಳಷ್ಟೂ ಚಿಂತೆಯಾಗಿಲ್ಲ; ಅಥವಾ ನನ್ನ ಮನಸ್ಸು ಉದ್ವಿಗ್ನವಾಗಿಲ್ಲ; ನಮ್ಮ ಪ್ರಯತ್ನಕ್ಕೆ ಯಶಸ್ಸು ಸಿಕ್ಕಲಾರದೆಂದು ಈಗ ಸಹ ನಾನು ಹೇಳಲು ಸಿದ್ಧನಿಲ್ಲ. ಆದರೆ ಹೈದರಾಬಾದಿನ ಪ್ರತಿನಿಧಿಗಳೊಡನೆ ಮಾತ್ರ ಇನ್ನು ಚರ್ಚೆ ನಡೆಸುವುದಿಲ್ಲ. ಅವರು ಈಗ ಸೂಚಿಸಿರುವ ಕರಾರುಗಳಿಗೆ ಅಂಕಿತ ಹಾಕಲೊಪ್ಪಿದರೆ ಅವರಿಗೆ ಸ್ವಾಗತವಿದೆ.

"ಹಿಂದುಸ್ತಾನವು ಹೈದರಾಬಾದಿನ ಮುಸಲ್ಮಾನರನ್ನು ನಾಮಶೇಷ ಮಾಡಲು ಹೊಂಚು ಹಾಕಿದೆಯೆಂದು ಇತ್ತಿಹಾದ ನಡೆಸಿದ ಪ್ರಚಾರವು ಅಸಂಬದ್ಧವಾದುದು. ಹೈದರಾಬಾದು ಹಿಂದುಸ್ತಾನದಲ್ಲಿ ಸೇರಿದರೆ ಹಿಂದೀ ಒಕ್ಕೂಟದಲ್ಲಿ ಸಮ ಪಾಲುಗಾರವಾಗುವುದು. ಹೈದರಾಬಾದಿನ ಮುಸಲ್ಮಾನರಿಗೆ ಇತರರಂತೆ ಹಕ್ಕು ದೊರೆಯುವುವು. ಹೀಗಾಗದೆ ಘರ್ಷಣವುಂಟಾಗುವ ಪರಿಸ್ಥಿತಿಯುಂಟಾದರೆ, ಅದರ ಪರಿಣಾಮ ಗೊತ್ತೇ ಇದೆ. ಅದು ಒಂದೇ ಇದ್ದು ಇಂದಿನ ಹೈದರಾಬಾದ್ ಸರಕಾರದ ಮನಸ್ಸಿಗೆ ಅದು ಬರಲಾರದು; ಮತ್ತು ಈಗ ಸೂಚಿಸುವ ಕರಾರುಗಳಿಗೂ ಅದಕ್ಕೂ ಯಾವ ಸಂಬಂಧವೂ ಉಳಿಯಲಾರದು. ಈ ಸಮಸ್ಯೆ ಶಾಂತ ರೀತಿಯಿಂದ ಬಗೆಹರಿಯುವ ಸಂಭವ ಇನ್ನೂ ಇದ್ದರೆ ಅದನ್ನು ನಾವು ಒಪ್ಪುವೆವು."

ಹೀಗೆಂದು ಪಂಡಿತರು ಸುದ್ದಿಗಾರರಿಗೆ ಒಪ್ಪಂದದ ಕರಡನ್ನೂ ನಿಜಾಮರ ಫರ್ಮಾನನ್ನೂ ಕೊಟ್ಟು, "ಒಪ್ಪಂದದ ಮಾತುಕತೆಗಳು ಮುರಿದವೆಂದು ಅವರು ಹೇಳಿಲ್ಲ. ಮಾತುಕತೆ ಮುಂದುವರಿಸುವ ಇಚ್ಛೆಯಿದೆಯೆಂದು ತಂತಿ ಕಳಿಸಿದ್ದಾರೆ. ಆದರೆ ಈಗಿನ ಕರಾರುಗಳನ್ನು ಅವರು ಒಪ್ಪಿರುವದಿಲ್ಲ" ಎಂದು, ಹಿಂದುಸ್ತಾನವಿನ್ನು ತನ್ನ ನಿರ್ಣಯವನ್ನು ಬದಲಿಸಿ ಹೊಸ ಕರಾರನ್ನು ಸೂಚಿಸುವುದಿಲ್ಲ, ಇದೇ ಕಡೆಯ ಸೂಚನೆ; ನಿಜಾಮರು ಯಾವಾಗ ಬೇಕಾದರೂ ಈ ಸೂಚನೆಯಂತೆ ಒಪ್ಪಂದ ಮಾಡಿಕೊಳ್ಳಬಹುದು. ಈಗಿನಿಂದಲೇ ಹಿಂದೀ ಸರಕಾರವು ಆರ್ಥಿಕ ಮತ್ತು ಸಮರ ನೈತಿಕ ಮುಂಜಾಗ್ರತೆಯೆಂದು ಹೈದರಾಬಾದಿಗೆ ಹೋಗುವ ಸರಕುಗಳನ್ನು ತಡೆಹಿಡಿಯುವುದು. ಹೀಗೆ ಮಾಡಲು ನಿಜಾಮರ ದೂತರಾದ ರಜಾಕಾರರ ಪುಂಡತನ, ಅವರ ಯುದ್ಧಸಿದ್ಧತೆಯ ಪ್ರಯತ್ನ ಮತ್ತು ಸುತ್ತಲಿನ ಒಕ್ಕೂಟ ಪ್ರಜೆಗಳ ಮೇಲೆ ಅವರು ಮಾಡುತ್ತಿರುವ ದಾಳಿ ಇವುಗಳೇ ಕಾರಣಗಳು ಎಂದರು.

ಕೊನೆಯದಾಗಿ ಪಂಡಿತರು, ಹೈದರಾಬಾದಿನ ಪ್ರಜೆಗಳು ಓಡಿಹೋಗುವುದನ್ನು ನಿಲ್ಲಿಸಬೇಕೆಂದು ವಿನಂತಿಸಿಕೊಂಡರು. ಇಷ್ಟರ ಮೇಲೆ ನಿಜಾಮ ದೊರೆಗಳು ಎತ್ತ ಸಾಗುವರೆಂಬುದನ್ನು ಕಾದು ನೋಡಬೇಕಾಗಿದೆ. ಅಂತೂ ಇಲ್ಲಿಗೆ ನಿಜಾಮರ ಸಂಧಾನದ ನಾಟಕಕ್ಕೆ ಕೊನೆಯದಾಗಿ ಅಂಕಪರದೆಯನ್ನು ಎಳೆದುದಾಯಿತು.

ಒಡಂಬಡಿಕೆ ಮತ್ತು ಫರ್ಮಾನಿನ ವಿವರಗಳು ಇಂತಿವೆ: ಒಡಂಬಡಿಕೆಯಲ್ಲಿ—

೧) ಹೈದರಾಬಾದು ಹಿಂದುಸ್ತಾನ ಮಾಡಿದಂಥ ಕಾಯಿದೆಗಳನ್ನು ಮಾಡತಕ್ಕದ್ದು.

೨) ನಿಜಾಮ ಸರಕಾರ ಸಕಾಲದಲ್ಲಿ ಆ ಕಾಯದೆಗಳನ್ನು ಮಾಡದಿದ್ದಲ್ಲಿ ನಿಜಾಮರು ಸ್ವತಃ ತಮ್ಮ ಅಧಿಕಾರ ಬಲದಿಂದ ಅವನ್ನು ಕೂಡಲೇ ಮಾಡಬೇಕು.

೪) ನಿಜಾಮರು ಒಟ್ಟು ೨೦ ಸಾವಿರಕ್ಕಿಂತ ಹೆಚ್ಚು ಸೈನ್ಯವನ್ನು ಇಟ್ಟುಕೊಳ್ಳಕೂಡದು.

೪) ಉತ್ಸವದ ಮತ್ತು ಅರಮನೆಯ ಕಾವಲುಗಾರರ ಹೊರತು ಮಿಕ್ಕ ಅವೈಧಿಕ ಸೈನ್ಯವನ್ನು ೮ ಸಾವಿರಕ್ಕೆ ಮೀರಗೊಡಬಾರದು.

(೫) ಸಂಸ್ಥಾನದಲ್ಲಿ ಹಿಂದೀ ಸರಕಾರವು ತನ್ನ ಸೈನ್ಯವನ್ನು ಇಡುವುದಿಲ್ಲ. ಆದರೆ ಗಂಭೀರ ಪ್ರಸಂಗ ಬಂದಾಗ ಹಿಂದೀ ಸರಕಾರವು ಅಲ್ಲಿ ಸೈನ್ಯವನ್ನಿಡಲು ಅಪೇಕ್ಷಿಸಿದರೆ ೧೯೩೫ ನೆಯ ಕಾನೂನಿನ ೧೦೨ ನೆಯ ಪರಿಚ್ಛೇದದ ಪ್ರಕಾರ ಹಿಂದುಸ್ತಾನದಲ್ಲಿ ಗಂಭೀರ ಪರಿಸ್ಥಿತಿಯನ್ನು ಸಾರಿರುವಷ್ಟು ಕಾಲ ಸೈನ್ಯವನ್ನು ನಿಜಾಮರು ತಮ್ಮ ಸಂಸ್ಥಾನದಲ್ಲಿ ಇಡಗೊಡಬೇಕು.

(೬) ಮೇಲಿನ ಪ್ರಸಂಗದಲ್ಲಿ ಹಿಂದೀ ಸರಕಾರವು ಹೈದರಾಬಾದ ಸಂಸ್ಥಾನದಲ್ಲಿ ಸೈನ್ಯವನ್ನಿಟ್ಟರೆ ಆ ಸೈನ್ಯಕ್ಕೆ ಹಿಂದೀ ಸೈನ್ಯದ ಕಾಯದೆ ಅನ್ವಯಿಸುವುದು.

(೭) ಹೈದರಾಬಾದಿನ ವಿದೇಶ ಸಂಬಂಧದ ವ್ಯವಹಾರವನ್ನು ಹಿಂದೀ ಸರಕಾರವೇ ನಡೆಸ್ಸುವುದು. ಆದರೆ ವಿದೇಶದಲ್ಲಿ ತನ್ನ ವಾಣಿಜ್ಯ ಪ್ರತಿನಿಧಿಯನ್ನಿಡಲು ಅದಕ್ಕೆ ಸ್ವಾತಂತ್ರ್ಯವಿದೆ. ಈ ಪ್ರತಿನಿಧಿ ಹಿಂದೀ ಸರಕಾರದ ಮೇಲ್ವಿಚಾರಣೆಗೊಳಪಟ್ಟು ಅದರೊಡನೆ ಸಹಕರಿಸಿ ನಡೆದುಕೊಳ್ಳತಕ್ಕದ್ದು.

(೮) ಮೇಲಿನ ಪರಿಚ್ಛೇದಗಳನ್ನು ಅನುಲಕ್ಷಿಸಿ ಉಭಯ ಸಾಮಾನ್ಯ ವಿಷಯಗಳು ಸದ್ಯದ ಒಡಂಬಡಿಕೆ ಮತ್ತು ಆಡಳಿತಗಳ ವ್ಯವಸ್ಥೆಯ ಪ್ರಕಾರ ನಡೆಯತಕ್ಕವು. ಉಭಯ ಪಕ್ಷಗಳು ಇದನ್ನು ಈ ಕೂಡಲೆ ಕಾರ್ಯಕಾರಿ ಮಾಡಬೇಕು. ಯಥಾಸ್ಥಿತಿ ಒಪ್ಪಂದದಲ್ಲಿ ಹೇಳಿದ ಪ್ರಕಾರ ಸದ್ಯದ ಒಡಂಬಡಿಕೆ ಮತ್ತು ಆಡಳಿತದ ವ್ಯವಸ್ಥೆಗಳು ೧೯೪೮ ರ ನವೆಂಬರ ೨೯ ಕ್ಕೆ ಕೊನೆಗೊಳ್ಳಬಾರದು.

ಇದರ ಮೇಲೆ ಪರಿಶಿಷ್ಟದಲ್ಲಿ ಸಂರಕ್ಷಣ, ವಿದೇಶಸಂಬಂಧ ಮತ್ತು ಸಂಪರ್ಕಗಳ ಬಗ್ಗೆ ಪಾಲಿಸಬೇಕಾದ ಸಾಮಾನ್ಯ ಕರಾರುಗಳನ್ನು ಕೊಡಲಾಗಿದೆ.

ಫರ್ಮಾನಿನಲ್ಲಿ—

"ಹಿಂದೀ ಸರಕಾರದ ಅಭಿಪ್ರಾಯವನ್ನು ನನಗೆ ಸ್ಪಷ್ಟಪಡಿಸಲಾಗಿದೆ. ನನ್ನ ಮತ ಅದಕ್ಕೆ ಸುವಿದಿತವಿದೆ. ಹೈದರಾಬಾದು ಹಿಂದುಸ್ತಾನವನ್ನು ಹೊಗಬೇಕೋ ಬೇಡವೋ? ಎಂಬ ಬಗ್ಗೆ ನಾನು ಪ್ರಜೆಗಳ ಅಭಿಪ್ರಾಯವನ್ನು ಕೇಳಲು ನಿರ್ಧರಿಸಿದ್ದೇನೆ. ಅದುದರಿಂದ ಪ್ರೌಢಮತದಾನ ಪದ್ಧತಿಯಂತೆ ನಾನು ಸಂಸ್ಥಾನದಲ್ಲಿ ಸಾರ್ವತ್ರಿಕ ಮತಗಣನೆಯನ್ನು ಏರ್ಪಡಿಸುವೆನು. ಅದು ನಿಷ್ಪಕ್ಷಪಾತ ಮತ್ತು ಸ್ವತಂತ್ರ ಮೇಲ್ವಿಚಾರಣೆಯ ಕೆಳಗೆ ನಡೆವಂತೆ ವ್ಯವಸ್ಥೆ ಮಾಡುವೆನು.

"ಹೈದರಾಬಾದಿನಲ್ಲಿ ಹೊಣೆಗಾರ ಸರಕಾರವನ್ನು ಸ್ಥಾಪಿಸುವುದು ನನ್ನ ಉದ್ದೇಶವಿದೆ. ಅದಕ್ಕಾಗಿ ನಾನು ೧೯೪೯ ರ ಮೊದಲ ಭಾಗದಲ್ಲಿ ಘಟನಾಸಮಿತಿಯನ್ನು ರಚಿಸುವೆನು. ಹೈದರಾಬಾದು— ಹಿಂದುಸ್ತಾನಗಳ ನಡುವೆ ನಡುಗಾಲದ ಸಂಬಂಧದ ಬಗ್ಗೆ ಆದ ಒಡಂಬಡಿಕೆಯ ಪರಿಣಾಮವಾಗಿ ಮತ್ತು ಸಾರ್ವತ್ರಿಕ ಮತಗಣನೆಯಾಗುವ ವರೆಗಿನ ಮಧ್ಯಕಾಲದಲ್ಲಿ ನನ್ನ ಮಂತ್ರಿಮಂಡಲ ಪುನರ್ಘಟಿತವಾಗತಕ್ಕದ್ದು. ಯಥಾಸ್ಥಿತಿ ಒಪ್ಪಂದದಲ್ಲಿ ಹಲಕೆಲವು ಬದಲಾವಣೆಗಳನ್ನು ಮಾಡುವ ಹೊಸ ಒಪ್ಪಂದಕ್ಕೆ ನನ್ನ ಮುಖ್ಯ ಮಂತ್ರಿಗಳು ಸಹಿ ಹಾಕಿದ್ದಾರೆ."

ಸರಿಯಾದ ಉಪಾಯ

(೯ ನೆ ಪುಟದಿಂದ)

ಹೆಚ್ಚು ಆಸ್ಥೆಯಿಂದ ನಿರೀಕ್ಷಿಸಬಲ್ಲದು. ಆಗ ಮಾತ್ರ ಈ ಜೀವಾಳದ ವಿಷಯದ ಬಗ್ಗೆ ನಮಗೆ ಸರಿಯಾದ ಕಲ್ಪನೆ ಬರುವದು.

—ಜೆ. ಸಿ. ಕುಮಾರಪ್ಪ

[ಶ್ರೀ ಕುಮಾರಪ್ಪನವರಿಗೆ ಒಂದು ವಿಷಯ ಅಂತರಂಗಕ್ಕೆ ತಾಗಿದಾಗಲೆಲ್ಲ ಒಳ್ಳೆ ತೀಕ್ಷ್ಣವಾಗಿಯೇ ಬರೆಯುತ್ತಾರೆ. ಶೈಲಿಯು ದಿನದ ರೂಢಿಯಾಗಿ ಹೋದಾಗ ಪರಿಣಾಮ ಮಾಡುವ ಅದರ ಪ್ರಭಾವವು ಉಡುಗಿ ಹೋಗುವದು. ಅಲ್ಲದೆ ಕೃತಿಗಿಳಿಯದ ಟೀಕೆಗೆ ಬೆಲೆಯೂ ಇಲ್ಲದೆ ಹೋಗುವದು. ಮೇಲ್ಕಾಣಿಸಿದ ಲೇಖದಲ್ಲಿನ ಟೀಕೆಯು ಯಾರನ್ನು ಕುರಿತಾಗಿದೆಯೊ ಅವರು ಅದನ್ನು ದುರ್ಲಕ್ಷಿಸುವದಿಲ್ಲವೆಂದು ನಾನು ತಿಳಿದಿದ್ದೇನೆ. ಕೃಷಿ—ಅರ್ಥಶಾಸ್ತ್ರಗಳು ಕೃಷಿ ಶಾಖೆಯ ಅಸ್ತಿತ್ವವು ಅನಿವಾರ್ಯವೆಂದು ಅರಿತವರಾಗಿದ್ದಾರೆ. ಔದ್ಯೋಗಿಕ ಅರ್ಥಶಾಸ್ತ್ರವೆಂಬುದು ತೀರ ವಿಭಿನ್ನವಾಗಿದೆ ಎಂಬುದನ್ನು ಯಾರೂ ಅರಿತಿಲ್ಲವಲಾ ಎಂದು ಸರ ಮಣಿಲಾಲ ನಾನಾವಟಿಯಂತಹರೂ ವಿಷಾದಿಸುತ್ತಾರೆ.

ಕೃಷಿಗೆ ಸಂಬಂಧಪಟ್ಟ ಅರ್ಥಶಾಸ್ತ್ರವೇ ದೇಶದ ಬಹುಸಂಖ್ಯಾಕರ ಕಲ್ಯಾಣಕ್ಕೆ ಅನ್ವಯಿಸುವಂತಹದು. ಔದ್ಯೋಗಿಕ ಕಾಯಕಷ್ಟವೂ ದುಡಿಮೆಯೂ ಪಟ್ಟಣಗಳಿಗೆ ಮಾತ್ರ ಸಂಬಂಧಪಟ್ಟದ್ದು ಎಂದೇ ಅದು ಪಕ್ಷ ಪಕ್ಷಗಳ ರಾಜಕಾರಣಕ್ಕೆ ಗುರಿಯಾಗಿ ಒಂದೊಂದು ವಿಧವಾಗಿ ಅದು ರೂಪಗೊಂಡಿತಷ್ಟೇ ಅಲ್ಲ; ನಮ್ಮ ಧ್ಯೇಯ ಧೋರಣಗಳನ್ನು ರೂಪಿಸುವಲ್ಲಿ ಕೂಡ ಅದಕ್ಕೇ ಮೇಲ್ಗೈಯಾಯ್ತು ಮತ್ತು ಶ್ರೀ ಕುಮಾರಪ್ಪನವರು ಹೇಳುವಂತೆ ನಮ್ಮ ಒಕ್ಕಲುತನವು ಕೂಡ ಔದ್ಯೋಗಿಕ ಅವಶ್ಯಕತೆಗಳಿಗೆ ತಲೆಬಾಗಿ ನಡೆವ ಸಂದರ್ಭ ಒದಗಿತು.

—ಕಿಶೋರಲಾಲ ಮಶ್ರೂವಾಲಾ]

ಭೋಜನ ಸಂಭಾಷಣ

ಲೇಖಕರು:— ಶ್ರೀ ವೆಂಕಣ್ಣಾಚಾರ್ಯ ಪಪ್ಪು, ಬಿ. ಎ., ಎಲೆಲ್. ಬಿ., ವಕೀಲ, ಹುಬ್ಬಳ್ಳಿ

ಭಾಸ್ಕರ :— ಎಲಾ! ಎಲಾ!! ಎಲಿ ಹಾಕಿ ದ್ರೇನ್ರೊ?

ಭಾವು :— ಎಲಿ ಹಾಕಿ ಸಿದ್ಧಾಗೇದ. ತಯಾರ.

ಭಾಸ್ಕರ :— (ಎಲೆ ಎಣಿಸುತ್ತ) ೧, ೨, ೩, ... ೯, ೧೦ ಜ್ಯಾಕಿ, ರಾಣಿ, ರಾಜಾ.

ಭಾವು :— "ಯೇ ಬ್ರಾಹ್ಮಣಾಸ್ತ್ರಸು ಪರ್ಣಂ ಪಠಂತಿ"

ಭಾಸ್ಕರ :— (ನಾಲಗೆಯನ್ನು ಕಡಕೊಳ್ಳುತ್ತಾ) ೧೧, ೧೧ . . . . . ೫೧, ೫೨ ಎಲಿ! ಕಾಯಿದೆ ಉಲ್ಲಂಘನ ಖಟ್ಲಿ. ಏನ ಮಾಡಬೇಕಂತ ಮಾಡೀರೀ?

ಭಾವು :— ಎದ್ದರ ಕಾಯಿದೆ, ಕೂತರ ಕಾಯಿದೆ. ಯುದ್ಧ ನಡದಾಗ ಸಮುದ್ರದಾಗ ಜಲ ಸುರಂಗ ಹಾಕಿದ್ಹಾಂಗ ಶಾಂತಿ ಕಾಲದ ಸ್ವತಂತ್ರ ಹಿಂದುಸ್ಥಾನದಾಗ ಲೆಕ್ಕ ಇಲ್ಲದಷ್ಟು ಕಾಯಿದೆ ಕಾಲಾಗ ಹರಡಿಬಿಟ್ಟಾರ. ಮುಂದೆ ಹೆಜ್ಜಿ ಇಟ್ಟರ ಕಾಯಿದೇದ ಉಲ್ಲಂಘನ. ಪರದೇಶೀ ಮನುಷ್ಯ ಬಂದು ಈ ಕಾಯಿದೆ ಎಲ್ಲಾ ನೋಡಿದ್ರ ಅವಗ ಏನಸಬಹುದು? ಹಿಂದುಸ್ಥಾನ ಏನ ಸೆಟ್ಲಮೆಂಟೊ ಇಷ್ಟು ಕಾಯಿದೆ ಮಾಡಬೇಕಾರ?

ಭಟ್ಟ :— ಸ್ವಲ್ಪೇ ಕಾಯಿದೆಗಳಿರೋದು ಸುಸಂಸ್ಕೃತ ರಾಷ್ಟ್ರದ ಲಕ್ಷಣಾ. ಮನು ಸ್ಮೃತಿ ನೋಡ್ರಿ . . . . ೫೨ ಎಲಿ ಇದ್ದರೂ ಅದರಾಗ ಅರ್ಧ ಟಿಕಿಟಿನ ಎಲಿನೂ ಅವ.

ಭಾಸ್ಕರ :— ವಕೀಲಿ ಅರ್ಥಾ ಸುರುವಾತಲ್ಲಾ. ಹೀಂಗ ಅನರ್ಥ, ಅಲ್ಲಾ ಅನಂತಾರ್ಥ ಮಾಡಿ, ಆಧುನಿಕ ಮನುಗಳಿಗೆ ಇಂಡಿಯನ್ ಪೀನಲ್ ಕೋಡದಂಥಾ ಮಜಬೂತ ಕಾಯಿದೆ ಮಾಡಲಿಕ್ಕೆ ಬರುದುಲ್ಲಾ ಅಂತ ಎಲ್ಲಿ ತೋರಸತಾರೋಂತ ಹೊಸಾ ಕಾಯಿದೇದಾಗೆಲ್ಲಾ ವಕೀಲರು ಹಾಜರಾಗಬಾರದು ಅಂಬೊ ಬೊಂದು ಕಲಮೂ ಸೇರಿಸಿರತಾರ.

ಭಟ್ಟ :— ಊಟಕ್ಕ ಬರೋಅವರೆಲ್ಲಾ ತೀರಿದ್ರೆ? ಆ ಮುದುಕಾಚಾರು ಕಾಣಸವಲ್ಲರಲ್ಲಾ.

ಭಾವು :— ಅವರ ಪ್ರಕೃತಿ ಬರೋಬರಿ ಇಲ್ಲಾ.

ಭಟ್ಟ :— ಮುದುಕ ಮನುಷ್ಯರು; ಬಂದು ಹೆಣಾ ಕೂತ್ಹಾಂಗ ಕೂತಿದ್ರೂ ಎಷ್ಟೋ ಶೋಭಾ! ಬಂದವರು ಏನು ಊಟಕ್ಕ ಹೇಳಿದವನ ಹೆಣಾ ಬೀಳೂ ಹಾಂಗ ಉಣಬೇಕಂತ ಎಲ್ಲಿ ಹೇಳೇದ?

ಭಾಸ್ಕರ :— ಗಂಧಾ ಕೊಡ್ರಿ ಎಲ್ಲಾರಿಗೂ.

ಭಾವು :— ನಿಮ್ಮ ಬಿಪಿನಚಂದ್ರಗ ಒಂದ ಜನಿವಾರ ಬೇಕಂತ; ಇಲ್ಲಾ ಶರ್ಟ ಹಕ್ಕೊಂಡು ಊಟಕ್ಕ ಕೂಡ್ರೊ, ಅವರ ಪಂಕ್ತಿ ಅದ ಏನು?

ಭಟ್ಟ :— ಧರ್ಮ ಹೋತು, ಕಲಿ ಪ್ರಾಬಲ್ಯ ಆತು.

ಭಾವು :— ಧರ್ಮಾ ಅಂದರ ಮಾನವ ಧರ್ಮ. ಜಾತಿ ಅಂದರ ಸ್ತ್ರೀ ಪುರುಷ ಜಾತಿ. ಹೊಸಾ ಹಿಂದೂ ಕಾಯಿದೆ ನೋಡೀರೇನು? ನಿದಾನ ಕೇಳಿರೇನು?

ಭಟ್ಟ :— ಹೊಸಾ ಹಿಂದೂ ಕಾಯಿದೆ ಅಂದರೇನು? ಶ್ರುತಿ ಸ್ಮೃತಿ ಬಿಟ್ಟ ಇರತಾವೇನು?

ಭಾವು :— ಬಿಟ್ಟ ಇರತದೇನು— ಬಿಟ್ಟ ಇರತದೇನು, ಹಿಂಗ ಶ್ರುತಿ ಹಿಡಿರಿ, ಅಂದರ ಸ್ಮೃತಿ ತಪ್ಪತದ. ಜನಾಬ್, ಹಿಂದು ಕಾಯಿದೆ— ಸಂಸ್ಕೃತದಾಗಲ್ಲ— ಇಂಗ್ಲೀಷನಾಗ ಬರದದ.

ಭೀಷ್ಮಾಚಾರ್ಯ :— ಅಕ್ಷಂತಿ ಕೊಡ್ರಿ ಬ್ರಾಂಬರಿಗೆ.

ಭಾವು :— ಬ್ರಾಂಬರಿಗೆ? ಮಹಾರಾಯರೇ, ಹಿಂದುಗಳಿಗೆ ಅನ್ನರಿ; ಇನ್ನೆಲ್ಲಿ ಬ್ರಾಂಬರು. ಇನ್ನೆಲ್ಲಿ ಅಕ್ಷಂತಿ?

ಭೀಷ್ಮಾ :— ಯಾಕ ಅಂದೆ?

ಭಾವು :— ಅಕ್ಷಂತಿ ಹಚ್ಚಿದ್ರ ವೈಷ್ಣವಾ, ಮೂರು ನಾಮಾ ಹಚ್ಚಿದ್ರ ಶ್ರೀವೈಷ್ಣವಾ, ಭಸ್ಮಾ ಹಚ್ಚಿದ್ರ ಸ್ಮಾರ್ತ, ಈಬತ್ತಿ ಹಚ್ಚಿದ್ರ ಲಿಂಗಾಯತ, ಗಂಧದ ಬೊಟ್ಟು ಇಟಗೊಂಡ್ರ ಬಡಿಗಾ, ಈ ಎಲ್ಲಾ ಜಾತಿ ಸೂಚಕ ಚಿನ್ಹಕ್ಕ ಅರ್ಧ ಚಂದ್ರಾಮಾ...

ಭಾಸ್ಕರ :— ಮೇಲೆ ಚಿಕ್ಕಿ.

ಭಾವು :— ...... ಯಾಕಂದ್ರ ನಾವು ಒಂದು ಜಾತಿ ರಹಿತ ಸಮಾಜ ಕಟ್ಟಬೇಕಾಗೇದ.

ಭಟ್ಟ :— ಹಂಗಾದ್ರ ಜಾತಿವಾಚಕ ಹೆಸರುಗಳಾದ ಆಚಾರ್ಯ, ಭಟ್ಟ, ಅಯ್ಯಾ, ಅಪ್ಪಾ, ವರ್ಮಾ, ಶರ್ಮಾ ಇವನ್ನೆಲ್ಲಾ ತ್ಯಜಿಸಬೇಕಾತಲ್ಲಾ. ರಾಮ ರಹೀಮ, ಕ್ರಿಸ್ತ ಕರೀಮ, ಬದಾಮಜಿ, ಕರ್ತಾರಸಿಂಗ, ಜಾನ, ಈ ಹೆಸರಿನ ಮ್ಯಾಲಿಂದ ಜಾತಿ ಪತ್ತೆ ಹಚ್ಚಲಿಕ್ಕೆ ಬರತದ. ಅದಕ ಹೆಸರ ಇಟಗೊಬಾರದಾತಲ್ಲಾ!

ಭಾವು :— ಇಟಗೋಬಾರದು. ನ್ಯೂಯಾರ್ಕ ನ್ಯಾಗ ರಸ್ತೇಕ ನಂಬರು, ಮನಿಗೆ ನಂಬರ, ಹಾಂಗ ಮನಶ್ಯಾಗೂ ಹೆಸರಿನ ಬದ್ಲಿ ನಂಬರು ಅವರವರ ಹಣೆಮ್ಯಾಲೆ ಹಚ್ಚೀಚುಚ್ಚೀದರಾತು.

ಭಟ್ಟ :— ಖಾನೆ ಶುಮಾರಿ ಹ್ಯಾಂಗ?

ಭಾವು :— ದನದ ಖಾನೇಶುಮಾರಿ ಹಾಂಗ ಇಷ್ಟಕೋಣಾ, ಇಷ್ಟಕತ್ತಿ, ಇಷ್ಟ ಎಮ್ಮಿ, ಇಷ್ಟ ಎತ್ತು ಆ ಪ್ರಕಾರ... ವರ್ಗರಹಿತ ಮತ್ತು ಪ್ರಾಂತೀಯತಾತೀತ ಸಮಾಜನೂ ಆಗಬೇಕಾಗೇದ. ಯಾಕಂದ್ರ ಉಡಗಿ ತೊಡಗಿ ಮೇಲಿಂದ ಬಡವಾ, ಶ್ರೀಮಂತಾ, ಹೆಣ್ಣು, ಗಂಡು, ಗುಜರಾಥಿ, ಮದ್ರಾಸಿ, ಶೆಟ್ಟಿ, ಚೆಟ್ಟಿ, ಶೇಟಜಿ, ಭಡಜಿ. ಇವೆಲ್ಲಾ ಅರ್ಥಿಕ ಶೆಗ್ಗು ದಿನ್ನಿ ಮುಚ್ಚಲಿಕ್ಕೆ ಆಸೇತು ಹಿಮಾಚಲ ಪ್ರತಿಯೊಂದು ವ್ಯಕ್ತಿ ಘಟನಾ ಸಮಿತಿ ವಿಧಿಸಬಹುದಾದ ಸಮವಸ್ತ್ರಧಾರಿಗಳಾಗಬೇಕು.

ಭಟ್ಟ :— ಇಷ್ಟೆಲ್ಲಾ ಖಟಾಟೋಪ ಯಾಕ, ವಸ್ತ್ರದ ಜರೂರಾರ ಏನ ಅದ? ದೇವರ ನಮಗ ಚರ್ಮದ ಹೊದಕಿ (ವಸ್ತ್ರ) ಹಾಕಿ ಕಳಿಶಾನ.

ಭಾವು :— ದೇವರಿಗೆ ಸ್ವಲ್ಪ ವ್ಯವಹಾರ ಜ್ಞಾನ ಕಡಿಮಿ. ಬಣ್ಣದ ಚರ್ಮದ ಹೊದಕಿ ಹಾಕ್ಯಾನ; ಅದರೊಳಗೆ ಭೇದ, ವರ್ಣಾ ವರ್ಣಾ, ವರ್ಣಾ!!! ಈ ವರ್ಣದ ಮ್ಯಾಲೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವ್ಯಕ್ತ ಆಗತಾವಲ್ಲಾ!

ಭಟ್ಟ :— ಬಂದದ್ದ ಸ್ವಾತಂತ್ರ್ಯ, ಕೂತದ್ದ ಶಾಸನ ಸಭಾ, ಹೊರಡಸರಿ ಒಂದ ಕಾಯಿದೆ. "ಹಿಂದವಾಸಿಗಳಿಗೆ ಒಂದೆರಡು ತಲಾಂತರಗಳಲ್ಲಿ ಒಂದು ಮಟ್ಟದ ಬಣ್ಣ ಒಂದು ನಿರ್ದಿಷ್ಟ ಅಳತಿ ಬರೋಹಾಂಗ ವ್ಯವಸ್ಥಾ ಆಗಬೇಕು."

ಭಾಸ್ಕರ :— ಭಟ್ಟರ ಇದೆಲ್ಲಾ ಬರೋಬರಿ; ಸಾಧಸೂ ಬಗಿಹ್ಯಾಂಗ?

ಭಾವು :— (ಬಾಯಿ ಹಾಕಿ) ಮಿಶ್ರ ವಿವಾಹದಿಂದ.

ಎಲ್ಲರೂ :. ಅಂದ್ರ..ಅಂಂಂದ್ರ..ಂದ್ರಂದ್ರ..

ಭಾವು :— ವಿರುದ್ಧ ಬಣ್ಣದ ಮತ್ತು ವಿರುದ್ಧ ಅಳತೆಯ ಹೆಣ್ಣುಗಂಡಿನ ವಿವಾಹದಿಂದ ಒಂದೆರಡು ತಲಾಂತರಗಳಲ್ಲಿ ನಿಮಗ ಬೇಕಾದ ಸ್ಟ್ಯಾಂಡರ್ಡ ಪ್ರಜಾ ನಿರ್ಮಾಣ ಆಗತದ.

ಭೀಷ್ಮಾಚಾರ್ಯ :— ಖೀರ ಕೇಳ್ರಿ ಬ್ರಾಂಬರಿಗೆ, ಇಗ ಜಿಲೇಬಿ ಕೇಳ್ರಿ. ಆಗಲಿಲ್ಲಾ ಹೋಗಲಿಲ್ಲಾ. ವರ್ಣರಹಿತಂತ ವರ್ಗರಹಿತಂ ಹೊಸಾ ರಾಜಾ ಪಟ್ಟಕ್ಕೆ ಬಂದಗಳಿಗ್ಗೆ "ನಾಯಿ ಸಾಕರಿ" "ನಾಯಿ ಪೀಳಗಿ ಸುಧಾರಸರಿ" ಮುಂತಾದ್ದು ಮಾಡಿದ್ಹಾಂಗ— ಈಗಂತೂ ಈ ರಾಜರು ಹೋದರು— ರಾಜಕೀಯ ಪಕ್ಷಪಟ್ಟಕ್ಕೆ ಬಂದ ಘಳಿಗ್ಗೆ ಈ ಕಾಯಿದೆ, ಆ ಕಾಯಿದೆ ಮಾಡಿ ಹಿಂದೀ ಜನರ ಆಮೂಲಾಗ್ರ ಬದ್ಲ ಮಾಡೊ ಅವರಂತ...... ಇವೆಲ್ಯಾರೆ ಕಡಿ ಪುರೋಸೋವತ?

ಭಾಸ್ಕರ :— ಸೀ ಮ್ಯಾಲೆ ಸೀ, ಬಾಯಿ ಕಟ್ಟತದ, ನಡವ ಸ್ವಲ್ಪ ಬಟಾಟಿ ಭಾತ ಕೇಳ್ರಿ. ಜಿಲೇಬಿ ಜಿದ್ದ ನಡದಲ್ಲಿ ಮಜ್ಜಿಗಿ ಕೇಳ್ರಿ.

ಭೀಷ್ಮಾಚಾರ್ಯ :— (ತೇಗಿನ ತೋಫಖಾನೆಯನ್ನು ಸುರುವು ಮಾಡಿ) "ಅನ್ನದಾತಃ ಸುಖೀ ಭವ ಅನ್ನದಾತಃ ಸುಖೀ ಭವ."

ಭಾವು :— ಅನ್ನದಾತಾ ಅಂತ. . . ! ನಿಮ್ಮ ಭೋಜನ ಇನಾಂ ಜಮೀನ ಹೋಗತಾವ. ಏನ ಸುಖೀಭವ . . . ?

ಭೀಷ್ಮಾಚಾರ್ಯ :— ಎಂದೂ ಹೋಗುದುಲ್ಲಾ. ಬಹಳ ಉಂಡೇವಿ ಅಂತ ಈಗೀನ ನಮ್ಮ ಸರಕಾರದವರು ನಮ್ಮ ರೇಶನ್ ಕಾರ್ಡಿನ್ಯಾಗ ಕೆಲವು ತಲಿ ದಶಕ ಶತಕ, ಕಾಟ ಹಾಕತಾರ, ಮತ್ತೊಬ್ಬ ದಾತಾ ಈ ಹಿಂದುಸ್ತಾನದೊಳಗ . . .

ಭಾವು :— ಅಲ್ಲಾ ಅಲ್ಲಾ ಈ ಇಂಡಿಯನ್ ಯುನಿಯನ್ನದೊಳಗ . . . .

ಭೀಷ್ಮಾಚಾರ್ಯ :— ಯಾಕ, ಹಿಂದುಸ್ಥಾನಕ್ಕ ಹಿಂದುಸ್ಥಾನ ಅನ್ನಲಿಕ್ಕೆ ನಾಚಿಗೇ . . . ? ಭರತ ಭೂಮಿಯೊಳಗ ಹುಟ್ಟೇ ಹುಟ್ಟತಾನ ಮತ್ತ ಭೂದಾನಾ ಮಾಡಿ ಭೋಜನ ವ್ಯವಸ್ಥಾ ಮಾಡತಾನ. ಕಾಲ ಚಕ್ರ ತಿರಗತದ . . . ಒಬ್ಬವಾ ಕೊಡತಾನ . . . . ಒಬ್ಬವಾ ಕಸಗೊತಾನ. ನಡವ ಅದ - . . . . ಜಡ ಪದಾರ್ಥಾ ಏಳಲಿಕ್ಕ ಬರವಲ್ಲದು.

ಭಾಸ್ಕರ :— ಎಬ್ಬಸಲ್ಯಾ?

ಭೀಷ್ಮಾಚಾರ್ಯ :— ಥೂ, ಎಂಜಲ ಕೈಲೆ ಮುಟ್ಟತೀಯಾ? ನಿಮ್ಮ ಕ್ರಾಪಾಚ್ಛಾದಿತ ತಲಿಯೊಳಗ ಬುದ್ಧಿ ಅಭಾವ . . . . ನಾನೇ ಏಳತೇನಿ ಏಳುವ ಪ್ರಯತ್ನ ಮಾಡತೇನಿ ಬಿಡು.

ಭಾವು :— ನಮ್ಮ ತಾಂಬೂಲ ಆದ ಮ್ಯಾಲೆ ನಿಮ್ಮ ಪ್ರಯತ್ನಕ್ಕ ಯಶಾ ದೊರಕತದ.

ವಾರದ ಭವಿಷ್ಯ

ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಅಫೀಸ ಖಡೇಬಝಾರ, ಬೆಳಗಾವಿ.

ಜೂನ ೨೧ ರಿಂದ ೨೭ ರ ವರೆಗೆ

ಮೇಷ

ನಿಮ್ಮ ಮತ್ತು ಕೆಲ ದಿನಗಳಿಗೆಂದು ಬಂದ ಅತಿಥಿಗಳ ಪ್ರಕೃತಿ ಸ್ವಲ್ಪ ಕೆಡುವದು ಆದರೆ ಉಳಿದವರದು ಉತ್ತಮ. ಪ್ರಾಪಂಚಿಕ ಸುಖ ಅನುಕೂಲವಿದ್ದರೂ ಆಪ್ತರು ಮತ್ತು ಮಿತ್ರರಿಂದ ಮನಸ್ಸಿಗೆ ಚುಚ್ಚುವಂಥ ಮಾತುಗಳು. ಉದ್ಯೋಗದಲ್ಲಿ ಪ್ರತಿಷ್ಠೆ ಅನುಕೂಲ ಆದರೆ ಪ್ರಗತಿಗೆ ಒಮ್ಮೆಲೆ ಅಡ್ಡಿಯುಂಟಾಗಿ ಕೈಗೆ ಬಂದ ಲಾಭ ಕೂಡ ಆಗದಿರುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿಯೂ ನಿಮ್ಮ ಆಲಸ್ಯವೆ ಅಡ್ಡ ಬರುವದು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಭರಣಿಗೆ ತೊಂದರೆ ಕಡಿಮೆ. ತಾ. ೨೧—೨೨-೨೩ ಅನುಕೂಲ.

ಅದೇ ರೀತಿ ೨೩ ಬುಧವಾರ ಮುಂಜಾನೆ ೧೧ ಹೊಡೆದು ೨ ನಿಮಿಷಕ್ಕೆ ತಾ. ೧೫ ಫೆಬ್ರುಅರಿಯಿಂದ ಧನುವಿನಲ್ಲಿ ಇದ್ದ ಗುರು ವಕ್ರಗತಿಯಿಂದ ವೃಶ್ಚಿಕದಲ್ಲಿ ಬರುವನು ಮತ್ತು ರಾಶಿಯಲ್ಲಿ ಅಕ್ಟೋಬರ ೭ ರ ವರೆಗೆ ಉಳಿಯುವನು ಅಂದರೆ ಈ ರಾಶಿಯವರಿಗೆ ಅವನು ೯ ನೆಯವನಿದ್ದವನು ೮ನೆಯವನಾಗುವನು ಆದುದರಿಂದ ಮೇಲಿನ ಅವಧಿಯಲ್ಲಿ ದೇಹ ಕ್ಲೇಶ, ಭಾಗ್ಯಹಾನಿ, ಮಕ್ಕಳ ಬಗ್ಗೆ ಸ್ವಲ್ಪ ಚಿಂತೆ ಮಲಿನ ವಿಚಾರ. ಕೆಲ ಮಂಗಳ ಧಾರ್ಮಿಕ ಮತ್ತು ಪಾರಮಾರ್ಥಿಕ ಸಂಗತಿಗಳು ಸಂಭವಿಸುವ ಮೊದಲಾದ ಫಲ ದೊರೆಯುವವು.

ವೃಷಭ

ಎಲ್ಲರ ಪ್ರಕೃತಿ ಉತ್ತಮ. ಆದರೆ ಪ್ರತಿಯೊಬ್ಬನ ಘಾಜೀಲ. ಪ್ರೌಢಿಯಿಂದ ಪ್ರಾಪಂಚಿಕ ಕೆಲ ಗೊಂದಲವೇಳುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅನುಕೂಲವಿದ್ದರೂ ಪರೋತ್ಕರ್ಷದಿಂದ ಮನಸ್ಸಿಗೆ ವಿಷಾದ. ಮಿತ್ರಸುಖ ಉತ್ತಮ. ಆದರೆ ಶತ್ರುಗಳಿಂದ ಮೇಲಿಂದ ಮೇಲೆ ತೊಂದರೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಯೊಬ್ಬರಿಗೆ ತಮ್ಮ ತಮ್ಮ ಪಕ್ಷವು ಸರ್ವಸಮರ್ಥನಿದ್ದಂತೆ ಸುಳ್ಳು ಸುಳ್ಳೇ ಭಾಸವಾಗುವದು. ಭೆಟ್ಟಿಗಿಂತ ಪ್ರವಾಸ ಮತ್ತು ವ್ಯವಹಾರವು ಉತ್ತಮ. ರೋಹಿಣಿಗೆ ತೊಂದರೆ ಕಡಮೆ. ತಾ. ೨೪, ೨೫, ೨೬ ಅನುಕೂಲ.

೨೩ ನೇ ತಾರೀಕಿಗೆ ಬರುವ ೭ ನೇ ಗುರುವಿನಿಂದ ಹೆಂಡತಿಗೆ ಸ್ವಲ್ಪ ಕ್ಲೇಶ. ಆದರೆ ಲಾಭ ಆಪ್ತ ಮಿತ್ರಸುಖ ಆರೋಗ್ಯ ಮಹತ್ವದ ಮಾತುಗಳಲ್ಲಿ ಯಶಸ್ಸು ಇವುಗಳು ದೊರೆಯುವವು.

ಮಿಥುನ

ಪ್ರಕೃತಿ ಉತ್ತಮ. ಆದರೆ ಅನೇಕ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ. ಮಕ್ಕಳಲ್ಲಿ ಉನ್ನತಿ ಆದರೆ ಅವರಿಂದ ನಿಮ್ಮ ವರ್ಚಸ್ಸು ಕಡಮೆಯಾಗುವಂಥ ವರ್ತನೆ. ಉದ್ಯೋಗದಲ್ಲಿ ಪ್ರಗತಿ ಮಧ್ಯಮ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಧಂದೆದವರಿಗಿಂತ ನೋಕರದಾರರಿಗೆ ಹೆಚ್ಚು ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡಬೇಕಾದ ಸಂಗತಿಗಳು. ಆಕಸ್ಮಿಕವಾಗಿ ಸಂಭವಿಸುವ ಯೋಗ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ ಆದರೆ ಆರಿದ್ರಾಕ್ಕೆ ತೊಂದರೆ ಕಡಮೆ. ತಾ. ೨೧, ೨೨, ೨೬, ೨೭ ಅನುಕೂಲ.

ಬರುವ ೬ ನೇ ಗುರು ಅಧಿಕಾರ ಮತ್ತು ವರ್ಚಸ್ಸಿಗೆ ಅನುಕೂಲ ಆದರೆ ಹೆಂಡತಿಗೆ ಮಿತ್ರರಿಗೆ ಬಂಧುವರ್ಗದವರಿಗೆ ಕ್ಲೇಶ. ನಿಮ್ಮ ನಿಮ್ಮಲ್ಲಿ ವಿರೋಧ. ಶತ್ರುಗಳಲ್ಲಿ ಹೆಚ್ಚಳ ಮತ್ತು ಲೋಕಮತ ಪ್ರತಿಕೂಲ. ಮೊದಲಾದ ಫಲಗಳು ದೊರೆಯುವವು.

ಕರ್ಕ

ಪ್ರಕೃತಿ ಅಷ್ಟಕ್ಕಷ್ಟೆ. ಹೆಂಡತಿ ಮಕ್ಕಳ ವಿರೋಧ ಬಹಳ. ಮಿತ್ರರು ಮತ್ತು ಬಂಧುವರ್ಗದವರು ನಿಮ್ಮ ಉಪಹಾಸ ಮಾಡುವರು. ಕೆಲ ಕಾರ್ಯ ನಿಮಿತ್ತ ಎರಡನೆಯವರಿಗೆ ಉಪಯೋಗಿಸಲಿಕ್ಕೆಂದು ಕೊಟ್ಟ ವಸ್ತು ಕಳೆದು ಹೋದ ಇಲ್ಲವೆ ಮುರಿದಸುದ್ದಿ. ಉದ್ಯೋಗದಲ್ಲಿ ಪ್ರಗತಿ ಹೆಚ್ಚು, ಪ್ರತಿಷ್ಠೆ ಅನುಕೂಲ ಆದರೆ ಲಾಭ ಬಹಳ ಕಡಮೆ. ಸರಕಾರಿ ಕೆಲಸದಲ್ಲಿ ಲಂಚ ಕೊಟ್ಟರೂ ಇಲ್ಲವೆ ವಸೀಲೀ ಹಚ್ಚಿದರೂ ಕೊನೆಗೆ ಅಯಶಸ್ಸು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಆದರೆ ವೆಚ್ಚ ಮತ್ತು ತೊಂದರೆ ಕಲ್ಪನಾತೀತ. ಪತ್ರವ್ಯವಹಾರಕ್ಕಿಂತ ಭೆಟ್ಟಿ ಮತ್ತು ಪ್ರವಾಸ ಅನುಕೂಲ. ಪುಷ್ಯಕ್ಕೆ ತೊಂದರೆ ಕಡಮೆ. ತಾ. ೨೪, ೨೫ ಅನುಕೂಲ.

ಬರುವ ೫ ನೇ ಗುರು ಗೃಹ ಕಲಹ ಮತ್ತು ಶತ್ರುಗಳಿಂದ ಲಾಂಛನಾತ್ಮಕ ಪ್ರಕಾರವನ್ನುಂಟುಮಾಡಲು ಸಮರ್ಥನಾದರೂ ಲಾಭ ಭಾಗ್ಯ ಸ್ತ್ರೀ ಸುಖ ಮಿತ್ರ ಪ್ರೇಮ ಮತ್ತು ಆತ್ಮೋನ್ನತಿಗೆ ಬಹಳ ಉತ್ತಮನಿರುವನು.

ಸಿಂಹ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಹೆಂಡತಿಗೆ ಮೇಲಿಂದ ಮೇಲೆ ಹುಷಾರಿ ಮತ್ತು ಆರೋಗ್ಯವೆನಿಸಹತ್ತುವ ಯೋಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಸ್ವಲ್ಪ ಬೆಲೆಯಲ್ಲಿ ಹೆಚ್ಚು ಬೆಲೆಯ ವಸ್ತು ಸಿಕ್ಕುವ ಯೋಗ. ಮಿತ್ರರಿಂದ ವಿಕ್ಷಿಪ್ತ ವರ್ತನೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು ಪ್ರವಾಸಾದಿ ಕೆಲಸ ಹಿತದ್ದು. ಪೂರ್ವಾಕ್ಕೆ ಹೆಚ್ಚು ಅನುಕೂಲ. ತಾ. ೨೧, ೨೨, ೨೬, ೨೭ ಅನುಕೂಲ.

ಬರುವ ೪ ನೇ ಗುರು ಪ್ರತಿಷ್ಠೆ ಗುಪ್ತ ಲಾಭ ಪರೋಪಕಾರ ಮತ್ತು ಸದ್ವ್ಯಯಕ್ಕೆ ಅನುಕೂಲ. ಆದರೆ ಆಪ್ತರ ಮತ್ತು ಮಿತ್ರರ ವಿರೋಧ, ಸ್ಥಾವರ ಹಾನಿ ಸಂತತಿ ಕ್ಲೇಶ ಚಿತ್ತವ್ಯಗ್ರತೆ ಮೊದಲಾದ ಫಲಗಳನ್ನು ಕೊಡುವನು.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಮಕ್ಕಳ ಉನ್ನತಿ ಉದ್ದೇಶದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಆದರೆ ಕೆಲ ಸಂಗತಿಗಳ ತುರಸಿನಿಂದ ಬಹಳ ವೆಚ್ಚ ಮತ್ತು ವಿಪರೀತ ದಗದಗಿ. ಸಹಜವಾಗಿ ಮಾತಾಡಿದರೂ ವಿಪರೀತ ಚಿರಡಿಗೇಳುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ ಪ್ರವಾಸಾದಿ ಕೆಲಸ ಹಿತದ್ದು. ಹಸ್ತಾಕ್ಕೆ ತೊಂದರೆ ಕಡಮೆ. ತಾ. ೨೩, ೨೪, ೨೫ ಅನುಕೂಲ.

ಬರುವ ೩ ನೇ ಗುರು ಭಾಗ್ಯ ಸ್ತ್ರೀ ಮತ್ತು ಮಿತ್ರಸುಖ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಇವುಗಳಿಗೆ ಉತ್ತಮ. ಆದರೆ ಸ್ಥಾವರ ಆಸ್ತಿಯಲ್ಲಿ ಹೊಸ ಶತ್ರುಗಳು. ವರಿಷ್ಠರ ಇಲ್ಲವೆ ಆಶ್ರಯದಾತರ ಗೈರಮರ್ಜಿ. ಅತ್ತೆಯ ಮನೆಯವರಿಗೆ ಮತ್ತು ತಾಯಿಗೆ ಕ್ಲೇಶ ಮೊದಲಾದ ಫಲಗಳನ್ನು ಕೊಡುವನು.

(೧೬ನೆಯ ಪುಟಕ್ಕೆ)

ಹಿಂದುಸ್ತಾನ

ಮುಂಬಯಿ

ಜಯತಪುರದಿಂದ ಮುಂಬಯಿಗೆ ಹೊರಟಿದ್ದ ಲೀಲಾವತಿ ಮತ್ತು ಯಶವಂತಿ ಎಂಬೆರಡು ದೇಶಿ ಹಡಗಗಳು ರತ್ನಾಗಿರಿಯ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಅನುಕ್ರಮವಾಗಿ ಮುಳುಗಿದವೆಂದು ತಿಳಿಯುತ್ತದೆ. ಲೀಲಾವತಿಯಲ್ಲಿದ್ದ ೧೧ ಜನರಲ್ಲಿ ಒಬ್ಬನು ಮೃತನಾಗಿದ್ದು ಉಳಿದವರ ಪತ್ತೆ ಇಲ್ಲ. ಯಶವಂತಿಯಲ್ಲಿದ್ದ ೧೫ ಜನರಲ್ಲಿ ೯ ಜನರು ದಡದೆಗೆ ತಲುಪಿದ್ದು ಉಳಿದವರ ಪತ್ತೆ ಇಲ್ಲವೆಂದು ತಿಳಿಯುತ್ತದೆ.

ನವಜೀವನ ಮುದ್ರಣಾಲಯದ ಧರ್ಮದರ್ಶಿಗಳು ಮ. ಗಾಂಧಿಯವರ ಆತ್ಮಚರಿತ್ರೆಯ ಆಂಗ್ಲ ಭಾಷೆಯ ಆವೃತ್ತಿಯನ್ನು ಯುರೋಪದಲ್ಲಿ ಪ್ರಕಾಶಿಸಲು ಲಂಡನದ ಫೊನಿಕ್ಸ್ ಪ್ರೆಸ್‌ದವರಿಗೆ ಅಧಿಕಾರ ಕೊಟ್ಟಿರುವರಾಗಿ ತಿಳಿಯುತ್ತದೆ.

ಪಾಕಿಸ್ತಾನದಿಂದ ಬಂದ ಮುಂಬಯಿ ಪ್ರಾಂತದಲ್ಲಿರುವ ನಿರಾಶ್ರಿತರ ಶಿಬಿರಗಳ ಆಡಳಿತವನ್ನು ತಾ. ೧೫ ರಂದು ಮುಂಬಯಿ ಸರಕಾರವು ವಹಿಸಿಕೊಂಡಿತು. ಈ ಶಿಬಿರಗಳಲ್ಲಿ ೩೦ ಸಾವಿರ ನಿರಾಶ್ರಿತರಿದ್ದು ಇಂದಿನ ವರೆಗೆ ಕೇಂದ್ರ ಸರಕಾರವೇ ಇವುಗಳ ಮೇಲ್ವಿಚಾರಣೆ ಮಾಡುತ್ತಿತ್ತು.

ಮುಂಬಯಿ ಪೋಲೀಸರು ತಾ. ೧೨ ರಂದು ವೃಯಿಲಂ ಎಂಬ ಅಮೇರಿಕೆಗೆಯ ಹಡಗವನ್ನು ಝಡತಿ ಮಾಡಿ ೨ ಬಂದೂಕ, ೧೫೦ ಸುತ್ತುಗಳ ಮದ್ದು ಗುಂಡು, ೧೧ ವಾಯರಲೆಸ ಉಪಕರಣ ಮೊದಲಾದವುಗಳನ್ನು ಜಪ್ತ ಮಾಡಿದರು. ಹಡಗದ ರನಾಯಿ ಎಂಬವನು ಶಸ್ತ್ರಾಸ್ತ್ರಗಳನ್ನು ಸ್ಥಳೀಯ ಜನರಿಗೆ ಮಾರಲು ಹವಣಿಸುವಾಗ ಪೋಲೀಸರು ಖೊಟ್ಟಿ ಗಿರಾಕಿಯನ್ನು ಕಳಿಸಿ ಅವನು ೨೫೦೦ ರೂ. ಗಳಿಗೆ ೪ ಪಿಸ್ತೂಲು, ೪೬೦ ಸುತ್ತಿನ ಮದ್ದು ಗುಂಡು ಮಾರಿದ ಕೂಡಲೆ ಹಡಗದವನನ್ನು ಹಿಡಿದು ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಲ್ಲಿ ಹಾಜರ ಮಾಡಿದರು. ೧೦ ಸಾವಿರ ರೂ. ಜಾಮೀನಿನ ಮೇಲೆ ಅವನನ್ನು ಬಿಟ್ಟಿದ್ದರೂ ಪ್ರತಿ ದಿನ ಪೋಲೀಸರಿಗೆ ಹಾಜರಿ ಕೊಡಲು ಅವನಿಗೆ ಅಪ್ಪಣೆ ಮಾಡಿದ್ದಾರೆ.

ಜಪಾನ ವಾಣಿಜ್ಯ ಶಿಷ್ಟಮಂಡಳದವರು ೮೫ ಸಾವಿರ ಗಂಟು ಅರಳಿಯನ್ನು ಕೊಂಡಿದ್ದು ಅದನ್ನು ಇದೇ ತಿಂಗಳ ೩೦ ನೇ ತಾ. ನೊಳಗಾಗಿ ಜಪಾನಕ್ಕೆ ಸಾಗಿಸುವರಾಗಿ ತಿಳಿಯುತ್ತದೆ. ಈ ಅರಳೆಯ ಬೆಲೆಯು ೨೮ ಕೋಟಿ ರೂ. ಆಗುವದೆಂದು ತಿಳಿಯುತ್ತದೆ. ಇದೇ ವಾಣಿಜ್ಯ ಶಿಷ್ಟಮಂಡಳದವರು ಪಾಕಿಸ್ತಾನದಿಂದ ೨೦ ಸಾವಿರ ಗಂಟು ಅರಳೆಯನ್ನು ಕೊಂಡಿದ್ದಾರೆಂದು ತಿಳಿಯುತ್ತದೆ.

ರಾಜಪಿಪ್ಪಲಾದ ಬೊಕ್ಕಸದಲ್ಲಿ ೨೨ ಲಕ್ಷ ರೂಪಾಯಿ ಉಳಿದ ತಾಲೂಕಗಳ ಬೊಕ್ಕಸಗಳಲ್ಲಿ ೫ ಲಕ್ಷ ರೂ. ಶಿಲಕು ಇರುವದು.

ನಿರಾಶ್ರಿತರ ನೆಲೆಸುವಿಕೆಗಾಗಿ ಅಹಮ್ಮದಾಬಾದ ಹಿಂದಿ ತತ್ವಜ್ಞಾನ ಪ್ರಚಾರ ಸಮಿತಿಗೆ ೧ ಲಕ್ಷ ಚದುರ ಗಜ ಭೂಮಿಯು ದಾನವಾಗಿ ಬಂದಿದ್ದು ಸಮಿತಿಯವರು ಕಟ್ಟಡ ಉಪಕರಣ ಹಾಗು ಹಣದ ಸಹಾಯಕ್ಕಾಗಿ ಸರಕಾರದ ಕಡೆಗೆ ಹೋಗತಕ್ಕವರಿದ್ದಾರೆ.

ಗುಜರಾತದ ೧೭ ದೊಡ್ಡ ಸಂಸ್ಥಾನಗಳು ೧೪೨ ತಾಲೂಕದಾರಿ ಹಾಗು ಠಾಣೆಗಳು ತಾ ೧೦ ರಂದು ಮುಂಬಯಿ ಪ್ರಾಂತದ ಉತ್ತರ ಭಾಗದ ೫ ಜಿಲ್ಹೆಗಳಲ್ಲಿ ಲೀನ ಹೊಂದಿದ್ದರಿಂದ ಗುಜರಾತ ಇತಿಹಾಸದಲ್ಲಿ ಹೊಸ ಪ್ರಕರಣವೇ ಪ್ರಾರಂಭವಾಯಿತೆನ್ನಬಹುದು.

ಲೀನಹೊಂದಿದ ಭಾಗಗಳ ಒಟ್ಟು ಪ್ರದೇಶವು ೧೬ ಸಾವಿರ ಚದುರ ಮೈಲು ಆಗುವದು.

ಧರ್ಮಪುರದಲ್ಲಿ ಯುವರಾಜರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಲೀನೀಕರಣದ ಪ್ರಗತಿಪರ ಉಪಾಯ ಕೈಕೊಂಡ ಬಗ್ಗೆ ಸರದಾರ ಪಟೇಲರನ್ನೂ ಧರ್ಮಪುರ ಮಹಾರಾಜರನ್ನೂ ಅಭಿನಂದಿಸಲಾಯಿತು.

ಮದ್ರಾಸ

ಮದ್ರಾಸದ ಪಾನನಿರೋಧ ಮಂತ್ರಿ ಶ್ರೀ ಡೇನಿಯಲ್ ಥಾಮಸ್‌ರು ತಾ. ೧೫ ರಂದು ರಾತ್ರಿ ೯ ಗಂಟೆಗೆ ತಮ್ಮ ಮನೆಯಲ್ಲಿ ನಿಧನ ಹೊಂದಿದರು. ಮರಣ ಸಮಯದಲ್ಲಿ ಅವರಿಗೆ ೫೯ ವರುಷಗಳಾಗಿದ್ದವು. ತಿನ್ನವೆಲ್ಲಿ ಹಿಂದೀ ಕ್ರಿಶ್ಚಿಯನ್ ಮತದಾರ ಸಂಘದಿಂದ ಅವರು ಮದ್ರಾಸ ಶಾಸನ ಸಭೆಗೆ ಆರಿಸಿ ಬಂದಿದ್ದರು.

ಹೊಸದಿಲ್ಲಿ

ಹಿಂದೀ ಸೈನಿಕರು ಕಾಶ್ಮೀರದಲ್ಲಿ ತಿಥ್ವಾಲದಿಂದ ೨೫ ಮೈಲಿನ ಮೇಲಿದ್ದ ಕೇರಾನ ಎಂಬ ಆಯಕಟ್ಟಿನ ಸ್ಥಳವನ್ನು ವಶಪಡಿಸಿಕೊಂಡಿದ್ದಾರೆ.

ಹಿಂದುಸ್ತಾನವು ಕಾಮನವೆಲ್ತದಲ್ಲಿ ಉಳಿಯಬೇಕೋ ಬೇಡವೊ ,ಎಂಬುದು ಭಾರತದ ಮುಖ್ಯ ಮಂತ್ರಿಗಳಾದ ಪಂ. ನೆಹರು ಅವರು ಲಂಡನ್ನಿಗೆ ಹೋಗಿ ಬಂದಮೇಲೆ ನಿರ್ಧರಿಸಲ್ಪಡಬಹುದು. ಅಲ್ಲಿಯ ವರೆಗೆ ನವಂಬರ ಘಟನಾ ಸಮಿತಿಯ ಅಧಿವೇಶನವನ್ನು ಮುಂದೆ ಹಾಕಬೇಕೆಂದು ಡಾ. ರಾಜೇಂದ್ರಪ್ರಸಾದರು ವಿಚಾರ ನಡೆಸಿರುವರಾಗಿ ತಿಳಿಯುತ್ತದೆ.

ಈ ವರೆಗೆ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಕೂಡಿ ೧೨೫೧೪ ಅಪಹೃತ ಸ್ತ್ರೀಯರು ಪಾರು ಮಾಡಲ್ಪಟ್ಟಿರುವರೆಂದು ಅಧಿಕೃತವಾಗಿ ಪ್ರಕಟವಾಗಿದೆ. ಹಿಂದುಸ್ತಾನದಲ್ಲಿ ೭೫೩೬ ಮುಸಲ್ಮಾನ ಸ್ತ್ರೀಯರು, ಪಾಕಿಸ್ತಾನದಲ್ಲಿ ೪೯೭೮ ಮುಸಲ್ಮಾನೇತರ ಸ್ತ್ರೀಯರು ವಿಮೋಚನೆ ಹೊಂದಿರುವರು.

ಮೇ ೧೦ ಕ್ಕೆ ಕೊನೆಗಾಣುವ ಪಕ್ಷದಲ್ಲಿ ೫, ೨೧, ೫೭, ೫೨೫ ರೂಪಾಯಿ ಬಂಡವಾಲಿನ ೧೪ ಕಂಪನಿಗಳಿಗೆ ಸರಕಾರದ ಅನುಮತಿ ದೊರಕಿದೆ.

ಭಾರತ ಸರಕಾರದವರು ಸಕ್ಕರೆ ಹಾಗು ಮಿಠಾಯಿಯನ್ನು ಭಾರತದಿಂದ ಹೊರಗೆ ನಿರ್ಯಾತ ಮಾಡಲು ಇದ್ದ ನಿರ್ಬಂಧವನ್ನು ಹಿಂತೆಗೆದುಕೊಂಡಿರುವರು. ಇನ್ನು ಮೇಲೆ ನಿರ್ಯಾತಕ್ಕೆ ಲಾಯಸೆನ್ಸಿನ ಅವಶ್ಯಕತೆಯಿಲ್ಲ.

ರೇಲ್ವೆ ಧಾನ್ಯದಂಗಡಿಗಳ ವಿಚಾರಣಾ ಸಮಿತಿಯ ಅಧ್ಯಕ್ಷರಾದ ಶ್ರೀ ಮೋಹನಲಾಲ ಸೆಕ್ಸೆನಾ ಅವರು ತಾ. ೧೫ಕ್ಕೆ ತಮ್ಮ ವರದಿಗೆ ಸಹಿಹಾಕಿ ರೇಲ್ವೆ ಮಂತ್ರಿ ಡಾ. ಜಾನಮಥಾಯರಿಗೆ ಒಪ್ಪಿಸಿದರಾಗಿ ತಿಳಿಯುತ್ತದೆ. ಈ ವರದಿಯನ್ನು ಅಧಿಕೃತವಾಗಿ ಪ್ರಕಟಿಸುವ ವರೆಗೆ ಯಾರೂ ಕಾಲ್ಪನಿಕ ಸಂಗತಿಗಳನ್ನು ಪ್ರಕಟಿಸಬಾರದೆಂದು ಶ್ರೀ ಮೋಹನಲಾಲರು ಬಿನ್ನವಿಸಿದ್ದಾರೆ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ ಇವರ ಮಗಳಾದ ಕುಮಾರಿ ನಯನತಾರಾ ಇವರ ವಿವಾಹವು ಸಿವಲ್ಲಾದ ಶ್ರೀ ಬಸೀರಾಮ ಸಹಗಲ ಇವರ ಮಗ ಕುಮಾರ ಗೌತಮ ಸಹಗಲ ರೊಡನಾಗಿದೆಯೆಂದು ಪ್ರಕಟಿಸಲಾಗಿದೆ.

ಬಿಹಾರ

ಸಣ್ಣ ಜಮೀನುದಾರರಿಗೆ ಪರಿಹಾರ ಕೊಡುವದಕ್ಕಾಗಿ ಬಿಹಾರ ಸರಕಾರವು ಹಿಂದುಸ್ತಾನದ ರಿಝರ್ವ ಬ್ಯಾಂಕಿಗೆ ೬೦ ಕೋಟಿ ರೂ. ಗಳ ಸಾಲ ಕೇಳಿದೆ. ಜಮೀನದಾರಿ ನಿರ್ಮೂಲನ ಮಸೂದೆಯಿಂದ ಅನೇಕ ಸಮಸ್ಯೆ ಉಂಟಾಗಿದ್ದು ಅವುಗಳನ್ನೂ ಜೊತೆಗೆ ಈ ಸಾಲದ ಪ್ರಶ್ನೆಯನ್ನೂ ಕುರಿತು ಹಿಂದುಸ್ತಾನ ಹಾಗು ಬಿಹಾರ ಸರಕಾರಗಳ ಪ್ರತಿನಿಧಿಗಳಲ್ಲಿ ಚರ್ಚೆ ನಡೆದಿದೆಯೆಂದು ತಿಳಿಯುತ್ತದೆ.

ಬಿಹಾರ ಸರಕಾರದವರು ಬಿಹಾರದಲ್ಲಿ ಕೂಡಲೆ ದೇವನಾಗರಿ ಲಿಪಿಯಲ್ಲಿ ಹಿಂದಿಯನ್ನು ಕಚೇರಿ ಭಾಷೆಯಾಗಿ ಬಳಕೆಯಲ್ಲಿ ತರಲು ನಿರ್ಧರಿಸಿರುವರೆಂದು ತಿಳಿಯುತ್ತದೆ. ಎಲ್ಲ ಜಿಲ್ಹಾಧಿಕಾರಿಗಳಿಗೆ ಪರಿಪತ್ರ ಕಳಿಸಿ ಹಿಂದಿಯ ಜ್ಞಾನವಿಲ್ಲದವರನ್ನು ಸರಕಾರಿ ನೌಕರಿಯಲ್ಲಿ ತೆಗೆದುಕೊಳ್ಳಬಾರದೆಂದೂ ತೆಗೆದುಕೊಂಡರೂ ೬ ತಿಂಗಳಲ್ಲಿ ಅದರ ಜ್ಞಾನ ಮಾಡಿಕೊಳ್ಳತಕ್ಕದ್ದೆಂದೂ ತಿಳಿಸಿದ್ದಾರೆ.

ಹಿಂದೀ ಸಂಸ್ಥಾನ

ಇಂದೂರಿನ ಮುಖ್ಯ ಪ್ರಧಾನರಾದ ವ್ಹಿ. ಎಸ್. ಖೋಡೆಯವರು ತಾ. ೧೦ ಕ್ಕೆ ಪತ್ರಿಕೋದ್ಯಮಿಗಳ ಸಭೆಯಲ್ಲಿ ಇಂದೂರ ಸಂಸ್ಥಾನದ ಆಡಳಿತವನ್ನು ಮಧ್ಯಭಾರತ ಒಕ್ಕೂಟದ ರಾಜಪ್ರಮುಖರಿಗೆ ಜೂನ ೧೬ ಕ್ಕೆ ಒಪ್ಪಿಸಲಾಗುವದೆಂದು ತಿಳಿಸಿದರು. ಮಧ್ಯಭಾರತ ಮಂತ್ರಿಮಂಡಳಕ್ಕೆ ವ್ಹಿ. ವ್ಹಿ. ದ್ರವಿಡ ಹಾಗು ಗೋಪೀಕೃಷ್ಣ ವಿಜಯ ವರ್ಗೀಯರು ರಾಜೀನಾಮೆ ಕೊಟ್ಟುದನ್ನೂ ಅವರು ತಿಳಿಸಿದರು. ಮಧ್ಯಭಾರತ ಮಂತ್ರಿಮಂಡಳಕ್ಕೆ ವಿ. ವ್ಹಿ. ದ್ರವಿಡ ಹಾಗು ಗೋಪೀಕೃಷ್ಣ ವಿಜಯ ವರ್ಗೀಯರು ರಾಜೀನಾಮೆ ಕೊಟ್ಟುದನ್ನೂ ಅವರು ತಿಳಿಸಿದರು.

ಕಮ್ಯುನಿಸ್ಟರ ಅತ್ಯಾಚಾರ

ಕೋಡೆಸರಿಯ ಅಲವಾಯಿಯ ಸಟಲಮೆಂಟ ಭೂಮಿಗಳಲ್ಲಿ ಕಮ್ಯುನಿಸ್ಟರು ಅತಿಕ್ರಮಣ ಮಾಡಿ ಅವುಗಳ ಸಾಗುವಳಿ ಮಾಡುವ ಸುದ್ದಿ ಬಂದಿದ್ದರಿಂದ ಚಾಲಕುಡಿ ಠಾಣೆಯ ಸಬ್ ಇನ್ಸಪೆಕ್ಟರರು ಹೆಡ್ ಕಾನ್‌ಸ್ಟೆಬಲ, ಕಂದಾಯ ಇನ್ಸಪೆಕ್ಟರ ಮೊದಲಾದವರು ಗ್ರಾಮಾಧಿಕಾರಿಗಳೊಂದಿಗೆ ೧೦ ನೇ ತಾ. ಅಲ್ಲಿಗೆ ತಪಾಸಣೆಗಾಗಿ ಹೋಗಿದ್ದರು. ಅಲ್ಲಿ ಅವರಿಗೆ ಅತಿಕ್ರಮಣವಾದುದು ಕಂಡು ಬಂತು. ಫೌಜದಾರರು ಈ ಬಗ್ಗೆ ಅಲ್ಲಿದ್ದವರನ್ನು ಪ್ರಶ್ನೆ ಕೇಳುತ್ತಿರುವಾಗ ಕಂಟಿಗಳ ಮರೆಗೆ ಅಡಗಿದ ಕೆಲವರು ಫೌಜದಾರರ ಮೇಲೆ ಕಲ್ಲು ತೂರಿದರು. ಅಷ್ಟರಲ್ಲಿ ೨೦೦ ಜನರ ಒಂದು ಗುಂಪು ಅಧಿಕಾರಿಗಳ ಮೇಲೆ ದಾಳಿ ಮಾಡಿದರು. ಇದರಲ್ಲಿ ಫೌಜದಾರರಿಗೆ ಬಹಳ ಗಾಯವಾಗಿ ಅವರು ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಈಗ ಅಲ್ಲಿಗೆ ವಿಚಾರಣೆಗಾಗಿ ಜಿಲ್ಹಾ ಮ್ಯಾಜಿಸ್ಟ್ರೇಟರೂ ಪೋಲೀಸ ಕಮಿಶನರರೂ ಹೋಗಿದ್ದಾರಾಗಿ ತಿಳಿಯುತ್ತದೆ.

ಅಸಫ ಅಲ್ಲಿಯವರಿಗೆ ಓಡಿಸಾದ ಗವರ್ನರ ಪದ

ಪಶ್ಚಿಮ ಬಂಗಾಲದ ಸದ್ಯದ ಗವ್ಹರ್ನರರಾದ ಮಾನ್ಯ ಸಿ. ರಾಜಗೋಪಾಲಾಚಾರ್ಯರು ಮೌಂಟಬ್ಯಾಟನ್ನರ ತರುವಾಯ ಹಿಂದುಸ್ತಾನದ ಗವರ್ನರ ಜನರಲ್ಲರಾಗಿ ನೇಮಿಸಲ್ಪಟ್ಟದ್ದರಿಂದ ಗವರ್ನರ ಜನರಲ್ಲರು ತಮ್ಮ ಸರಕಾರದ ಸಲಹೆಯ ಮೇರೆಗೆ ಕೆಳಗಿನ ನೇಮಕಗಳನ್ನು ಮಾಡಿರುವರೆಂದು ತಾ. ೧೨ ಕ್ಕೆ ಸರಕಾರಿ ಭವನದಿಂದ ಪ್ರಕಟನೆ ಹೊರಟಿದೆ:- ಈಗ ಓಡಿಸಾದ ಗವರ್ನರರಾಗಿರುವ ಡಾ. ಕೈಲಾಸನಾಥ ಕಟಜು ಅವರು ಮಾನ್ಯ ಶ್ರೀ ಸಿ. ರಾಜಗೋಪಾಲಾಚಾರ್ಯರ ಸ್ಥಳದಲ್ಲಿ ಪಶ್ಚಿಮ ಬಂಗಾಲದ ಗವರ್ನರರಾಗಬೇಕು. ಡಾ. ಕೈಲಾಸನಾಥ ಕಟಜು ಅವರ ಸ್ಥಳದಲ್ಲಿ ವಾಶಿಂಗಟನ್ನದಲ್ಲಿ ಹಿಂದಿ ರಾಯಭಾರಿಗಳಾಗಿದ್ದ ಶ್ರೀ ಅಸಫ ಅಲ್ಲಿ ಅವರನ್ನು ಓಡಿಸಾದ ಗವರ್ನರರನ್ನಾಗಿ ನೇಮಿಸಿರುತ್ತದೆ.

ಮುಂಬೈ ಉಚ್ಚ ಅಧಿಕಾರಿಗಳ ಸಭೆ

ಪೋಲೀಸ ಹಾಗೂ ಸೈನ್ಯ ಶಾಖೆಯ ಉಚ್ಚ ಅಧಿಕಾರಿಗಳ ಸಭೆಯು ತಾ. ೧೨ ರಂದು ಬೆಳಿಗ್ಗೆ ಸಿವಿಲ್ ಸೆಕ್ರೆಟರಿಯೆಟದಲ್ಲಿ ಸೇರಿತ್ತು. ಈ ಸಭೆಯ ಚರ್ಚೆಯ ವಿಷಯವನ್ನೆಲ್ಲ ಗೌಪ್ಯವಾಗಿಡಲಾಗಿದ್ದರೂ ಹೈದರಾಬಾದದ ಗಡಿಪ್ರದೇಶದ ಮುಂಬಯಿ ಪ್ರಾಂತದ ಪ್ರದೇಶದಲ್ಲಿದ್ದ ಪರಿಸ್ಥಿತಿ, ಅಲ್ಲಿಯ ಜನರ ಸಂರಕ್ಷಣೆಯ ವ್ಯವಸ್ಥೆ ಈ ವಿಷಯಗಳು ಚರ್ಚಿಸಲ್ಪಟ್ಟವೆಂದು ತಿಳಿಯುತ್ತದೆ. ಈ ಸಭೆಗೆ ಮುಂಬಯಿಯ ಮುಖ್ಯಮಂತ್ರಿ ಶ್ರೀ ಬಿ.ಜಿ. ಖೇರರೂ ಮುಂಬಯಿ ವಿಭಾಗದ ಜನರಲ್ ಕಮಾಂಡಿಂಗ ಅಫೀಸರರಾದ ಮೇಜರ ಜನರಲ ಬ್ರಾರ, ಮುಂಬಯಿಯ ಪೋಲೀಸ ಇನ್‌ಸ್ಪೆಕ್ಟರ ಜನರಲ್‌ರಾದ ಶ್ರೀ ಎನ್ ಎಂ ಕಾಮಟೆ ಹಾಗೂ ಮುಂಬಯಿ ಸರಕಾರದ ಚೀಫ ಸೆಕ್ರೆಟರಿ ಇವರೇ ಮೊದಲಾದವರು ಬಂದಿದ್ದರು.

ವಿದ್ಯಾರ್ಥಿಗಳಿಗೆ ಒತ್ತಾಯದ ಸೈನ್ಯ ಶಿಕ್ಷಣ

ಇಂದೂರ ಸಂಸ್ಥಾನದ ಶಾಲೆ ಕಾಲೇಜುಗಳಲ್ಲಿ ಸೈನ್ಯ ಶಿಕ್ಷಣವು ಒತ್ತಾಯದ್ದಾಗಿ ಮಾಡಲ್ಪಟ್ಟಿದ್ದು ಅದಕ್ಕಾಗಿ ತಾ. ೧೧ ರಂದು ಇಂದೂರ ಸರಕಾರವು ೩ ಲಕ್ಷ ರೂಪಾಯಿ ಮಂಜೂರ ಮಾಡಿತು. ಈ ಶಿಕ್ಷಣಕ್ಕೆ ಶಿಕ್ಷಕರನ್ನು ಸಿದ್ಧಗೊಳಿಸಲು ಇಂದೂರಿನಲ್ಲಿ ಒಂದು ಶಿಬಿರವನ್ನು ತೆರೆಯಲಾಗಿದೆ. ಆಗಲೇ ೧೨೫ ಶಿಕ್ಷಕರು ಶಿಕ್ಷಣ ಪಡೆದು ಸಿದ್ಧರಾಗಿದ್ದಾರೆ. ಜುಲೈ ೧ ನೇ ತಾ. ನಿಂದ ೮ ನೆಯ ಮತ್ತು ಅದರ ಮೇಲಿನ ವರ್ಗಗಳಲ್ಲಿ ಸೈನ್ಯ ಶಿಕ್ಷಣವು ಪ್ರಾರಂಭವಾಗಲಿದೆ.

ಪೋಲೀಸರ ಪಟ್ಟಿಗಳು

ಪೋಲೀಸನು ತನ್ನ ಕೆಲಸದ ಮೇಲೆ ಇರುವನೋ ಇಲ್ಲವೊ ಎಂಬುದನ್ನು ಸಾರ್ವಜನಿಕರಿಗೆ ಸ್ಪಷ್ಟವಾಗಿ ತೋರಿಸಿಕೊಡಲು ಇನ್ನು ಮೇಲೆ ಅವನು 'ಕಾರ್ಯಪಟ್ಟಿ' ವನ್ನು ಧರಿಸುವನು. ಈ 'ಕಾರ್ಯಪಟ್ಟಿ'ವು ಹಳದಿ ಮತ್ತು ನೀಲಿಗೆರೆಗಳಿಂದ ಕೂಡಿದ್ದು ಕೆಲಸದ ಮೇಲಿದ್ದಾಗಲೆಲ್ಲ ಈ ಪಟ್ಟವು ಪೋಲೀಸನ ಎಡ ತೋಳಿನ ಮೇಲೆ ಧರಿಸಲ್ಪಡುವದು.

ಏಶಿಯದ ಆರ್ಥಿಕ ಸಮಿತಿಯ ಸಭೆ

ಉದಕಮಂಡಲದಲ್ಲಿ ಅಂತಾರಾಷ್ಟ್ರೀಯ ಸಂಘದ ಶಾಖೆಯಾದ ಏಶಿಯದ ಆರ್ಥಿಕ ಸಮಿತಿಯ ಸಭೆ ಸೇರಿದ್ದು ಸುವೇದ್ಯವಿದೆ. ಅದರಲ್ಲಿ ಇಂಗ್ಲೆಂಡು, ಅಮೇರಿಕ, ಫ್ರಾನ್ಸ್, ನೆದರ್‌ಲೆಂಡ್ಸ್, ರಶಿಯ, ಚೀನ, ಭಾರತ, ಫಿಲಿಪ್ಪೈನ್ಸ್, ನ್ಯೂಜಿಲೆಂಡ್, ಬ್ರಹ್ಮದೇಶ, ಆಸ್ಟ್ರೇಲಿಯ, ಪಾಕಿಸ್ತಾನ ಮುಂತಾದ ರಾಷ್ಟ್ರಗಳ ಪ್ರತಿನಿಧಿಗಳು ಬಂದಿದ್ದರು.

ಇಂಡೊನೇಶಿಯಕ್ಕೆ ಪ್ರಾತಿನಿಧ್ಯ ಕೊಡುವ ಪ್ರಶ್ನೆಯೆದ್ದು ಪಾಶ್ಚಾತ್ಯ ರಾಷ್ಟ್ರಗಳ ವಿರೋಧ ಮತ್ತು ಪೌರಸ್ತ್ಯರ ಅನುರೋಧ ಇವುಗಳ ಘರ್ಷಣದಿಂದ ಮುಂದಿನ ಸಭೆಯ ವರೆಗೆ ಈ ಪ್ರಶ್ನೆಯನ್ನು ಮುಂದೂಡಬೇಕೆಂದು ನಿರ್ಣಯಿಸಲಾಯಿತು.

ಏಶಿಯದ ಆರ್ಥಿಕೋನ್ನತಿಯಲ್ಲಿ ಆಸಕ್ತಿಯಿದ್ದರೂ ರಶಿಯವು ಯಾವ ಯೋಜನೆಯನ್ನೂ ಮುಂದೆ ತಂದಿಲ್ಲವೆಂದು ಚೀನೀ ಪ್ರತಿನಿಧಿ ಹೇಳಿದ್ದಕ್ಕೆ ಉತ್ತರವಾಗಿ ರಶಿಯದ ಪ್ರತಿನಿಧಿಯು ಅಮೇರಿಕದಂತೆ ಅನ್ಯರ ಮೇಲೆ ಅಧಿಕಾರ ನಡೆಸುವ ದುರ್ಬುದ್ಧಿಯಿಲ್ಲವಾದುದರಿಂದ ತಾವು ಮಾರ್ಶಲ್ ಯೋಜನೆಯಂಥ ಯೋಜನೆಯನ್ನು ತಯಾರಿಸಿಲ್ಲವೆಂದೂ ಪೂರ್ವಯುರೋಪಿಗಿದ್ದಂತೆ ಏಶಿಯನ್ನರಿಗಾದರೂ ಕೇಳಿದಲ್ಲಿ ಎಂಥ ಸಹಾಯನ್ನು ಬೇಕಾದರೂ ರಶಿಯವು ಕೊಡಲು ಸಿದ್ಧವಿದೆಯೆಂದೂ ಹೇಳಿದನು.

ಔದ್ಯಮಿಕ ವೃದ್ಧಿಯ ಬಗ್ಗೆ ಇರುವ ಸಮಿತಿಯು ಜೂನ್ ೧೧ ರಲ್ಲಿ ಏಶಿಯ ಮತ್ತು ದೂರ ಪ್ರಾಚ್ಯದ ದೇಶಗಳಿಗೆ ಮೂಲಭೂತ ಔದ್ಯಮಿಕ ಯಂತ್ರಸಾಧನಗಳನ್ನು ಮುಂಬರಿದ ರಾಷ್ಟ್ರಗಳಿಂದ ತರಿಸಬೇಕೆಂಬ ಠರಾವನ್ನು ಪಾಸು ಮಾಡಲಾಯಿತು.

ಜೂನ ೧೨ ರಲ್ಲಿ ಪರಿಷತ್ತು ಕೊನೆಗಂಡಿತು. ಡಾ. ಜಾನ್‌ಮಥಾಯಿಯವರು ಉಪಸಂಹಾರ ಭಾಷಣದಲ್ಲಿ ಪರಿಷತ್ತು ಯಶಸ್ವಿಯಾಯಿತೆಂದು ಅಭಿಪ್ರಾಯಪಟ್ಟರು. ಸಮಿತಿಯು ಏಶಿಯದ ರಾಜ್ಯಗಳ ಹಿತದೃಷ್ಟಿಯಿಂದ ಉತ್ಪಾದಕ ದೇಶಗಳಿಗೆಲ್ಲ ಸಾಮಾನುಗಳ ಬೆಲೆಯನ್ನು ಆಯಾತ ನಿರ್ಯಾತಗಳೆರಡರಲ್ಲೂ ಇಳಿಸಬೇಕೆಂದು ಕೇಳಿಕೊಳ್ಳುವ ಗೊತ್ತುವಳಿಯನ್ನು ಸ್ವೀಕರಿಸಿತು. ಆಹಾರ ಸಮಿತಿಯ ವರದಿಯನ್ನು ಸಮಿತಿ ಅಂಗೀಕರಿಸಿತು.

ಮೂಲಭೂತ ಯಂತ್ರಸಾಮಗ್ರಿಗಳ ಆಯಾತ; ಆರ್ಥಿಕ, ಔದ್ಯಮಿಕ, ಸಾಹಸ; ವಿಶೇಷತಃ ವಿದ್ಯುಚ್ಛಕ್ತಿ, ಪೆಟ್ರೋಲುಗಳ ಪೂರೈಕೆಯ ಬಗ್ಗೆ ಪರ್ಯಾಲೋಚನೆ; ಕೃಷಿ ಸಾಧನಗಳು, ವಾಹನಗಳು ಮುಂತಾದವುಗಳ ಪೂರೈಕೆ; ಮೂಲ ದ್ರವ್ಯಗಳು ಮತ್ತು ದೊಡ್ಡ ದೊಡ್ಡ ಎಂಜಿನು ಮುಂತಾದವುಗಳ ವಿಕ್ರಯ ಇವುಗಳ ಬಗ್ಗೆ ನಿರ್ಣಯಗಳನ್ನು ಸಮಿತಿ ಸ್ವೀಕರಿಸಿತು. ಮನೆಯ, ಸಣ್ಣ ಸರಕಿನ, ನಡುಮಟ್ಟದ ಮತ್ತು ದೊಡ್ಡ ಉದ್ಯಮಗಳಲ್ಲಿ ಹೊಂದಿಕೆಯಿರಬೇಕೆಂದು ಸಮಿತಿ ಸಾರಿತು. ಇದರಲ್ಲಿ ಭಾರತವು ಮುಖ್ಯ ಪಾತ್ರ ವಹಿಸಿತು. ಸಾಮ್ರಾಜ್ಯವಾದಿಗಳು ಹೇಗೆ ಏಶಿಯದ ರಾಜ್ಯಗಳಲ್ಲಿ ಉದ್ಯಮಪ್ರಗತಿಯಾಗದಂತೆ ಮಾಡಿದವೆಂಬುದನ್ನು ರಶಿಯದ ಪ್ರತಿನಿಧಿ ಚೆನ್ನಾಗಿ ವಿವರಿಸಿದನು. ಈ ಎಲ್ಲ ಕಾರ್ಯಗಳಿಂದ ಏಶಿಯದ ಆರ್ಥಿಕ ಮತ್ತು ಔದ್ಯಮಿಕ ಪ್ರಗತಿಯ ಬಗ್ಗೆ ಕೆಲಸ ಮಾಡಲು, ಸಮಿತಿಗೆ ಹೆಚ್ಚು ಅನುಕೂಲ ಒದಗಿತು.

ಕರ್ಮವೀರ ೨೧ ಜೂನ ೧೯೪೮

Reg No. B. 3148

LICENCE No. 3
Licenced to Post without Prepayment

KARMAVEER 21-6-48

ಪುಸ್ತಕ ಪರಿಚಯ

(ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿಯೇ ತೀರುವೆವೆಂದು ಗ್ರಹಿಸಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ. —ಸಂ.)

ರೈತರ ಹುಡುಗಿ

ಅನುವಾದಕರು, ಎಂ. ಗೋಪಾಲ ಕೃಷ್ಣ ಅಡಿಗ. ಪ್ರಕಾಶಕರು, ವಿಶ್ವ ಸಾಹಿತ್ಯ, ಮೈಸೂರು. ಪುಟಗಳು, ೧೧೭. ಬೆಲೆ ಸಾದಾ ಪ್ರತಿ ೧ ರೂ. ಕ್ಯಾಲಿಕೊ ಪ್ರತಿ ೨ ರೂ.

ರೈತರ ಹುಡುಗಿ ಎಂಬ ಹೆಸರಿಟ್ಟುಕೊಂಡ ಈ ಪುಸ್ತಕವು ವಿಶ್ವಸಾಹಿತ್ಯ ಮಾಲೆಯ ೩ ನೆಯ ಕುಸುಮ. ಇದರಲ್ಲಿ ವಿಶ್ವವಿಖ್ಯಾತ ನಾದ ಫ್ರಾನ್ಸಿನ ಮೊಪಾಸಾನ ಮೂರು ಕತೆ ಗಳು ಅನುವಾದಿತವಾಗಿ ಪ್ರಕಟವಾಗಿವೆ. 'ದಿ ಸ್ಟೋರಿ ಆಫ್ ಎ ಫಾರ್ಮ ಗರ್ಲ್' ಎಂಬು ದು 'ರೈತರ ಹುಡುಗಿ' ಯೆಂದೂ 'ದಿ ಯೂಸ ಲೆಸ್ ಬ್ಯೂಟಿ' ಎಂಬುದು 'ವ್ಯರ್ಥವಾದ ಸೌಂದರ್ಯ'ವೆಂದೂ 'ದಿ ಬಾಲ್ ಆಫ್ ಫ್ಯಾಟ್' ಎಂಬುದು 'ಬೆಣ್ಣೆಯ ಮುದ್ದೆ' ಎಂದೂ ನಾಮಕರಣ ಹೊಂದಿವೆ. ಎಲ್ಲ ಕತೆ ಗಳಲ್ಲಿಯೂ ಕುತೂಹಲತೆಯನ್ನು ಹುಟ್ಟಿಸುವ ಗುಣವಿದೆ. ಹೆಣ್ಣು ಬಹುಮುಖ ಸಮಸ್ಯೆ ಎಂಬುದನ್ನು ಸರಿಯಾಗಿ ಅರಿಯಬೇಕಾದರೆ ಮೋಪಾಸಾನ ಸಾಹಿತ್ಯವನ್ನು ಅವಲೋಕಿಸ ಬೇಕು. ಈ ಪುಸ್ತಕದಲ್ಲಿ ಬಳಕೆಯಾದ ಭಾಷೆ ಚನ್ನಾಗಿದ್ದು ಶೈಲಿಗೆ ಒಂದು ಸ್ವಾದವಿದೆ.

ಉಷಾ ಸ್ವಪ್ನ

ಬರೆದವರು ಶ್ರೀ ಎಸ್. ಅನಂತ ನಾರಾಯಣ. ಪ್ರಕಾಶಕರು ಉಷಾ ಸಾಹಿತ್ಯ ಮಾಲೆ, ಮೈಸೂರು. ಪುಟ ೭೦, ಬೆಲೆ ರೂ. ೧.

ಈ ಕವನಸಂಗ್ರಹ ಒಳ್ಳೆಯ ಕವನಗಳಿಂದ ಕೂಡಿದೆ. ಬಂಧದಲ್ಲಿ ಸಾಮರಸ್ಯವಿದೆ. ಭಾವ ದಲ್ಲಿ ಕಾವ್ಯ ಮಾಯೆ ಬೇಕಾದಷ್ಟು ಪ್ರಮಾ ಣದಲ್ಲಿದೆ. ಶೈಲಿ ಸರಳವಾದುದು. ಹೊಸ ಉಕ್ತಿ ವಿಲಾಸಾದಿಗಳ ವಿಶೇಷ ಪ್ರತಿಭಾ ನಿದ ರ್ಶಕ ಅಂಶಗಳಿಲ್ಲವಿದ್ದರೂ ಸಾಕಷ್ಟು ಹದ ಗೊಳ್ಳುವ ಮುಂಗುರುಹನ್ನು ಈ ಕವನಗಳಲ್ಲಿ ಕಾಣಬಹುದು.

ವಿಜ್ಞಾನ ವಿಶ್ವಾಮಿತ್ರ

ಬರೆದವರು ಶ್ರೀ ಎನ್. ಎಸ್. ವೀರಪ್ಪನವರು. ಪ್ರಕಾಶಕರು ಎಸ್. ಎಸ್. ಎನ್. ಬುಕ್ ಡಿಪೋ ಬೆಂಗ ಳೂರು. ಪುಟ ೫೫. ಬೆಲೆ ೮ ಆಣೆ.

ವಾಕ್ಯಶೈಲಿ ಶುದ್ಧವಿದೆ; ಇಲ್ಲಿ ಗೀತತ್ವ ವುಂಟು. ಕವನಗಳ ಓಟ ನೇರವಾಗಿದೆ. ಇವರ ಕೈಯಿಂದ ಇನ್ನೂ ಹೆಚ್ಚಿನ ಕಲಾಕೌಶ ಲ್ಯವನ್ನು ಅಪೇಕ್ಷಿಸಬಹುದು.

ಇಂಚರ

ಬರೆದವರು ಶ್ರೀ ಮಣ್ಣೂರ ಮಹಿ ಪತಿ ಕೃಷ್ಣ. ಪ್ರಕಾಶಕರು ಶ್ರೀ ಜಿ. ಗೋ. ಮಳ್ಳಿಗೇರಿ ಜಮಖಂಡಿ ಪುಟ ೨೯. ಬೆಲೆ ಎಂಟಾಣೆ.

ಇಂದು ಕವಿಯಾಗಬಯಸುವವರೊಬ್ಬರ ಪ್ರಾಥಮಿಕ ಪ್ರಯತ್ನವಿದ್ದಂತೆ ತೋರುತ್ತದೆ.

ಗಾಂಧೀ ಗಾಥಾ

ಲೇ॥ ಶ್ರೀ ಜಿ. ರಾಮಚಂದ್ರನ್ ಅನುವಾದ ಶ್ರೀ ರುದ್ರನಾರಾಯಣ ಶುಕ್ಲ ಪ್ರಕಾಶಕರು ಹಿಂದ ಕಿತಾಬ್ಸ ಲಿ. ೨೬೧—೬೩ ಹಾರ್ನಬಿ ರೋಡ, ಮುಂಬಯಿ ಪುಟ ೯೬ ಬೆಲೆ ರೂ ೧.

"ಗಾಂಧೀ ಅನೆಕ್‌ಡೋಟ್ಸ್" (ಎಂದರೆ ಗಾಂಧೀ ಪ್ರಸಂಗಗಳು) ಎಂಬ ಶ್ರೀ ರಾಮ ಚಂದ್ರನ್ನರ ಇಂಗ್ಲೀಷ ಪುಸ್ತಕದ ಹಿಂದೀ ಅನುವಾದವಿದು. ಗಾಂಧೀಜಿಯ ಜೀವನದಲ್ಲಿ ಅವರ ನಡೆವಳಿಯ ಮೇಲೆ ಬೆಳಕು ಚೆಲ್ಲುವ ಅನೇಕ ಘಟನೆಗಳು ನಡೆದಿದ್ದು ಅವುಗಳಲ್ಲಿ ಕೆಲವನ್ನು ಆಶ್ರಮ ವಾಸಿಗಳಾದ ಶ್ರೀ ರಾಮ ಚಂದ್ರನ್ನರು ನೆನಪಿನಿಂದ ಸಂಗ್ರಹಿಸಿ ಇಲ್ಲಿ ಕೊಟ್ಟಿದ್ದು ಉಪಯುಕ್ತವಾಗಿದೆ. ಪ್ರಕಾಶ ಕರು ಈ ಪುಸ್ತಕದ ಅನುವಾದಗಳನ್ನು ವಿವಿಧ ಭಾರತೀಯ ಭಾಷೆಗಳಲ್ಲಿ ಪ್ರಕಟಿಸುವ ವ್ಯವಸ್ಥೆ ಮಾಡಿರುವರೆಂದು ತಿಳಿಯುತ್ತದೆ.

Light Unto a Cell: By Jagat Narayanlal, Published by Hind Kitabs Ltd. 261-63 Hornby Road Bombay. 110pp Rs. 2/8

೧೯೪೨ ರಲ್ಲಿ ಅ. ಭಾ. ಕಾಂಗ್ರೆಸ್ಸಿನಲ್ಲಿ ಪ್ರಸಿದ್ಧ "ಅಖಂಡ ಭಾರತ" ಗೊತ್ತುವಳಿ ಯನ್ನು ಮಂಡಿಸಿ ಕಾಂಗ್ರೆಸ್ ನಾಯಕರ ಅಭಿಮತದ ವಿರುದ್ಧ ಅದನ್ನು ಪಾಸು ಮಾಡಿ ಸಿಕೊಂಡ ವೀರ ಜಗತ ನಾರಾಯಣಲಾಲರು ಇಲ್ಲಿ ತಮ್ಮ ಅನೇಕ ಸೆರೆಮನೆ ವಾಸಗಳಲ್ಲಿ ಒದಗಿದ ಅನುಭವಗಳನ್ನು ಜಗತ್ತಿನ ಮುಂದಿರಿ ಸಿದ್ದಾರೆ. ಬಿಹಾರದ ಕಾಂಗ್ರೆಸ್ ಮತ್ತು ಹಿಂದೂ ಮಹಾಸಭಾ ಚಟುವಟಿಕೆಗಳಲ್ಲಿ ಪ್ರಮುಖ ಭಾಗವಹಿಸಿದ, ೧೯೩೭ ರ ಬಿಹಾರ ಸರಕಾರದಲ್ಲಿ ಉಪಮಂತ್ರಿಗಳಾಗಿದ್ದ, ಅನೇಕ ಸಮಾಜಿಕ ಕಾರ್ಯಗಳ ನೇತೃಗಳಾದ ಮತ್ತು ಇಂದಿಗೂ ಬಿಹಾರ ಶಾಸನ ಸಭೆ ಮತ್ತು ಹಿಂದೀ ಘಟನಾ ಸಮಿತಿಯ ಸದಸ್ಯರಾದ ಜಗತ ನಾರಾಯಣರು ಇಲ್ಲಿ ತಮ್ಮ ರಾಜ ಕೀಯ ಜೀವನವನ್ನು ಚಿತ್ರಿಸಿರಬಹುದೆಂದು ಯಾರಾದರೂ ತರ್ಕಿಸಬಹುದು. ಆದರೆ, ವಿಚಿ ತ್ರವೆಂದರೆ, ಅವರು ಹಾಗೆ ಮಾಡದೆ ತಮ್ಮ ಆಧ್ಯಾತ್ಮಿಕ ಅನುಭೂತಿಗಳನ್ನು ತಿಳಿಸಲು ಯತ್ನಿಸಿದ್ದಾರೆ. ಸೆರೆಮನೆಗೆ ಕಾಲಕಾಲಕ್ಕೆ ಯಾತ್ರೆ ಮಾಡುವ ರೂಢಿ ಜಗತ ನಾರಾಯ ಣರಿಗೆ ೧೯೩೦ ರಿಂದಲೆ ಬಿದ್ದಿತ್ತು ಮತ್ತು ಆಗಲೇ ಆಧ್ಯಾತ್ಮಿಕ ಸಾಧನೆಯ "ಹುಚ್ಚು" ಹಿಡಿದುದು. ಕೃಷ್ಣ ಪರಮಾತ್ಮನ ಭಕ್ತಿಯ ಮೂಲಕ ಅದ್ವೈತ ಸಾಧನೆಯನ್ನು ಅವರು ಮಾಡಿದರು. ಸ್ವಾಮಿ ರಾಮತೀರ್ಥರನ್ನನು ಸರಿಸಿ ಓಂಕಾರ ಮೂಲಕ ಸಾಕ್ಷಾತ್ಕಾರದ ದಾರಿ ಹಿಡಿದರು. ಪರಮಾತ್ಮನ ಕೈಯಲ್ಲಿ ತನ್ನ ಸರ್ವಸ್ವವನ್ನು ಅರ್ಪಿಸಿದರು, ಈಶೋ ಪನಿಷತ್ತಿನ ವಿದ್ಯೆ,ಅವಿದ್ಯೆಗಳ ವಿವೇಚನೆಯಿಂ ದಲೂ ಬೆಳಕು ಕಂಡರು. ಒಟ್ಟಿನ ಮೇಲೆ ಪರ ಮಾತ್ಮನ ಅನುಗ್ರಹದಿಂದ ಅವರು ಆಧ್ಯಾತ್ಮಿಕ ಪ್ರಕಾಶವನ್ನು ಕಂಡರು. ಇದೀಗ ಲೇಖಕರು ಈ ಪುಸ್ತಕದಲ್ಲಿ ಓದುಗರಿಗೆ ಮನವರಿಕೆ ಮಾಡಿ ಕೊಡಲು ಹಾಗು "ತಮ್ಮಂಥ ಸ್ಥಿತಿಯಲ್ಲಿ ಸಿಲು ಕಿದವರಿಗೆ ದಾರಿ ತೋರಲು" ಮಾಡಿರುವ ಪ್ರಯತ್ನ. ಆದರೆ ಈ ಪ್ರಯತ್ನದಲ್ಲಿ ಅವರು ಎಷ್ಟು ಯಶಸ್ವಿಯಾಗಿದ್ದಾರೆಂಬ ಮಾತು ಬೇರೆ. "ಸ್ಕೆಪ್ಟಿಕ್" ಅಥವಾ "ಸಂಶಯಾತ್ಮ" ನೆಂಬ ಬಿರುದು ತನಗೆ ಬರುವ ಭಯವಿದ್ದರೂ ಪ್ರಸ್ತುತ ವಿಮರ್ಶಕನು ಶ್ರೀ ಜಗತ ನಾರಾಯ ಣರಿಗೆ ದೊರೆತವೆಂದು ಅವರು ಭಾವಿಸಿರುವ ಅನುಭೂತಿಗಳು ಕೇವಲ ಮಾಯೆಯೆಂದು ಶಂಕಿಸುತ್ತಾನೆ. ಮೊದಲನೆಯದಾಗಿ ಲೇಖಕ ರಿಗೆ ದೊರೆತ ಅನುಭೂತಿಗಳೆಲ್ಲ ಸೆರೆಮನೆಯ ಅಸಹ್ಯ ಏಕಾಕಿತೆಯಲ್ಲಿ ದೊರೆತವು; ಮತ್ತು ಅವರು ಹೊರಗೆ ಬಂದೊಡನೆ ರಾಜಕಾರಣದಲ್ಲಿ ಮಾತ್ರವಲ್ಲ, ಸಂಸಾರದಲ್ಲಿ ಕೂಡ—ಅದನ್ನು ತ್ಯಜಿಸುವ ಅವಕಾಶವನ್ನು ದೇವರು ಒದಗಿಸಿ ದ್ದರೂ—ಕಂಠಮಟ್ಟ ಧುಮುಕಿ ಆಧ್ಯಾತ್ಮವನ್ನು ಮರತೇಬಿಡುತ್ತಾರೆ. ಎರಡನೇದಾಗಿ ಬೆಳಕು ಕಂಡವನನ್ನು ಬಿಡಿರಿ—ಅದರ ಸಮೀಪಕ್ಕೆ ಹೋ ದವನು ಕೂಡ ಖಂಡಿತವಾಗಿ ಮರೆಯಲೇ ಬೇಕಾದ "ಅಹಂಕಾರ" ಲೇಖಕರನ್ನು ಇನ್ನೂ ಬಿಟ್ಟಿಲ್ಲ. ಒಮ್ಮೆ ಸಾರ್ವಜನಿಕ ಕಾರ್ಯಕ್ಕಾಗಿ ಲೇಖಕರು ಹಣ ಕೂಡಿಸಲೆಂದು ಹೋದಾಗ ದಾನಶೂರನೆಂದು ಡಂಬ ಕೊಚ್ಚುತಿದ್ದ ಜಮೀ ನುದಾರನೊಬ್ಬ ಅಲ್ಪದ್ರವ್ಯವನ್ನು ಕೊಡಬಂದ ನಂತೆ. ಅದರಿಂದ ಸಂತಪ್ತರಾಗಿ ಲೇಖಕರು ಅವನಿಂದ ಏನನ್ನೂ ತೆಗೆದುಕೊಳ್ಳದೆ ಹೊರಟು ಹೋದರು. ಕೆಲದಿನಗಳಲ್ಲಿ ಆ ದುರ್ಭಾಗ್ಯನು ಕಾಲರಾಕ್ಕೆ ತುತ್ತಾದನು. ಆದರೆ ಲೇಖಕರು ಆ ಬಗ್ಗೆ ಏನು ಹೇಳುವರು ಗೊತ್ತೆ? ತಮ್ಮ ಸಂತಾಪವೇ ಅವನ ಮೃತ್ಯುವಿಗೆ ಕಾರಣ ವಾಗಿರಬಹುದೇ ಎಂದು ಅವರು ಆಶ್ಚರ್ಯಪಟ್ಟ ರಂತೆ! ಸಾಧಕನನ್ನು ಅಧಃಪಾತಕ್ಕೆ ಎಳೆಯಲು ಇಂಥ ಮನೋಭಾವವೊಂದೇ ಸಾಕೆಂದು ಅಧ್ಯಾತ್ಮ ಗ್ರಂಥಗಳು ಸಾರಿ ಸಾರಿ ಹೇಳು ತ್ತವೆ. ಪರಮಾತ್ಮನು ತಮ್ಮಲ್ಲಿಟ್ಟ ಅನುಗ್ರಹದ ಬಗ್ಗೆಯೂ ಲೇಖಕರಿಗೆ ಕ್ಷುದ್ರ ಕಲ್ಪನೆಯು ದ್ದಂತೆ ಕಾಣುತ್ತದೆ. ಒಮ್ಮೆ ಸೆರೆಮನೆಯಲ್ಲಿ ಅವರಿಗೆ ಮಾವಿನಹಣ್ಣು ತಿನ್ನುವ ಆಸೆ ಆಯಿ ತಂತೆ! ಮರುದಿನವೇ ಇನ್ನೊಬ್ಬ ಸೆರೆಮನೆ ಗೆಳೆಯ ತಾನು ತರಿಸಿದ ಉತ್ತಮ ಮಾವಿನ ಹಣ್ಣುಗಳನ್ನು ಅವರಿಗೆ ಕಳಿಸುತ್ತಾನೆ. ದೇವರೇ ತಮ್ಮ ಆಸೆ ಪೂರೈಸಿದನೆಂದು ಅವರ ಭಾವನೆ. ಶ್ರೀ ಜಗತನಾರಾಯಣರು ಅತ್ಯಂತ ಪ್ರಾಮಾಣಿ ಕತೆಯಿಂದಲೆ ಇದನ್ನು ಬರೆದಿರಬಹುದಾದರೂ ಅವರನ್ನನುಸರಿಸುವವನು ಸ್ವಲ್ಪ ಧೈರ್ಯಶಾ ಲಿಯೇ ಇರಬೇಕೆಂದು ಖಂಡಿತವಾಗಿ ಹೇಳಬ ಹುದು.

ವಾರದ ಭವಿಷ್ಯ

(೧೩ ನೆಯ ಪುಟದಿಂದ)

ತುಲಾ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಮಕ್ಕ ಳಿಗೆ ಕ್ಲೇಶ ಮತ್ತು ಹೆಂಡತಿಗೆ ನಿತ್ಯ ವಿರೋಧ. ಪ್ರತಿಯೊಬ್ಬರಿಗೆ ಎರಡನೆಯವರ ಪ್ರೇಮದ ಬಗ್ಗೆ ಸಂಶಯ—ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗ ದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಜನರ ಮೇಲೆ ವರ್ಚಸ್ಸು ಕೂಡಿಸುವ ಅನೇಕ ಕೆಲಸ ಗಳಾಗುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಅನುಕೂಲತೆ. ಪ್ರವಾಸಾದಿ ಕೆಲಸ ಹಿತದ್ದು. ಸ್ವಾತಿಗೆ ಹೆಚ್ಚು ಅನುಕೂಲ. ತಾ. ೨೧, ೨೨, ೨೬, ೨೭ ಅನುಕೂಲ.

ಬರುವ ೨ ನೇ ಗುರು ಕೌಟುಂಬಿಕ ಉತ್ಕರ್ಷ ಸತ್ತೆ ಇಲ್ಲವೆ ಪ್ರಭುತ್ವದ ಹೆಚ್ಚಳ. ಮಂಗಲ ಕಾರ್ಯ ಇವುಗಳಿಗೆ ಅನುಕೂಲ. ಆದರೆ ಹೆಂಡತಿಗೆ ಕ್ಲೇಶ ಪುತ್ರ ಮತ್ತು ಭ್ರಾತೃ ವಿರೋಧ. ಶತ್ರುಗಳ ಹೆಚ್ಚಳ. ಮೊದಲಾದ ಫಲಗಳನ್ನು ಕೊಡುವದು.

ವೃಶ್ಚಿಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಸ್ತ್ರೀಸುಖ ಮನಸ್ಸಿನಂತೆ ದೊರೆ ತರೂ ಪರಸ್ತ್ರೀಯ ಅಭಿಲಾಷೆ. ದಿನ ದಿನಕ್ಕೆ ಹೆಚ್ಚುತ್ತ ಹೋಗುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಇತರರ ದೃಷ್ಟಿ ಯಿಂದ ಕುಂದುತ್ತ ನಡೆದಂತಾದರೂ ಪ್ರತ್ಯಕ್ಷ ಅನುಭವದಲ್ಲಿ ಬಹಳ ಉತ್ಕರ್ಷದಲ್ಲಿ ಇರುವ ಯೋಗ. ಗುಪ್ತ ಲಾಭದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನು ಕೂಲ. ಅನುರಾಧಕ್ಕೆ ಹೆಚ್ಚು ಅನುಕೂಲ. ತಾ. ೨೧, ೨೨, ೨೪, ೨೫ ಅನುಕೂಲ.

ಬರುವ ೧ ನೇ ಗುರು ಭಾಗ್ಯ ಸಂತತಿಗಳ ಉತ್ಕರ್ಷ ಸ್ತ್ರೀಸುಖ, ವಾದವಿವಾದಗಳಲ್ಲಿ ಯಶಸ್ಸು. ಇವುಗಳಿಗೆ ಉತ್ತಮ. ಆದರೆ ಕೃಷಿ ಮಾಡುವವರಿಗೆ ಕ್ಲೇಶ ಕೊಡುವಂಥವನಿ ರುವನು.

ಧನು

ಪ್ರಕೃತಿ ಮತ್ತು ಸ್ತ್ರೀಸುಖ ಬಹಳ ಉತ್ತಮ. ಆದರೂ ಪ್ರಾಪಂಚಿಕ ಸುಖ ತೊಂದರೆಯದು ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೂ ವೆಚ್ಚ ಭಾರವಾದ ದ್ದೆನಿಸುವದು. ಮಿತ್ರ ಸುಖ ಅನುಕೂಲ ವರಿ ಷ್ಠರು ಇಲ್ಲವೆ ಆಶ್ರಯದಾತರಿಂದ ಕೆಲ ಸತ್ವ ಪರೀಕ್ಷೆಯ ಪ್ರಸಂಗಗಳು ಮುದ್ದಾಮ ಮಾಡ ಲ್ಪಡುವವು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಭೆಟ್ಟಿ ಮತ್ತು ಪತ್ರವ್ಯವ ಹಾರಕ್ಕಿಂತ ಪ್ರವಾಸ ಅನುಕೂಲ. ಪೂರ್ವಾಷಾ ಢಾಕ್ಕೆ ತೊಂದರೆ ಕಡಮೆ. ತಾ. ೨೧, ೨೨, ೨೪, ೨೫ ಅನುಕೂಲ.

ಬರುವ ೧೨ ನೇ ಗುರು ಮಕ್ಕಳಿಗೆ ಕ್ಲೇಶ ಶುಭಾಶುಭ ಸಂಗತಿಗಳು ನಿರಂತರ ವೆಚ್ಚ, ಅನೇಕರೊಡನೆ ವೈರ ಕೇವಲ ಈರ್ಷೆ ಇಲ್ಲವೆ ವರ್ಚಸ್ಸಿಗಾಗಿ ವಿಪ ರೀತ ತೊಂದರೆ ಮತ್ತು ಇಮ್ಮಡಿ ವೆಚ್ಚ ಸಹಿ ಸುವ ಸರತಿ. ಜಗದಗಿ ರಖರಖಿ ಮೊದಲಾದ ಫಲಗಳನ್ನು ಕೊಡುವನು.

ಮಕರ

ಪ್ರಕೃತಿ ಉತ್ತಮ ಆದರೆ ಹೆಂಡತಿ ಮತ್ತು ಮಕ್ಕಳಿಂದ ಮೇಲಿಂದ ಮೇಲೆ ಉಪಹಾಸ ಪ್ರಾಪಂಚಿಕ ಸುಖದಲ್ಲಿ ಬಹಳ ವಿರಸ ಉದ್ಯೋಗದಲ್ಲಿ ಲಾಭ ಅನುಕೂಲ, ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಅಷ್ಟಕ್ಕಷ್ಟೆ. ಪ್ರತಿಯೊಂದು ವಿಷಯದಲ್ಲಿ ಚಿಕೇರಿ ಮತ್ತು ಬುದ್ಧಿಭ್ರಂಶ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು ಪ್ರವಾ ಸಾದಿ ಕೆಲಸ ಕಠಿನ. ಆದರೆ ಶ್ರವಣಾಕ್ಕೆ ತೊಂದರೆ ಕಡಮೆ. ತಾ. ೨೪, ೨೫, ೨೬, ೨೭ ಅನುಕೂಲ.

ಬರುವ ೧೧ ನೇ ಗುರು ಲಾಭ ಮಿತ್ರ ಸುಖ ಮಕ್ಕಳ ಉತ್ಕರ್ಷ, ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಯಶಸ್ಸು ಬಂಧು ವರ್ಗದವರ ಉನ್ನತಿ ಇವುಗಳಿಗೆ ಉತ್ತಮನಿರುವನು.

ಕುಂಭ

ಪ್ರಕೃತಿ ಸಾಧಾರಣವೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ ಆದರೆ ಪ್ರತಿ ಯೊಂದರಲ್ಲಿ ಹೆಂಡತಿಯ ವರ್ಚಸ್ಸೆ ಬಹಳ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಯಶಸ್ಸು. ಬೌದ್ಧಿಕ ಸ್ಪರ್ಧೆಯಲ್ಲಿ ಬಹಳ ಉಚ್ಚಾಂಕ. ಪ್ರವಾಸಾದಿ ಕೆಲಸಗಳು ಹಿತ ಕರ. ಶತತಾರಿಕೆಗೆ ಹೆಚ್ಚು ಅನುಕೂಲ. ತಾ. ೨೧, ೨೨, ೨೬, ೨೭ ಅನುಕೂಲ.

ಬರುವ ೧೦ ನೇ ಗುರು ಪ್ರಭುತ್ವ, ಸತ್ತಾ ಲೌಕಿಕ ಮತ್ತು ಕೌಟುಂಬಿಕ ಉತ್ಕರ್ಷ ಇವು ಗಳಿಗೆ ಅನುಕೂಲ. ಆದರೆ ಹೆಂಡತಿಗೆ ಕ್ಲೇಶ. ಶತ್ರುಗಳ ಹೆಚ್ಚಳ ಬಂಧು ವರ್ಗದವರು. ಮಿತ್ರರು ಮತ್ತು ಮಕ್ಕಳು ಇವರೊಡನೆ ವಿರೋಧ ಮೊದಲಾದ ಫಲಗಳನ್ನು ಕೊಡುವನು.

ಮೀನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಬಹಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ಪ್ರತಿ ಯೊಂದು ಕೆಲಸದಲ್ಲಿ ಅಲ್ಪಾಯಾಸದಿಂದ ಯಶಸ್ಸು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ. ಪ್ರವಾಸಾದಿ ಕೆಲಸದಲ್ಲಿ ಅಲ್ಪಾಯಾಸ ದಿಂದ ಯಶಸ್ಸು ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ವಿಜಯ. ಪ್ರವಾಸಾದಿ ಕೆಲಸ ಹಿತದ್ದು. ಉತ್ತರಾಭಾದ್ರಪದಕ್ಕೆ ಹೆಚ್ಚು ಅನುಕೂಲ. ತಾ. ೨೧, ೨೨, ೨೪, ೨೫ ಅನುಕೂಲ. ಬರುವ ೯ನೇ ಗುರು ಭಾಗ್ಯವೃದ್ಧಿ ದ್ರವ್ಯ ಲಾಭ ಮಕ್ಕಳ ಉನ್ನತಿ ಮತ್ತು ಭ್ರಾತೃಪ್ರೇಮ ಇವುಗಳಿಗೆ ಉತ್ತಮ. ಆದರೆ ಅತಿ ಮಹತ್ವಾಕಾಂಕ್ಷೆ ಯಿಂದ ಸಿಕ್ಕುವ ಯಶಸ್ಸು ಮತ್ತು ಸುಖ ಬಹಳ ಕಡಮೆಯೆನಿಸಿ ಮನಸ್ಸು ಯಾವಾಗಲೂ ವಿಷಣ್ಣವುಳಿಯುವದು.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪೋಹರೆಯವರಿಂದ ಮುದ್ರಿಸಿ ಪ್ರಕಟವಾಯಿತು.